ಗುರುವಾರ, ಅಕ್ಟೋಬರ್ 6, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ

ಎಸ್‌ಬಿಐ ಪ್ರೊಬೆಷನರಿ ಆಫೀಸರ್ಸ್ ಹುದ್ದೆಗಳ ನೇಮಕಾತಿಗಾಗಿ ನಡೆಯುವ ಮುಖ್ಯಪರೀಕ್ಷೆ ಮತ್ತು ಸಂದರ್ಶನಗಳು ಹಾಗೂ ಹೊಸ ನಿಯಮಗಳ ಕುರಿತ ಮಾಹಿತಿ ಇಲ್ಲಿದೆ.

ಮೆಗಾ ದೀಪಾವಳಿ ಧಮಾಕಾ ಭೀಮದಲ್ಲಿ

30 ಸೆಪ್ಟೆಂಬರ್ – 30 ಅಕ್ಟೋಬರ್

*ಷರತ್ತು ಮತ್ತು ನಿಬಂಧನೆಗಳು ಅನ್ವಯ

ಚಿನ್ನದ ದರ ರೂ. 4199* ಮೇಲ್ಪಟ್ಟು ಪ್ರತಿ ಗ್ರಾಂಗೆ

ವಜ್ರ ಪ್ರತಿ ಕ್ಯಾರೆಟ್ ಮೇಲೆ ರೂ. 10,000 ವರೆಗೆ ಕಡಿತ

1 ಚಿನ್ನದ ನಾಣ್ಯ ಉಚಿತ ಪ್ರತಿ 10 ಗ್ರಾಂ ಚಿನ್ನದ ಖರೀದಿಯ ಮೇಲೆ

ಬೆಳ್ಳಿ ಮೇಕಿಂಗ್ ಶುಲ್ಕದ ಮೇಲೆ 50% ವರೆಗೆ ಕಡಿತ

HDFC BANK We understand your world

ಎಚ್‌ಡಿಎಫ್‌ಸಿ ಬ್ಯಾಂಕ್ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳ ಮೇಲೆ 5000 ರೂ. ವರೆಗೆ ಇನ್‌ಸ್ಟಂಟ್ ಡಿಸ್ಕೌಂಟ್*

HDFC BANK FESTIVE TREATS

BHIMA JEWELLERS

GOLD • DIAMONDS • SILVER • PLATINUM

SINCE 1925

ಬೆಂಗಳೂರು: ಡಿಕೆನ್ಸನ್ ರಸ್ತೆ • ಜಯನಗರ 3ನೇ ಬ್ಲಾಕ್ • ಕೋರಮಂಗಲ • ಹೆಚ್‌ಬಿಆರ್ ಲೇಔಟ್ • ರಾಜಾಜಿನಗರ • ಮಾರತಹಳ್ಳಿ

ಹೂಡಿ • ಮಲ್ಲೇಶ್ವರಂ • ಜಯನಗರ 4ನೇ ಬ್ಲಾಕ್ • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ • ಚೆನ್ನೈ • ರಾಜಮಂಡ್ರಿ

ಸ್ಥಳ ತಿಳಿಯಲು ಸ್ಕ್ಯಾನ್ ಮಾಡಿ

ಈಗ ಇಲ್ಲಿಯೂ ಲಭ್ಯವಿದೆ ▶ bhimagold.com

BHIMA Helpline Toll Free 1800-121-9076 (10:00am to 7:00pm)

ವಿಜಯದಶಮಿ: ಎಲ್ಲೆಡೆ ಸಂಭ್ರಮದ ಆಚರಣೆ

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಬುಧವಾರ ರೋಟರಿ ಬೆಂಗಳೂರು ಹನುಮಂತನಗರ ಹಾಗೂ ಸೃಷ್ಟಿ ಕೇಂದ್ರ ಆಯೋಜಿಸಿದ್ದ ಸೃಷ್ಟಿ ರೋಟರಿ ನವರಾತ್ರಿ ಉತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ನೃತ್ಯ ಪ್ರದರ್ಶನ ನೀಡಿದರು ಪ್ರಜಾವಾಣಿ ಚಿತ್ರ

ನೆಟ್ಟಕಲ್ಲಪ್ಪ ವೃತ್ತದ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಪೂಜೆ ಮಾಡಿಸಲು ವಾಹನಗಳನ್ನು ಸಾಲುಗಟ್ಟಿ ನಿಲ್ಲಿಸಿರುವ ಚಾಲಕರು —ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯದಶಮಿ ಹಬ್ಬವನ್ನು ನಗರದೆಲ್ಲೆಡೆ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಎರಡು ವರ್ಷಗಳಿಂದ ಕಳೆಗುಂದಿದ್ದ ಜೆ.ಸಿ.ನಗರ ದಸರಾ ಬುಧವಾರ ಮತ್ತೊಮ್ಮೆ ಕಳೆಗಟ್ಟಿ ಭಕ್ತರನ್ನು ಪುಳಕಿತಗೊಳಿಸಿತು.

ಜೆ.ಸಿ.ನಗರ ದಸರಾ ಮಹೋತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ದಸರಾ ಮೆರವಣಿಗೆ ಸಂಭ್ರಮದಿಂದ ನಡೆಯಿತು. ಅಲಂಕೃತ 118 ಪಲ್ಲಕ್ಕಿಗಳಲ್ಲಿ ಸಾಲು ಸಾಲಾಗಿ ಬಂದ ಮೂರ್ತಿಗಳನ್ನು ಕಂಡು ಭಕ್ತರು ಸಂಭ್ರಮಿಸಿದರು.

ಶಿವಾಜಿನಗರ, ಆರ್‌.ಟಿ. ನಗರ, ಲಕ್ಷ್ಮೀದೇವಮ್ಮ ಬ್ಲಾಕ್, ಸಿಬಿಐ ರಸ್ತೆ, ಮಠದಹಳ್ಳಿ, ಮೋತಿನಗರ, ಗಂಗೇನಹಳ್ಳಿ, ಸುಲ್ತಾನ್‌ಪಾಳ್ಯ, ಯಶವಂತಪುರ, ಹೆಬ್ಬಾಳ, ಗಂಗಾನಗರಗಳ ದೇವರ ಮೂರ್ತಿಗಳು ಅಲಂಕೃತಗೊಂಡ ರಥಗಳಲ್ಲಿ ಜೆ.ಸಿ. ನಗರದ ದಸರಾ ಮೈದಾನದತ್ತಾ ಸಾಗಿ ಬಂದವು.

ಮಧ್ಯ ರಾತ್ರಿ ಸುಮಾರಿಗೆ ಮೈದಾನಕ್ಕೆ ವಿವಿಧೆಡೆಯ ರಥಗಳು ಬಂದು ತಲುಪಿದ ನಂತರ ಬನ್ನಿಮರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆ ಕಣ್ತುಂಬಿಕೊಳ್ಳಲು ಜೆ.ಸಿ.ನಗರ ಮುಖ್ಯರಸ್ತೆ ಹಾಗೂ ಅರಮನೆ ರಸ್ತೆಯ ಇಕ್ಕೆಲಗಳಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು.

ಹೂವಿನ ಪಲ್ಲಕ್ಕಿ, ಪೂಜಾ ಕುಣಿತ, ಕೀಲು ಕುದುರೆ, ಕರಡಿ ಮೇಳ, ಗೊರವರ ಕುಣಿತ, ಪಟ ಕುಣಿತ, ಡೊಳ್ಳು ಕುಣಿತ ಸೇರಿ ಹಲವು ಜನಪದ ಕಲಾತಂಡಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದ್ದವು.

ಪಂಜಿನ ಕವಾಯತುಗಳು, ನಾನಾ ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜನರನ್ನು ರಂಜಿಸಿದವು. ವಿದ್ಯಾಗಣಪತಿ ದೇವಸ್ಥಾನದ ಬಳಿ ಪಟಾಕಿಗಳನ್ನು ಸಿಡಿಸಲಾಯಿತು.

ವಿಜಯದಶಮಿ ಪ್ರಯುಕ್ತ ಬುಧವಾರ ಮುಂಜಾನೆಯಿಂದಲೇ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆದವು. ಭಕ್ತಾದಿಗಳು ಭಾರಿ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಜನರು ಬನ್ನಿ ಎಲೆಗಳನ್ನು ನೀಡಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ದೇವಸ್ಥಾನಗಳಲ್ಲಿ ನಡೆದ ಪಲ್ಲಕ್ಕಿ ಉತ್ಸವಗಳಲ್ಲಿ ಭಾಗಿಯಾಗಿ ಸಂಭ್ರಮಿಸಿದರು.

ಯಶವಂತಪುರ ವೃತ್ತ ಬಳಿಯ ಗಾಯತ್ರಿ ದೇವಸ್ಥಾನ, ಚಿನ್ನಯ್ಯನಪಾಳ್ಯದ ಮಾರಮ್ಮ ಆಂಜನೇಯಸ್ವಾಮಿ ದೇವಾಲಯ, ಜೆ.ಪಿ ನಗರದ ಬ್ರಹ್ಮ ಮಹೇಶ್ವರ ವಿಷ್ಣು ದೇವಸ್ಥಾನ, ಎಚ್‌ಎಂಟಿ ಬಡಾವಣೆಯ ಚೌಡೇಶ್ವರಿ ದೇವಾಲಯ, ರಾಜರಾಜೇಶ್ವರಿ ದೇವಸ್ಥಾನ, ಶಂಕರಪುರದ ಮಹೇಶ್ವರಮ್ಮ ದೇವಿ ದೇವಾಲಯ, ಕೃಷ್ಣರಾಜಪುರದ ದುರ್ಗಾ ಮಹೇಶ್ವರಮ್ಮ ದೇವಾಲಯ, ಶಂಕರಪುರದ ಶೃಂಗೇರಿ ಶಂಕರ ಮಠ, ಜೆ.ಪಿ ನಗರದ ವಿಜಯಗಣಪತಿ ಮತ್ತು ಶಾರದಾ ಚಂದ್ರಮೌಳೀಶ್ವರ ದೇವಸ್ಥಾನ, ಕೋಣನಕುಂಟೆಯ ಮಾತಾ ಅನ್ನಪೂರ್ಣೇಶ್ವರಿ ದೇವಾಲಯ, ನಂದಿನಿ ಬಡಾವಣೆಯ ದುರ್ಗಾಪರಮೇಶ್ವರಿ ದೇವಾಲಯ ಸೇರಿದಂತೆ ವಿವಿಧೆಡೆ ವಿಶೇಷ ಪೂಜೆಗಳು ನಡೆದವು.

ಜೆ.ಸಿ.ನಗರದ ಮುನಿರೆಡ್ಡಿ ಪಾಳ್ಯದಲ್ಲಿ ಬುಧವಾರ ರಾತ್ರಿ ನಡೆದ ದಸರಾ ಮೆರವಣಿಗೆಯಲ್ಲಿ ಗಮನ ಸೆಳೆದ ಪಲ್ಲಕ್ಕಿ ಉತ್ಸವ —ಪ್ರಜಾವಾಣಿ ಚಿತ್ರ: ಎಂ.ಎಸ್‌.ಮಂಜುನಾಥ್

ಯುದ್ಧದಲ್ಲಿ ಗೆದ್ದ ಸಂಭ್ರಮ

ಒಂದನೇ ಮಹಾಯುದ್ಧದಲ್ಲಿ (1914–1918) ಜರ್ಮನಿ ವಿರುದ್ಧ ಹೋರಾಡಲು ಮೈಸೂರು ಮಹಾರಾಜರ ನೆರವನ್ನು ಬ್ರಿಟೀಷರು ಪಡೆಯುತ್ತಾರೆ. ಮೈಸೂರು ಮಹಾರಾಜರು ಯೋಧರು ಮತ್ತು ಕುದುರೆಗಳನ್ನು ಕಳುಹಿಸುತ್ತಾರೆ. ಆ ಯುದ್ಧದಲ್ಲಿ ಗೆದ್ದು ಬಂದ ಸೈನಿಕರು ಹರಕೆ ತೀರಿಸಲು ಆರಂಭವಾದ ಜೆ.ಸಿ.ನಗರ ದಸರಾ ವಾಡಿಕೆಯಾಗಿ ಇಂದಿಗೂ ಮುಂದುವರಿದಿದೆ.

ಯುದ್ಧಕ್ಕೆ ಹೋಗುವ ಮುನ್ನ ಸೈನಿಕರು ಗುಂಡುಮುನೇಶ್ವನ ಬಳಿ ಹರಕೆ ಹೊತ್ತಿದ್ದರು. ಗೆದ್ದು ಬಂದ ಬಳಿಕ ದಸರಾ ಆಚರಣೆ ಮೂಲಕ ಹರಕೆ ತೀರಿಸಿದರು. ಅದು ಈಗಲೂ ಮುಂದುವರಿದಿದೆ ಎಂದು ಜೆ.ಸಿ. ನಗರ ದಸರಾ ಆಚರಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಪ್ರಕಾಶ್ ರಾವ್ ವಿವರಿಸಿದರು.

ವೈಭವದ ದುರ್ಗಾ ಪೂಜೆ

ಎರಡು ವರ್ಷಗಳ ಬಳಿಕ ನಗರದಲ್ಲಿ 150ಕ್ಕೂ ಹೆಚ್ಚು ಕಡೆ ವಿಜೃಂಭಣೆಯಿಂದ ದುರ್ಗಾ ಪೂಜೆ ಆಚರಿಸಿದ ಭಕ್ತರು, ಬುಧವಾರ ವಿಸರ್ಜನೆ ಮಾಡಿದರು.

ಗಣಪತಿ ಮೂರ್ತಿಯಂತೆಯೇ ದುರ್ಗಾ ಮೂರ್ತಿಯನ್ನೂ ಪೆಂಡಾಲ್‌ಗಳಲ್ಲಿ ಪ್ರತಿಷ್ಠಾಪಿಸಲಾಗಿತ್ತು. ಮ್ಯಾನ್ಪೋ ಕನ್ವೆನ್ಷನ್ ಸೆಂಟರ್‌ನಲ್ಲಿ ಐದು ದಿನಗಳ ಕಾಲ ಅದ್ಧೂರಿಯಿಂದ ಪೂಜಾ ಕೈಂಕರ್ಯಗಳು ನಡೆದವು. ಪ್ರತಿದಿನ 50 ಸಾವಿರಕ್ಕೂ ಹೆಚ್ಚು ಜನ ದುರ್ಗಾ ಪೂಜೆಯಲ್ಲಿ ಪಾಲ್ಗೊಂಡು ಭಕ್ತಿಭಾವ ಮೆರೆದರು.

ಬುಧವಾರ ದುರ್ಗಾ ಮೂರ್ತಿಯ ಮೆರವಣಿ-ಗೆಯಲ್ಲಿ ಭಕ್ತರು ಕುಣಿದು ಕುಪ್ಪಳಿಸಿದರು. ಬಳಿಕ ಹಲಸೂರು ಮತ್ತು ಸ್ಯಾಂಕಿ ಕೆರೆಗಳಲ್ಲಿ ಮೂರ್ತಿಗಳನ್ನು ವಿಸರ್ಜನೆ ಮಾಡಲಾಯಿತು.

ಬ್ಯಾಟರಾಯನಪುರ ಕ್ಷೇತ್ರ, ಜಕ್ಕೂರುಹೆಗಡೆನಗರ ಜೋಡಿರಸ್ತೆಯ ಎಂ.ಸಿ.ಇ.ಸಿ. ಎಚ್‌.ಎಸ್ ಬಡಾವಣೆ ಸಮೀಪದಲ್ಲಿ ಬಿಜೆಪಿ ಮುಖಂಡ ಕೆ.ಎ.ಮುನೀಂದ್ರಕುಮಾರ್ ನೇತೃತ್ವದಲ್ಲಿ ಆಯೋಜಿಸಿದ್ದ ಅಖಂಡ ಭಾರತ ನವರಾತ್ರಿ ಮಹೋತ್ಸವದ ಪ್ರಯುಕ್ತ ದುರ್ಗಾದೇವಿ ಮೂರ್ತಿಯ ಮೆರವಣಿಗೆ ಮತ್ತು ವಿಸರ್ಜನಾ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ದುರ್ಗಾದೇವಿ ಮೆರವಣಿಗೆ, ವಿಸರ್ಜನೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ, ಜಕ್ಕೂರು-ಹೆಗಡೆನಗರ ಜೋಡಿರಸ್ತೆಯ ಎಂ.ಸಿ.ಇ.ಸಿ.ಎಚ್‌.ಎಸ್ ಬಡಾವಣೆ ಸಮೀಪದಲ್ಲಿ ಬಿಜೆಪಿ ಮುಖಂಡ ಕೆ.ಎ-.ಮುನೀಂದ್ರಕುಮಾರ್ ನೇತೃತ್ವದಲ್ಲಿ ಆಯೋಜಿಸಿದ್ದ ಅಖಂಡ ಭಾರತ ನವರಾತ್ರಿ ಮಹೋತ್ಸವದ ಪ್ರಯುಕ್ತ ದುರ್ಗಾದೇವಿ ಮೂರ್ತಿಯ ಮೆರವಣಿಗೆ ಮತ್ತು ವಿಸರ್ಜನಾ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ನವದುರ್ಗೆಯರನ್ನು 9 ದಿನಗಳ ಕಾಲ ಪ್ರತಿಷ್ಠಾಪಿಸಿ, ಸಾರ್ವಜನಿಕರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. 16 ಅಡಿ ಎತ್ತರವಿದ್ದ ದುರ್ಗಾದೇವಿ ಮೂರ್ತಿಗೆ ಬೆಳಿಗ್ಗೆ 11.30ಕ್ಕೆ ಪೂಜೆ ನೆರವೇರಿಸಿದ ನಂತರ ಜಕ್ಕೂರು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಭಕ್ತರು ದೇವಿಗೆ ಹಣ್ಣು-ಕಾಯಿ ಅರ್ಪಿಸಿ, ದರ್ಶನ ಪಡೆದರು.

ತಮಟೆ ಸೇರಿ ವಿವಿಧ ಬ್ಯಾಂಡ್‌ಗಳು ಮೆರವಣಿಗೆಗೆ ವಿಶೇಷ ಮೆರುಗು ನೀಡಿದವು. ಸಂಜೆ 4 ಗಂಟೆಗೆ ಜಕ್ಕೂರು ಕೆರೆಯಲ್ಲಿ ದೇವಿಯ ಮೂರ್ತಿಯನ್ನು ವಿಸರ್ಜಿಸಲಾಯಿತು.

ಬಿಜೆಪಿ ಮುಖಂಡರಾದ ಕೆ.ಎ.ಮು-ನೀಂದ್ರಕುಮಾರ್, ಸತ್ಯನಾರಾಯಣ ದೀಪು, ಓಂಪ್ರಕಾಶ್ ಪಟೇಲ್, ಶ್ರೀಕಾಂತ್ ರಾವ್ ಮತ್ತಿತರರು ಉಪಸ್ಥಿತರಿದ್ದರು.

ಸರತಿ ಸಾಲಿನಲ್ಲಿ ವಾಹನ ಪೂಜೆ

ಬೆಂಗಳೂರು: ಆಯುಧ ಪೂಜೆಯ ದಿನ ವಾಹನಗಳಿಗೆ ಬಾಳೆ ಕಂದು, ಹೂವಿನ ಮಾಲೆ ಹಾಕಿ ಅಲಂಕರಿಸಿ ಪೂಜೆ ಸಲ್ಲಿಸಿದರು.

ದೇವಾಲಯಗಳಲ್ಲಿ ವಾಹನಗಳ ಪೂಜೆಗಾಗಿ ವಿಶೇಷ ಏರ್ಪಾಡು ಮಾಡಲಾಗಿತ್ತು. ಸರತಿ ಸಾಲಿನಲ್ಲಿ ನಿಂತು ವಾಹನಗಳಿಗೆ ಪೂಜೆ ಮಾಡಿಸಿಕೊಳ್ಳುವ ದೃಶ್ಯ ಸಾಮಾನ್ಯವಾಗಿತ್ತು. ಆಯುಧಪೂಜೆ ದಿನ ವಾಹನಕ್ಕೆ ಪೂಜೆ ಮಾಡಿಸಲು ಸಾಧ್ಯವಾಗದವರು ಬುಧವಾರ ಪೂಜೆ ಮಾಡಿಸಿಕೊಂಡರು.

ಏಕೀಕೃತ ನಿರ್ವಹಣಾ ವ್ಯವಸ್ಥೆಯ ಫಲ

ಕಾಲೇಜಿಗೆ ಗೈರಾದರೂ ಶೇ 75 ಹಾಜರಾತಿ!

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆ ಜಾರಿಗೆ ತಂದ ‘ವಿಶ್ವವಿದ್ಯಾಲಯ, ಪದವಿ ಕಾಲೇಜುಗಳ ಏಕೀಕೃತ ನಿರ್ವಹಣಾ ವ್ಯವಸ್ಥೆ’ಯ (ಯುಯುಸಿಎಂಎಸ್) ಫಲವಾಗಿ ತರಗತಿಗಳಿಗೆ ಸತತ ಗೈರಾಗುವ ವಿದ್ಯಾರ್ಥಿಗಳಿಗೂ ಶೇ 75ರಷ್ಟು ಹಾಜರಾತಿ ಭಾಗ್ಯ ಲಭಿಸುತ್ತಿದೆ.

ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಪ್ರತಿ ಸೆಮಿಸ್ಟರ್ ಪರೀಕ್ಷೆಗೆ ಕುಳಿತುಕೊಳ್ಳುವ ಅರ್ಹತೆ ಪಡೆಯಲು ಆಯಾ ಅವಧಿಯಲ್ಲಿ ನಡೆಯುವ ಶೇ 75ರಷ್ಟು ತರಗತಿಗಳಿಗೆ ಹಾಜರಾಗುವುದು ಕಡ್ಡಾಯ. ಆದರೆ, ಪದವಿ ಕಾಲೇಜುಗಳಲ್ಲಿ ಪೂರ್ಣ ತರಗತಿಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆ ತುಂಬ ವಿರಳ. ತಮಗೆ ಕಷ್ಟವೆನಿಸುವ, ಆಸಕ್ತಿ ಮೂಡಿಸುವ ಪ್ರಾಧ್ಯಾಪಕರ ತರಗ-ತಿಗಳಿಗಷ್ಟೇ ವಿದ್ಯಾರ್ಥಿಗಳು ಒಲವು ತೋರುತ್ತಾರೆ. ಹಾಗಾಗಿ, ಹಾಜರಾತಿ ಅತ್ಯಂತ ಕಡಿಮೆ ಇರುತ್ತದೆ ಎನ್ನುವುದು ಕಾಲೇಜು ಆಡಳಿತ ಮಂಡಳಿಗಳ ವಾದ.

ಯುಯುಸಿಎಂಎಸ್ ಪೋರ್ಟಲ್ ಜಾರಿಗೂ ಮೊದಲು ಶೇ 75ರಷ್ಟು ಹಾಜರಾತಿ ಕಡ್ಡಾಯವಿದ್ದರೂ, ವಿದ್ಯಾರ್ಥಿಗಳ ಆಸಕ್ತಿ, ಹಿನ್ನೆಲೆ, ನಡವಳಿಕೆ, ಕಲಿಕಾ ಮಟ್ಟವನ್ನು ಗಮನಿಸಿ, ಪರೀಕ್ಷೆಗೆ ಹಾಲ್ ಟಿಕೆಟ್ ನೀಡುವ ಅಥವಾ ನೀಡದಿರುವ ನಿರ್ಧಾರವನ್ನು ಆಯಾ ಕಾಲೇಜುಗಳೇ ತೆಗೆದುಕೊಳ್ಳುತ್ತಿದ್ದವು. ಮುಂದಿನ ಸೆಮಿಸ್ಟರ್‌ಗೆ ಕಡ್ಡಾಯವಾಗಿ ಹಾಜರಾಗಬೇಕು ಎನ್ನುವ ಷರತ್ತು-ಗಳನ್ನು ವಿಧಿಸಿ, ಪರೀಕ್ಷೆಗೆ ಅವಕಾಶ ನೀಡಲಾಗುತ್ತಿತ್ತು. ಯುಯುಸಿಎಂಎಸ್ ಜಾರಿಗೆ ಬಂದ ನಂತರ ಅಂತಹ ಅವಕಾಶ ಇಲ್ಲವಾಗಿದೆ ಎನ್ನುತ್ತಾರೆ ಬೆಂಗಳೂರಿನ ಪ್ರಮುಖ ಖಾಸಗಿ ಕಾಲೇಜಿನ ಆಡಳಿತ ಮಂಡಳಿ ಮುಖ್ಯಸ್ಥರು.

‘ಪ್ರತಿ ಸೆಮಿಸ್ಟರ್‌ನಲ್ಲೂ ಶೇ 40 ಆಂತರಿಕ ಅಂಕಗಳನ್ನು ನಿಗದಿ ಮಾಡಲಾಗಿದೆ. ಎರಡು ಕಿರು ಪರೀಕ್ಷೆಗಳಿಂದ 20, ಅಸೈನ್‌ಮೆಂಟ್, ಸೆಮಿನಾರ್‌ಗಳಿಗೆ ತಲಾ 10 ಅಂಕಗಳನ್ನು ನೀಡುತ್ತಿದ್ದೇವೆ. ಉಳಿದ 60 ಅಂಕಗಳಿಗೆ ಪರೀಕ್ಷೆ ಬರೆಯಬೇಕು. ಯುಯುಸಿಎಂಎಸ್ ಪೋರ್ಟಲ್‌ನಲ್ಲಿ ಹಾಜರಾತಿ ನಮೂದಿಸದೇ ಆಂತರಿಕ ಅಂಕಗಳನ್ನು ಅಪ್‌ಲೋಡ್ ಮಾಡಲು ಸಾಧ್ಯವಾಗುವುದಿಲ್ಲ. ಹಾಗಾಗಿ, ತರಗತಿಗಳಿಗೆ ಗೈರಾದವರಿಗೂ ಶೇ 75 ಹಾಜರಾತಿ ನೀಡುತ್ತಿದ್ದೇವೆ. ಇಲ್ಲದಿದ್ದರೆ ಶೇ 20ರಷ್ಟು ವಿದ್ಯಾರ್ಥಿಗಳೂ ಪರೀಕ್ಷೆಗೆ ಅರ್ಹರಾಗುವುದಿಲ್ಲ’ ಎಂದು ಬೆಂಗಳೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರೊಬ್ಬರು ಮಾಹಿತಿ ನೀಡಿದರು.

ಹಲವು ವಿಷಯಗಳ ವಿಭಾಗಗಳು ವಿದ್ಯಾರ್ಥಿಗಳಿಲ್ಲದೇ ಬಾಗಿಲು ಮುಚ್ಚುವ ಸ್ಥಿತಿಯಲ್ಲಿವೆ. ಹಾಜರಾತಿ ನೀಡದೆ ಇದ್ದರೆ ಕಾಲೇಜು ನಡೆಸುವುದೇ ಕಷ್ಟ ಎನ್ನುವ ಆತಂಕ ವ್ಯಕ್ತಪಡಿಸಿದರು.

ಪ್ರಜಾವಾಣಿ ವಿಶೇಷ

ಪ್ರಾಧ್ಯಾಪಕರ ಬಳಿ ಎಲ್‌ಎಂಎಸ್ ಐಡಿ

ಕಾಲೇಜು ಶಿಕ್ಷಣ ಇಲಾಖೆ ಜಾರಿಗೆ ತಂದಿರುವ ಕಲಿಕಾ ನಿರ್ವಾಹಣಾ ವ್ಯವಸ್ಥೆ ಬೋಧನೆ, ಕಲಿಕೆಗೆ ಉತ್ತೇಜನ ನೀಡಿದರೂ, ಬಳಸುವ ವಿದ್ಯಾರ್ಥಿಗಳ ಸಂಖ್ಯೆ ಅತ್ಯಂತ ಕಡಿಮೆ ಇದೆ.

ಸಾಕಷ್ಟು ಹಣ ಖರ್ಚು ಮಾಡಿ ಅಳವಡಿಸಿದ ಈ ಎಲ್‌ಎಂಎಸ್ ಅನ್ನು ಗರಿಷ್ಠಮಟ್ಟದಲ್ಲಿ ಬಳಸದ ಕಾಲೇಜುಗಳ ಪ್ರಾಂಶುಪಾಲರು, ಪ್ರಾಧ್ಯಾಪಕರನ್ನು ಹೊಣೆ ಮಾಡುವುದಾಗಿ ಈಚೆಗೆ ಆಯುಕ್ತರು ಎಚ್ಚರಿಸಿದ ನಂತರ ಪ್ರಾಧ್ಯಾಪಕರೇ ಎಲ್ಲ ವಿದ್ಯಾರ್ಥಿಗಳ ಐಡಿ, ಪಾಸ್‌ವರ್ಡ್ ತಮ್ಮ ಬಳಿ ಇಟ್ಟುಕೊಂಡು ನಿತ್ಯವೂ ಲಾಗಿನ್ ಆಗುತ್ತಿದ್ದಾರೆ. ಎಲ್ಲರೂ ಬಳಕೆ ಮಾಡುತ್ತಿದ್ದಾರೆ ಎಂದು ಇಲಾಖೆಗೆ ಲೆಕ್ಕ ತೋರಿಸುತ್ತಿದ್ದಾರೆ. ಈ ಕುರಿತು ಹಲವು ಅಧ್ಯಾಪಕರು ‘ಪ್ರಜಾವಾಣಿ’ ಜತೆ ಮಾಹಿತಿ ಹಂಚಿಕೊಂಡಿದ್ದಾರೆ.

ಅಂಕಿ-ಅಂಶಗಳು

3,800 ಯುಯುಸಿಎಂಎಸ್ ಬಳಸುವ ಕಾಲೇಜುಗಳು

15.21 ಲಕ್ಷ ಹೊಸ ಪೋರ್ಟಲ್‌ನಲ್ಲಿ ನಮೂದಾದ ವಿದ್ಯಾರ್ಥಿಗಳು

18,340 ಯುಯುಸಿಎಂಎಸ್ ನಿರ್ವಹಣೆ ಮಾಡುವ ಪ್ರಾಧ್ಯಾಪಕರು

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

H.O:#156, 8th Main, 17th Cross, Malleswaram, Bengaluru - 560 055. Ph: 080- 23341972/ 2344 9450/ 2344 2648

ಸ್ಥಿರಾಸ್ತಿ ಸ್ವಾಧೀನತೆಯ ಪ್ರಕಟಣೆ

ಕೆಳಸಹಿದಾರರು **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯಾಗಿದ್ದು, **ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002** (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ:18-07-2022ರಂದು ಈ ಕೆಳಗಿನ ಸಾಲಗಾರರರಾದ ಶ್ರೀ **ರಂಗರಾಜ್.ಆರ್ S/o ಶ್ರೀ ರಂಗಯ್ಯ, ನಂ.3657/ಎ.11ನೇ ಕ್ರಾಸ್, ಹೊಸ 5ನೇ ಕ್ರಾಸ್, ಗಾಯತ್ರಿನಗರ, ಬೆಂಗಳೂರು-5600221** ಇವರಿಗೆ ದಿನಾಂಕ 18-07-2022ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.30,62,413/- + ರೂ.9,68,479/- ಒಟ್ಟು ರೂ.40,55,892/- (ನಲವತ್ತು ಲಕ್ಷ ಐವತ್ತೈದು ಸಾವಿರದ ಎಂಟುನೂರ ತೊಂಬತ್ತೆರಡು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.
ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 30-09-2022 ರಂದು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.
ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ದಿನಾಂಕ 30-06-2022ರವರೆಗೆ ಬರಬೇಕಾದ ಬಾಕಿ ರೂ. **ರೂ.30,62,413/- + ರೂ.9,68,479/- ಒಟ್ಟು ರೂ.40,55,892/- (ನಲವತ್ತು ಲಕ್ಷ ಐವತ್ತೈದು ಸಾವಿರದ ಎಂಟುನೂರ ತೊಂಬತ್ತೆರಡು ರೂಗಳು ಮಾತ್ರ)** ಮತ್ತು (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು

ಸ್ಥಿರ ಆಸ್ತಿಯ ವಿವರ

ಹೊಸ ನಂ.4, ಹಳೆ ನಂ. 3797/ಎ, ‘ಬಿ’ ಬ್ಲಾಕ್, ಸಿಐಟಿಬಿ ನಿರ್ಮಿತ, 6ನೇ ಕ್ರಾಸ್, ರಾಜಾಜಿನಗರ 2ನೇ ಹಂತ, ಸುಬ್ರಮನ್ಯನಗರ, ಬೆಂಗಳೂರು, ಬಿಬಿಎಂಪಿ ವಾರ್ಡ್,ನಂ.9(ಸುಬ್ರಮಣ್ಯನಗರ)(ಪಿಐಡಿ ನಂ. 9-51-4) ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 45 ಅಡಿ: ಚಕ್ಕುಬಂದಿ: ಪೂರ್ವಕ್ಕೆ : ನಿವೇಶನ ನಂ.3707/ಬಿ; ಪಶ್ಚಿಮಕ್ಕೆ : ನಿವೇಶನ ನಂ. 3797; ಉತ್ತರಕ್ಕೆ : ನಿವೇಶನ ನಂ. 3796; ದಕ್ಷಿಣಕ್ಕೆ: ರಸ್ತೆ.

ಕೆಳಸಹಿದಾರರು **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯಾಗಿದ್ದು, **ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002** (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ 05-07-2022ರಂದು ಈ ಕೆಳಗಿನ ಸಾಲಗಾರರರಾದ ಶ್ರೀ **ಮೂಡಲಗಿರಿಯಪ್ಪ.ಕೆ.ಎಲ್. S/o ಶ್ರೀ ತಿಮ್ಮೇಗೌಡ, ನಂ.378/ಎ, 8ನೇ ‘ಸಿ’ಮೈನ್, ‘ಎ’ ಬ್ಲಾಕ್, 2ನೇ ಹಂತ, ರಾಜಾಜಿನಗರ, ಬೆಂಗಳೂರು-560055** ಇವರಿಗೆ ದಿನಾಂಕ 05-07-2022ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.21,79,674/-+ರೂ.12,22,903/-+27,74,573/=+ರೂ.9,18,119/-+ರೂ.10,67.452/-+ರೂ6,25,521/-ಒಟ್ಟು ರೂ.88,13,242/-/- (ಎಂಬತ್ತೆಂಟು ಲಕ್ಷ ಹದಿಮೂರು ಸಾವಿರದ ಇನ್ನೂರ ನಲವತ್ತೆರಡು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.
ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 30-09-2022 ರಂದು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.
ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ದಿನಾಂಕ 30-06-2022ರವರೆಗೆ ಬರಬೇಕಾದ ಬಾಕಿ **ರೂ.21,79,674/-+ರೂ.12,22,903/-+ 27,74,573/= + ರೂ.9,18,119/- +ರೂ.10,67.452/- +ರೂ6,25,521/-ಒಟ್ಟು ರೂ.88,13,242/-/- (ಎಂಬತ್ತೆಂಟು ಲಕ್ಷ ಹದಿಮೂರು ಸಾವಿರದ ಇನ್ನೂರ ನಲವತ್ತೆರಡು ರೂಗಳು ಮಾತ್ರ)** ಪಾವತಿಸಬೇಕಾಗುವುದು. (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು

ಸ್ಥಿರ ಆಸ್ತಿಯ ವಿವರ

ಹೊಸ ನಂ16/1, , ಹಳೆ ನಂ. 278/ಎ, 8ನೇ ‘ಸಿ’ ಮೈನ್, ‘ಎ’ಬ್ಲಾಕ್, ಸುಬ್ರಮಣ್ಯನಗರ, ರಾಜಾಜಿನಗರ 2ನೇ ಹಂತ, ಬೆಂಗಳೂರು ವಾರ್ಡ್ ನಂ.9(ಸುಬ್ರಮಣ್ಯನಗರ) (ಪಿಐಡಿ ನಂ. 9-12-16/1) ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 40+40/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 25 ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ; ಪಶ್ಚಿಮಕ್ಕೆ: ಸೈಟ್ ನಂ. 280; ಉತ್ತರಕ್ಕೆ: ಸೈಟ್ ನಂ.278/ಡಿ ಮತ್ತು278/ಬಿ; ದಕ್ಷಿಣಕ್ಕೆ: ಸೈಟ್ ನಂ.279/ಎ

ಕೆಳಸಹಿದಾರರು **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯಾಗಿದ್ದು, **ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002** (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ: 18-07-2022ರಂದು ಈ ಕೆಳಗಿನ ಸಾಲಗಾರರರಾದ **ಶ್ರೀ ಲಕ್ಷ್ಮೀನಾರಾಯಣ ಸಿ S/o ಶ್ರೀ ಚಿಕ್ಕಣ್ಣ.ಹೆಚ್ ನಂ.694/ ಕೆಂಪಮ್ಮ ನಿಲಯ ನೇತಾಜಿನಗರ, 1ನೇ ಕ್ರಾಸ್, ಜಾಲಹಳ್ಳಿ ಕ್ರಾಸ್, ಬೆಂಗಳೂರು-560 057** ಇವರಿಗೆ ದಿನಾಂಕ 18-07-2022ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.17,04,539/- + ರೂ.2,31,897/- ಒಟ್ಟು ರೂ.19,61,436/-(ಹತ್ತೊಂಬತ್ತು ಲಕ್ಷ ಅರವಂತ್ತೊಂದು ಸಾವಿರದ ನಾಲ್ಕು ನೂರ ಮೂವತ್ತಾರು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.
ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 30-09-2022 ರಂದು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.
ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ದಿನಾಂಕ 30-06-2022 ರವರೆಗೆ ಬರಬೇಕಾದ ಬಾಕಿ **ರೂ.17,04,539/- + ರೂ.2,31,897/- ಒಟ್ಟು ರೂ.19,61,436/-(ಹತ್ತೊಂಬತ್ತು ಲಕ್ಷ ಅರವಂತ್ತೊಂದು ಸಾವಿರದ ನಾಲ್ಕು ನೂರ ಮೂವತ್ತಾರು ರೂಗಳು ಮಾತ್ರ)** (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ) ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

ಸ್ಥಿರ ಆಸ್ತಿಯ ವಿವರ

ಸರ್ವೆ ನಂ.9/1ಬಿ & 9/2ಬಿ ನಂ.6, ದಾಸರಹಳ್ಳಿ ಸಿಎಂಸಿ ವಾರ್ಡ್ ನಂ.20,ಹೊಸ ಬಿಬಿಎಂಪಿ ವಾರ್ಡ್ ಮಂ.18, ಖಾತ ನಂ.23, ಚಿಕ್ಕಸಂದ್ರ ವಿಲೇಜ್, ಯಶವಂತಪುರ ಹೋಬ್ಳಿ, ಬೆಂಗಳೂರು ತಾಲ್ಲೂಕು ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 50 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿ ಒಟ್ಟು 1599 ಚದರಡಿ: ಚಕ್ಕುಬಂದಿ: ಪೂರ್ವಕ್ಕೆ : ವಿ ಪಿ ಕಾಲೋನಿ; ಪಶ್ಚಿಮಕ್ಕೆ : ರಸ್ತೆ; ಉತ್ತರಕ್ಕೆ : ಸದಾನಂದ ರವರ ನಿವೇಶನ ನಂ. 05; ದಕ್ಷಿಣಕ್ಕೆ: ಕೃಷ್ಣರವರ ನಿವೇಶನ ನಂ.02

ಕೆಳಸಹಿದಾರರು **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯಾಗಿದ್ದು, **ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002** (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ: 18-07-2022ರಂದು ಈ ಕೆಳಗಿನ ಸಾಲಗಾರರರಾದ **ಶ್ರೀ ಜಯರಾಮ್.ಆರ್ S/o** ರಂಗಪ್ಪ **ನಂ.4279, 3ನೇ ಮೈನ್ ರಸ್ತೆ, ಸುಬ್ರಮಣ್ಯನಗರ; ಬೆಂಗಳೂರು-560 021** ಇವರಿಗೆ ದಿನಾಂಕ 18-07-2022ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.27,49,360/- + ರೂ.4,00,053/- ಒಟ್ಟು ರೂ.31,74,413/-(ಮೂವತ್ತೊಂದು ಲಕ್ಷ ಎಪ್ಪತ್ತನಾಲ್ಕು ಸಾವಿರದ ನಾಲ್ಕು ನೂರ ಹದಿಮೂರು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.
ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 30-09-2022 ರಂದು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.
ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ದಿನಾಂಕ 30-06-2022 ರವರೆಗೆ ಬರಬೇಕಾದ ಬಾಕಿ **ರೂ.27,49,360/- + ರೂ.4,00,053/- ಒಟ್ಟು ರೂ.31,74,413/-(ಮೂವತ್ತೊಂದು ಲಕ್ಷ ಎಪ್ಪತ್ತನಾಲ್ಕು ಸಾವಿರದ ನಾಲ್ಕು ನೂರ ಹದಿಮೂರು ರೂಗಳು ಮಾತ್ರ)** (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ) ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

ಸ್ಥಿರ ಆಸ್ತಿಯ ವಿವರ

ನಂ. 19/, ಹಳೇ ನಂ.17, ಮುನೇಶ್ವ ಟೆಂಪಲ್ ರಸ್ತೆ ‘ಎ’ ಬ್ಲಾಕ್, ಸುಬ್ರಮಣ್ಯನಗರ, ಬೆಂಗಳೂರು, ಬಿಬಿಎಂಪಿ ವಾರ್ಡ್ ನಂ.9(ಸುಬ್ರಮಣ್ಯನಗರ) (ಪಿಐಡಿ ನಂ. 9-33-19) ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ (58+52)/2 ಅಡಿ: ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ; ಪಶ್ಚಿಮಕ್ಕೆ : ನಂಜಪ್ಪರವರ ಮನೆ; ಉತ್ತರಕ್ಕೆ : ಶಾಂತಮ್ಮ ನವರ ಮನೆ; ದಕ್ಷಿಣಕ್ಕೆ: ರಸ್ತೆ.

ಕೆಳಸಹಿದಾರರು **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯಾಗಿದ್ದು, **ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002** (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ: 11-07-2022ರಂದು ಈ ಕೆಳಗಿನ ಸಾಲಗಾರರರಾದ **ಶ್ರೀಮತಿ ಗೌರಮ್ಮ**, ಶ್ರೀ ಸುಂದರ್.ಎನ್ ರವರ ಧರ್ಮಪತ್ನಿ **ನಂ.209/16, 12ತಹ ‘ಬಿ’ ಕ್ರಾಸ್, ವಯ್ಯಾಲಿಕಾವಲ್, ಬೆಂಗಳೂರು-560 003** ಇವರಿಗೆ ದಿನಾಂಕ 11-07-2022ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.63,83,599/- (ಅರವತ್ತಮೂರ ಲಕ್ಷ ಎಂಬತ್ತಮೂರು ಸಾವಿರದ ಐದುನೂರ ತೊಂಬತ್ತೊಂಬತ್ತು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.
ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 30-09-2022 ರಂದು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.
ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ದಿನಾಂಕ 30-06-2022 ರವರೆಗೆ ಬರಬೇಕಾದ ಬಾಕಿ **ರೂ.63,83,599/- (ಅರವತ್ತಮೂರು ಲಕ್ಷ ಎಂಬತ್ತಮೂರು ಸಾವಿರದ ಐದುನೂರ ತೊಂಬತ್ತು ರೂಗಳು ಮಾತ್ರ)** (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ) ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

ಸ್ಥಿರ ಆಸ್ತಿಯ ವಿವರ

ಹೊಸ ನಂ. 59/, ಹಳೇ ನಂ.209/59, 12ನೇ ‘ಬಿ’ ಕ್ರಾಸ್, ಕೋದಂಡರಾಮಪುರ, ವಯ್ಯಾಲಿಕಾವಲ್, ಬೆಂಗಳೂರು, ಬಿಬಿಎಂಪಿ ವಾರ್ಡ್ ನಂ.65 (ಕಾಡುಮಲ್ಲೇಶ್ವರ) (ಪಿಐಡಿ ನಂ.5-38-59) (ಹೊಸ ಪಿಐಡಿ ನಂ. 065/ W 0322-28) ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 23.6 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 35 ಅಡಿ: ಚಕ್ಕುಬಂದಿ: ಪೂರ್ವಕ್ಕೆ : ಮೂಡಲಯ್ಯ ನವರ ಆಸ್ತಿ ಪಶ್ಚಿಮಕ್ಕೆ : ಸಿ ಐ ಟಿ ಬಿ ಸ್ಥಿರಾಸ್ತಿ; ಉತ್ತರಕ್ಕೆ : ಜಾಗರಯ್ಯ ನವರ ಆಸ್ತಿ ನಂ.198/ಎ; ದಕ್ಷಿಣಕ್ಕೆ: ರಸ್ತೆ.

ಕೆಳಸಹಿದಾರರು **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯಾಗಿದ್ದು, **ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002** (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ: 11-07-2022ರಂದು ಈ ಕೆಳಗಿನ ಸಾಲಗಾರರರಾದ **ಶ್ರೀಮತಿ ಕ್ರಿಸ್ಟಿನ ಬ್ಯೂಲ** ಶ್ರೀ ಡೇವಿಡ್ ರಾಜನ್.ಎ ರವರ ಧರ್ಮಪತ್ನಿ, ವಿರ್ಗಮ್ ಕಾಂಡಲ್ಸ್ ನ ಒಡೆಯರು **ನಂ.13, 1ನೇ ‘ಬಿ’ ಕ್ರಾಸ್, ಬೆನ್ ಸತ್ಯ ಲೇ ಔಟ್, ಹೆನ್ನೂರ್ ಗೆದ್ದಲಹಳ್ಳಿ, ಕೊತನೂರ್ ಪೋಸ್ಟ್, ಬೆಂಗಳೂರು-560 043 ಮತ್ತು ಶ್ರೀ ಡೇವಿಡ್ ರಾಜನ್.ಎ S/o ಶ್ರೀ ಆಂತೋಣಿ ದಾಸ್ ನಂ.13, 1ನೇ ‘ಬಿ’ ಕ್ರಾಸ್, ಬೆನ್ ಸತ್ಯ ಲೇ ಔಟ್, ಹೆನ್ನೂರ್ ಗೆದ್ದಲಹಳ್ಳಿ, ಕೊತನೂರ್ ಪೋಸ್ಟ್, ಬೆಂಗಳೂರು-560 043**ಇವರಿಗೆ ದಿನಾಂಕ 11-07-2022ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.27,62,258/- (ಇಪ್ಪತ್ತೇಳು ಲಕ್ಷ ಅರವತ್ತೆರಡು ಸಾವಿರದ ಇನ್ನೂರ ಐವತ್ತೆಂಟು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.
ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 30-09-2022 ರಂದು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.
ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ದಿನಾಂಕ 30-06-2022 ರವರೆಗೆ ಬರಬೇಕಾದ ಬಾಕಿ**ರೂ.27,62,258/- (ಇಪ್ಪತ್ತೇಳು ಲಕ್ಷ ಅರವತ್ತೆರಡು ಸಾವಿರದ ಇನ್ನೂರ ಐವತ್ತೆಂಟು ರೂಗಳು ಮಾತ್ರ)** (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ) ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

ಸ್ಥಿರ ಆಸ್ತಿಯ ವಿವರ

ಬಿಡಿಎ ಸೈಟ್ ನಂ.2 ಹೆಚ್.ಸಿ 632, 2ನೇ ಅಡ್ಡರಸ್ತೆ, 2ನೇ ಬ್ಲಾಕ್, ಹೆಚ್ ಆರ್ ಬಿ ಆರ್ ಲೇ ಔಟ್, ಕಲ್ಯಾಣನಗರ್, ಬೆಂಗಳೂರು-560 043, ಬಿಬಿಎಂಪಿ ವಾರ್ಡ್ ನಂ.27 (ಬಾಣಸವಾಡಿ) (ಪಿಐಡಿ ನಂ.88-254-2ಹೆಚ್.ಸಿ-632) ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 9.15 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 12.20 ಮೀಟರ್: ಚಕ್ಕುಬಂದಿ: ಪೂರ್ವಕ್ಕೆ : ಸೈಟ್ ನಂ.2ಹೆಚ್ ಸಿ 634; ಪಶ್ಚಿಮಕ್ಕೆ : 2ಹೆಚ್ ಸಿ 630; ಉತ್ತರಕ್ಕೆ : 2 ಹೆಚ್ ಸಿ ಕ್ರಾಸ್ ರಸ್ತೆ ; ದಕ್ಷಿಣಕ್ಕೆ: 2 ಜಿ ಸಿ 631

ಕೆಳಸಹಿದಾರರು **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯಾಗಿದ್ದು, **ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002** (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ: 11-07-2022ರಂದು ಈ ಕೆಳಗಿನ ಸಾಲಗಾರರರಾದ ಶ್ರೀ **ಡೇವಿಡ್ ರಾಜನ್.ಎ S/o** ಶ್ರೀ ಆಂತೋಣಿ ದಾಸ್ **ನಂ.13, 1ನೇ ‘ಬಿ’ ಕ್ರಾಸ್, ಬೆನ್ ಸತ್ಯ ಲೇ ಔಟ್, ಹೆನ್ನೂರ್ ಗೆದ್ದಹಳ್ಳಿ, ಕೊತನೂರ್ ಪೋಸ್ಟ್, ಬೆಂಗಳೂರು-560 043 ಮತ್ತು** ಶ್ರೀಮತಿ ಕ್ರಿಸ್ಟಿನ ಬ್ಯೂಲ ಶ್ರೀ ಡೇವಿಡ್ ರಾಜನ್.ಎ ರವರ ಧರ್ಮಪತ್ನಿ, **ನಂ.13, 1ನೇ ‘ಬಿ’ ಕ್ರಾಸ್, ಬೆನ್ ಸತ್ಯ ಲೇ ಔಟ್, ಹೆನ್ನೂರ್ ಗೆದ್ದಲಹಳ್ಳಿ, ಕೊತನೂರ್ ಪೋಸ್ಟ್, ಬೆಂಗಳೂರು-560 043 ಮತ್ತು** ಇವರಿಗೆ ದಿನಾಂಕ 11-07-2022ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.84,06,162/- (ಎಂಬತ್ತನಾಲ್ಕು ಲಕ್ಷ ಆರು ಸಾವಿರದ ಒಂದುನೂರ ಅರವತ್ತೆರಡು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.
ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 30-09-2022 ರಂದು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.
ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ದಿನಾಂಕ 30-06-2022 ರವರೆಗೆ ಬರಬೇಕಾದ ಬಾಕಿ **ರೂ.84,06,162/- (ಎಂಬತ್ತನಾಲ್ಕು ಲಕ್ಷ ಆರು ಸಾವಿರದ ಒಂದುನೂರ ಅರವತ್ತೆರಡು ರೂಗಳು ಮಾತ್ರ)** (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ) ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

ಸ್ಥಿರ ಆಸ್ತಿಯ ವಿವರ

ಬಿಡಿಎ ಸೈಟ್ ನಂ.2 ಹೆಚ್.ಸಿ 632, 2ನೇ ಅಡ್ಡರಸ್ತೆ, 2ನೇ ಬ್ಲಾಕ್, ಹೆಚ್ ಆರ್ ಬಿ ಆರ್ ಲೇ ಔಟ್, ಕಲ್ಯಾಣನಗರ್, ಬೆಂಗಳೂರು-560 043, ಬಿಬಿಎಂಪಿ ವಾರ್ಡ್ ನಂ.27 (ಬಾಣಸವಾಡಿ) (ಪಿಐಡಿ ನಂ.88-254-2ಹೆಚ್.ಸಿ-632) ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 9.15 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 12.20 ಮೀಟರ್: ಚಕ್ಕುಬಂದಿ: ಪೂರ್ವಕ್ಕೆ : ಸೈಟ್ ನಂ.2 ಹೆಚ್ ಸಿ 634; ಪಶ್ಚಿಮಕ್ಕೆ : 2 ಹೆಚ್ ಸಿ 630; ಉತ್ತರಕ್ಕೆ: 2 ಹೆಚ್ ಸಿ ಕ್ರಾಸ್ ರಸ್ತೆ; ದಕ್ಷಿಣಕ್ಕೆ: 2 ಜಿ ಸಿ 631

ದಿನಾಂಕ: **30.09.2022**
ಬೆಂಗಳೂರು.

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.
ಅಧಿಕೃತ ಅಧಿಕಾರಿ

ಗುರುವಾರ, ಅಕ್ಟೋಬರ್ 6, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆಲ್ಫಿ ಸಂಭ್ರಮ

ಮೈಸೂರಿನಲ್ಲಿ ಬುಧವಾರ ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆಗೂ ಮುನ್ನ ಮಹಿಷಾಸುರನ ವೇಷ ಧರಿಸಿದ್ದ ಕಲಾವಿದರೊಬ್ಬರು ಸೆಲ್ಫಿ ತೆಗೆದುಕೊಂಡರು

ಕಲಾ ಶ್ರೀಮಂತಿಕೆ, ಅಭಿವೃದ್ಧಿಯ ನೋಟ ಅನಾವರಣ

1

2


3

ಮೈಸೂರಿನಲ್ಲಿ ಬುಧವಾರ ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಂಬೂಸವಾರಿಗೆ ಚಾಲನೆ ನೀಡಿದರು. ಸಚಿವ ಎಸ್‌.ಟಿ. ಸೋಮಶೇಖರ್‌, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌, ಸಚಿವ ಸುನಿಲ್ ಕುಮಾರ್ ಇದ್ದರು (ಚಿತ್ರ 1), ಮಂಗಳೂರು ದಸರಾ ಪ್ರಯುಕ್ತ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಪೂಜೆಗೊಂಡ ಶಾರದಾ ಮೂರ್ತಿಯ ಶೋಭಾಯಾತ್ರೆ ನಡೆಯಿತು (ಚಿತ್ರ 2), ಹಾಸನ ಜಿಲ್ಲೆಯ ಬೇಲೂರಿನಲ್ಲಿ ವಿಜೃಂಭಣೆಯಿಂದ ನಡೆದ ರಂಭಾಪುರಿ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡರು —ಪ್ರಜಾವಾಣಿ ಚಿತ್ರ/ಮಲ್ಲೇಶ

• ಎಂ.ಮಹೇಶ

ಮೈಸೂರು: ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿಯು ನಾಡಿನ ಕಲಾ ಶ್ರೀಮಂತಿಕೆ, ಸಂಸ್ಕೃತಿಯ ಸೊಬಗು, ಸಂಪ್ರದಾಯದ ಚಿತ್ರಣ, ವೈವಿಧ್ಯಮಯ ವೇಷಭೂಷಣ ಮತ್ತು ಜಿಲ್ಲೆಗಳ ಅಭಿವೃದ್ಧಿ–ಸಾಧನೆಗಳನ್ನು ತೆರೆದಿಟ್ಟ ಕನ್ನಡಿಯಾಯಿತು.

ರಾಜ್ಯದ ಎಲ್ಲ ಜಿಲ್ಲೆಗಳ ನೂರಾರು ಕಲಾವಿದರು 'ರಾಜಪಥ'ದಲ್ಲಿ ಕಲಾ ಸೌಂದರ್ಯವನ್ನು ಹರಡಿದರು. 43 ಸ್ತಬ್ಧ ಚಿತ್ರಗಳು ಆಯಾ ಜಿಲ್ಲೆ ವಿಶೇಷಗಳು, ಪ್ರವಾಸಿ ತಾಣಗಳು, ಪ್ರಗತಿಯ ಚಿತ್ರಣವನ್ನು ಕಟ್ಟಿಕೊಟ್ಟವು. 67 ಕಲಾ ತಂಡಗಳು ಸಾವಿರಾರು ಮಂದಿಯನ್ನು ಮೋಡಿ ಮಾಡಿದವು. ಕೆಲವು ತಂಡಗಳಲ್ಲಿ ಮಹಿಳೆಯರು, ಯುವತಿಯರು ಹಾಗೂ ಬಾಲಕಿಯರು ವಿಶೇಷ ಗಮನ ಸೆಳೆದರು.

ಚಾಮರಾಜನಗರ ಜಿಲ್ಲೆಯ ಸ್ತಬ್ಧ ಚಿತ್ರದಲ್ಲಿ ಅಲ್ಲಿನ ಪ್ರವಾಸಿ ತಾಣಗಳ ರಾಯಭಾರಿಯಾಗಿದ್ದ ನಟ ಪುನೀತ್ ರಾಜ್‌ಕುಮಾರ್ ಪ್ರತಿಕೃತಿ ಮಾಡಲಾಗಿತ್ತು. ಅದನ್ನು ನೋಡುತ್ತಿದ್ದಂತೆಯೇ ಜನರು 'ಅಪ್ಪು ಅಪ್ಪು' ಎನ್ನುತ್ತಾ ಅಭಿಮಾನ ಪ್ರದರ್ಶಿಸಿದರು. 'ಬ್ಯಾಂಡ್ ಆಫ್ ಬ್ರದರ್ಸ್– ನಮ್ಮ ಮೈಸೂರು' ತಂಡದ ಸದಸ್ಯರೊಬ್ಬರು ಹಿಡಿದು ಸಾಗುತ್ತಿದ್ದ ಬಾವುಟದಲ್ಲಿದ್ದ ಪವರ್‌ಸ್ಟಾರ್ ಫೋಟೊ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಯಿತು.

ಮುಖ್ಯ ಅತಿಥಿಯಾಗಿದ್ದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಮ್ಮ ಆಸನದಲ್ಲಿ ಕುಳಿತುಕೊಳ್ಳುವುದಕ್ಕಾಗಿ ಅರಮನೆಯಿಂದ ಬರುತ್ತಿದ್ದಂತೆಯೇ ಜನ ಹರ್ಷೋದ್ಗಾರ ಮಾಡಿದರು. ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪನಮನ ಸಲ್ಲಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ, ಹೂಗಳಿಂದ ಅಲಂಕೃತಗೊಂಡಿದ್ದ ವಿಶೇಷ ವೇದಿಕೆ ಏರುವಾಗಲೂ ಯದುವೀರ್‌ಗೆ ಚಪ್ಪಾಳೆಗಳ ಸುರಿಮಳೆಯಾಯಿತು. ಅವರೂ ಜನರತ್ತ ಕೈಬೀಸಿ ನಮಿಸಿದರು.

ಜಂಬೂಸವಾರಿ ಬಳಿಕ ಬನ್ನಿ ಮಂಟಪದ ಮೈದಾನದಲ್ಲಿ ರಾತ್ರಿ 8 ಗಂಟೆಗೆ ಆರಂಭವಾದ ಆಕರ್ಷಕ ಪಂಜಿನ ಕವಾಯತು ಕಾರ್ಯಕ್ರಮದೊಂದಿಗೆ ಮೈಸೂರು ದಸರೆಗೆ ವಿಧ್ಯುಕ್ತ ತೆರೆಬಿದ್ದಿತು.

ಚಾಮರಾಜನಗರ ಜಿಲ್ಲೆಯ ಪ್ರವಾಸಿ ತಾಣಗಳ ರಾಯಭಾರಿಯಾಗಿದ್ದ ನಟ ಪುನೀತ್ ರಾಜ್‌ಕುಮಾರ್ ಕಲಾಕೃತಿಯೇ ಪ್ರಧಾನವಾಗಿದ್ದ ಸ್ತಬ್ಧಚಿತ್ರ ಗಮನ ಸೆಳೆಯಿತು

ನೂಕಾಟ, ಲಘು ಲಾಠಿಪ್ರಹಾರ

ಜಂಬೂಸವಾರಿ ಮೆರವಣಿಗೆಯು ಪ್ರಾರಂಭವಾದ ಒಂದು ತಾಸಿನ ನಂತರ, ನಗರ ಬಸ್‌ನಿಲ್ದಾಣದ ಬಳಿಯ ರಸ್ತೆಯ ಇಕ್ಕೆಲಗಳಲ್ಲಿ ಹಾಗೂ ಕೆ.ಆರ್.ವೃತ್ತದ ರಸ್ತೆ ಬದಿಯಲ್ಲಿ ಹಾಕಲಾಗಿದ್ದ ಪೆಂಡಾಲ್‌ನಲ್ಲಿ ನೂಕುನುಗ್ಗಲು ಉಂಟಾಗಿ ನಾಲ್ವರು ಮಹಿಳೆಯರು ಅಸ್ವಸ್ಥರಾದರು. ತಕ್ಷಣ ಪೊಲೀಸರು ಅವರಿಗೆ ನೀರು ನೀಡಿ ಆರೈಕೆ ಮಾಡಿದರು. ಗುಂಪು ಚದುರಿಸಲು ಲಘು ಲಾಠಿ ಪ್ರಹಾರವೂ ನಡೆಯಿತು.

ದಶಮಂಟಪ ಶೋಭಾಯಾತ್ರೆ

ಮಡಿಕೇರಿಯ ಪೇಟೆ ಶ್ರೀರಾಮಮಂದಿರದ 'ಶಿವದರ್ಶನ' ಮಂಟಪ ಬುಧವಾರ ಶೋಭಾಯಾತ್ರೆಯಲ್ಲಿ ಕಂಗೊಳಿಸಿತು

• ಕೆ.ಎಸ್.ಗಿರೀಶ

ಮಡಿಕೇರಿ: ರಾತ್ರಿಯನ್ನೇ ಹಗಲಾಗಿಸಿದ ಮಂಜಿನ ನಗರಿಯ 'ಬೆಳಕಿನ ದಸರೆ'ಯು ಎರಡು ವರ್ಷಗಳ ನಂತರ ಬುಧವಾರ ವೈಭವೋಪೇತವಾಗಿ ನಡೆಯಿತು.

'ಬೆಳಕಿನ ಹೊಳೆ'ಯಲ್ಲಿ ದಶಮಂಟಪಗಳು ತೇಲಿದವು. ₹ 1.76 ಕೋಟಿ ವೆಚ್ಚದಲ್ಲಿ ಸಿದ್ಧಪಡಿಸಿದ್ದ ಹತ್ತು ಮಂಟಪಗಳ ಶೋಭಾಯಾತ್ರೆಯನ್ನು ಲಕ್ಷಾಂತರ ಮಂದಿ ಕಣ್ತುಂಬಿಕೊಂಡರು. ಹತ್ತು ದಿನಗಳ ದಸರೆಗೆ ವೈಭವದ ತೆರೆ ಬಿತ್ತು.

ಪಡುವಣದಲ್ಲಿ ಸೂರ್ಯ ಮುಳುಗುತ್ತಿದ್ದಂತೆ ಜಂಬೂಸವಾರಿ ಮುಗಿಸಿ ಮೈಸೂರಿನಿಂದ ಬಂದ ಅಪಾರ ಜನಸ್ತೋಮ ಬೀದಿಬೀದಿಗಳಲ್ಲಿ ಕಂಡುಬಂದರು. ಕಿವಿಗಡಚಿಕ್ಕುವ ಡಿ.ಜೆ ಸಂಗೀತದ ಅಬ್ಬರಕ್ಕೆ ಯುವಜನರು ಕುಣಿದು ಕುಪ್ಪಳಿಸಿದರು. 150 ವರ್ಷಗಳಿಗೂ ಮೀರಿದ ಇತಿಹಾಸ ಹೊಂದಿರುವ ನಗರದ ಪೇಟೆ ಶ್ರೀರಾಮ ಮಂದಿರ ಸಮಿತಿಯ 'ಶಿವದರ್ಶನ' ಮಂಟಪ ಮುಂದಡಿ ಇಡುತ್ತಿದ್ದಂತೆ ಶೋಭಾ ಯಾತ್ರೆ ಆರಂಭ ಗೊಂಡಿತು.

ಉಳಿದ ಮಂಟಪಗಳಾದ ದೇಚೂರು ಶ್ರೀರಾಮಮಂದಿರವು 'ಮಧು ಕೈಟಭರ ವಧೆ', ದಂಡಿನ ಮಾರಿಯಮ್ಮ ಸಮಿತಿಯು 'ಭೂಲೋಕ ರಕ್ಷಣೆಗೆ ಪಾರ್ವತಿಯಿಂದ ಶಾಕಂಭರಿ ರೂಪ' ಕಥಾನಕವನ್ನು ಪ್ರಸ್ತುತಪಡಿಸಿತ್ತು.

ಭೀಮನಕೊಲ್ಲಿ ಮಹದೇಶ್ವರ ಗುಡಿಯಲ್ಲಿ ಸೋನಿಯಾ ಪೂಜೆ

ಪ್ರಜಾವಾಣಿ ವಾರ್ತೆ

ಮೈಸೂರು/ಎಚ್.ಡಿ.ಕೋಟೆ: ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ನಾಗರಹೊಳೆ ಸಂರಕ್ಷಿತ ಪ್ರದೇಶದಲ್ಲಿರುವ ಬೇಗೂರು ಗ್ರಾಮದ ಭೀಮನಕೊಲ್ಲಿ ಮಹದೇಶ್ವರ ದೇವಸ್ಥಾನದಲ್ಲಿ ಬುಧವಾರ ವಿಜಯದಶಮಿ ಪ್ರಯುಕ್ತ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಪೂಜೆ ಸಲ್ಲಿಸಿದರು.

ಗುಡಿ ಹೊರಗೆ ಕುಳಿತು ಐದು ನಿಮಿಷ ಧ್ಯಾನ ಮಾಡಿದರು. ಪ್ರದಕ್ಷಿಣೆ ಹಾಕಿ ನಮಿಸಿದರು.

'ಇತಿಹಾಸ ಪ್ರಸಿದ್ಧ ದೇವಸ್ಥಾನಕ್ಕೆ ತೆರಳಲು ಸೋನಿಯಾಗಾಂಧಿ ಸ್ವತಃ ಆಸಕ್ತಿ ತೋರಿದರು' ಎಂದು ಎಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ 'ಭಾರತ್ ಜೋಡೊ' ಯಾತ್ರೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಆಗಮಿಸಿರುವ ಅವರು, ಎಚ್.ಡಿ.ಕೋಟೆ ತಾಲ್ಲೂಕಿನ ಬೀರಂಬಳ್ಳಿ ಸಮೀಪದಲ್ಲಿರುವ 'ಆರೆಂಜ್ ಕೌಂಟಿ' ರೆಸಾರ್ಟ್‌ನಲ್ಲಿ ತಂಗಿದ್ದಾರೆ.

ದಸರಾ ಅಂಗವಾಗಿ ಯಾತ್ರೆಗೆ ಎರಡು ದಿನ ಬಿಡುವು ನೀಡಲಾಗಿತ್ತು. ಯಾತ್ರೆಯು ಮಂಡ್ಯ ಜಿಲ್ಲೆಯಲ್ಲಿ ಗುರುವಾರದಿಂದ ಮುಂದುವರಿಯಲಿದ್ದು, ಪುತ್ರ ರಾಹುಲ್ ಗಾಂಧಿ ಮತ್ತು ನಾಯಕರೊಂದಿಗೆ ಸೋನಿಯಾ ಗಾಂಧಿ ಹೆಜ್ಜೆ ಹಾಕಲಿದ್ದಾರೆ.

ರಾಹುಲ್ ಸಫಾರಿ: ವಿಶ್ರಾಂತಿಯಲ್ಲಿದ್ದ ರಾಹುಲ್ ಗಾಂಧಿ ಬುಧವಾರ ನಾಗರಹೊಳೆಗೆ ಸಫಾರಿಗೆ ತೆರಳಿದ್ದರು. ಆ ವೇಳೆ ಅವರಿಗೆ ಹುಲಿ, ಆನೆ, ಕರಡಿ ಹಾಗೂ ಆನೆ ಮರಿ ಕಂಡು ಬಂತು. ಆನೆ ಮತ್ತು ಮರಿ ಒಟ್ಟಿಗೇ ಇರುವ ಚಿತ್ರವನ್ನು ಇನ್‌ಸ್ಟಾಗ್ರಾಂನಲ್ಲಿ ಹಾಕಿರುವ ರಾಹುಲ್, ಮರಿಗೆ ಗಾಯವಾಗಿರುವುದನ್ನು ಗುರುತಿಸಿ ವಿಷಾದಿಸಿದ್ದಾರೆ.

ವಿಜಯದಶಮಿಯ ಪ್ರಯುಕ್ತ ಮೈಸೂರು ಜಿಲ್ಲೆಯ ಎಚ್‌ಡಿ ಕೋಟೆ ತಾಲ್ಲೂಕು ಬೇಗೂರು ಗ್ರಾಮದ ಭೀಮನಕೊಲ್ಲಿ ಮಹದೇಶ್ವರ ದೇವಸ್ಥಾನದಲ್ಲಿ ಬುಧವಾರ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಪೂಜೆ ಸಲ್ಲಿಸಿದರು

ಪರೇಶ್ ಮೇಸ್ತ ಸಾವು ಪ್ರಕರಣ: ಕಾಂಗ್ರೆಸ್‌ನಿಂದ ವಾಗ್ದಾಳಿ

'ಸಿಬಿಐ ವರದಿಯಿಂದ ಬೆತ್ತಲಾದ ಬಿಜೆಪಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊನ್ನಾವರದ ಪರೇಶ್ ಮೇಸ್ತ ಸಾವು ಕೊಲೆಯಲ್ಲ ಎಂದು ಸಿಬಿಐ ತನಿಖಾಧಿಕಾರಿಗಳು ನ್ಯಾಯಾಲಯಕ್ಕೆ 'ಬಿ' ವರದಿ ಸಲ್ಲಿಸಿರುವುದರಿಂದ ಬಿಜೆಪಿ ಜನರ ಮುಂದೆ ಬೆತ್ತಲಾಗಿದೆ' ಎಂದು ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

ಸಿಬಿಐ ವರದಿ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರತಿಕ್ರಿಯೆ ನೀಡಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ಹಲವು ನಾಯಕರು ಬಿಜೆಪಿ ವಿರುದ್ಧ ತೀವ್ರ ಟೀಕಾ ಪ್ರಹಾರ ನಡೆಸಿದ್ದಾರೆ. ಕೆಪಿಸಿಸಿ ಅಧಿಕೃತ ಟ್ವಿಟರ್ ಖಾತೆಯಿಂದಲೂ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಲಾಗಿದೆ.

'ಸಾವು ಎಂಬುದು ಬಿಜೆಪಿಗೆ ಭಾವನಾತ್ಮಕವಲ್ಲ. ಸಾವಿನ ಮನೆಯಲ್ಲಿ ಸಂಭ್ರಮಿಸುವ ಬಿಜೆಪಿ ಡಿವೈಎಸ್‌ಪಿ ಗಣಪತಿ, ಡಿ.ಕೆ. ರವಿ, ಪರೇಶ್ ಮೇಸ್ತ ಸೇರಿದಂತೆ ಹಲವು ಪ್ರಕರಣಗಳಲ್ಲಿ ಬೆತ್ತಲಾಗಿದೆ. ಸಿಬಿಐ ವರದಿಯು ಕೇವಲ ರಾಜಕೀಯ ಲಾಭಕ್ಕಾಗಿ ಹೆಣವನ್ನೂ ಕುಕ್ಕಿ ತಿನ್ನುವ ಬಿಜೆಪಿಗೆ ಎತ್ತಿದ ಮಂಗಳಾರತಿ' ಎಂದು ಸುರ್ಜೇವಾಲ ಟ್ವೀಟ್ ಮಾಡಿದ್ದಾರೆ.

'ಪಾಪಿ ಬಿಜೆಪಿಯ ಸುಳ್ಳುಗಳು ಅವರದ್ದೇ ಆಡಳಿತದಲ್ಲಿರುವ ಸಿಬಿಐನಿಂದ ಬೆತ್ತಲಾಗುತ್ತಲೇ ಇವೆ. ಡಿ.ಕೆ. ರವಿ ಪ್ರಕರಣ, ಡಿವೈಎಸ್‌ಪಿ ಗಣಪತಿ ಪ್ರಕರಣ, ಪರೇಶ್ ಮೇಸ್ತ ಪ್ರಕರಣದಲ್ಲಿ ಆಗಿನ ಸರ್ಕಾರದ ಕೈವಾಡವಿಲ್ಲ ಎಂಬ ವರದಿ ಬಂದಿದೆ. ಸುಳ್ಳು ಹೇಳಿದ್ದ ಬಿಜೆಪಿಯು ರಾಜ್ಯದ ಜನರ ಕ್ಷಮೆ ಯಾಚಿಸಬೇಕು' ಎಂದು ಕೆಪಿಸಿಸಿ ಆಗ್ರಹಿಸಿದೆ.

'ಸುಳ್ಳು ಆರೋಪಕ್ಕಾಗಿ ಕ್ಷಮೆ ಯಾಚಿಸಲಿ'

'ಪರೇಶ್ ಮೇಸ್ತ ಸಾವು ಆಕಸ್ಮಿಕವಾಗಿದ್ದು, ಹತ್ಯೆಯಲ್ಲ ಎಂಬ ಸಿಬಿಐ ವರದಿಯು ರಾಜ್ಯ ಬಿಜೆಪಿಯ ಮುಖಕ್ಕೆ ಬಡಿದ ತಪರಾಕಿ. ಬಿಜೆಪಿಗೆ ಮಾನ– ಮರ್ಯಾದೆ ಇದ್ದರೆ ನಮ್ಮ ಮೇಲೆ ಸುಳ್ಳು ಆರೋಪ ಮಾಡಿದ್ದಕ್ಕಾಗಿ ಕ್ಷಮೆ ಕೋರಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

'ಬಿಜೆಪಿ ಗೆದ್ದಿರುವ ಪ್ರತಿ ಸ್ಥಾನದ ಹಿಂದೆ ಪರೇಶ್ ಮೇಸ್ತನಂತಹ ಅಮಾಯಕ ಯುವಕರ ರಕ್ತ ಇದೆ. ಬಿಜೆಪಿ ನಾಯಕರು ಅನುಭವಿಸುತ್ತಿರುವ ಅಧಿಕಾರದ ಕುರ್ಚಿಗೆ ಮೇಸ್ತನಂತಹ ಯುವಕರ ರಕ್ತದ ಕಲೆ ಅಂಟಿಕೊಂಡಿದೆ' ಎಂದು ಟ್ವಿಟರ್‌ನಲ್ಲಿ ವಾಗ್ದಾಳಿ ನಡೆಸಿದ್ದಾರೆ.

ಸಿಬಿಐ ವರದಿಗೆ ಅಸಮಾಧಾನ

ಕಾರವಾರ: 'ಮಗ ಪರೇಶ ಮೇಸ್ತನ ಸಾವಿನ ಕುರಿತು ಸಿ.ಬಿ.ಐ ನ್ಯಾಯಾಲಯಕ್ಕೆ ಸಲ್ಲಿಸಿದ ವರದಿ ಬಗ್ಗೆ ಅಸಮಾಧಾನವಾಗಿದೆ. ಈ ಪ್ರಕರಣದಲ್ಲಿ ಸರಿಯಾಗಿ ತನಿಖೆ ಮಾಡಿಲ್ಲ' ಎಂದು ತಂದೆ ಕಮಲಾಕರ ಮೇಸ್ತ ಪ್ರತಿಕ್ರಿಯಿಸಿದ್ದಾರೆ.

ಹೊನ್ನಾವರದ ತಮ್ಮ ನಿವಾಸದ ಬಳಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮಗನ ಸಾವಿನ ಪ್ರಕರಣದಲ್ಲಿ ಸಾಕ್ಷ್ಯ ನಾಶ ಮಾಡಲಾಗಿದೆ. ಸಿ.ಬಿ.ಐ ತನಿಖೆಯಿಂದ ನ್ಯಾಯ ಸಿಗುವ ನಿರೀಕ್ಷೆಯಿತ್ತು. ಆದರೆ, ಮಗನ ಸಾವು ಆಕಸ್ಮಿಕ ಎಂದು ವರದಿ ನೀಡಿದ್ದು, ತನಿಖೆಯ ಮೇಲಿದ್ದ ನಿರೀಕ್ಷೆಗಳೆಲ್ಲವೂ ಹುಸಿಯಾಗಿವೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	123.68	5,800	4,915
ಹಾರಂಗಿ	2,859	2,854.67	233	1,650
ಕಬಿನಿ	2,284	2,282.38	1,056	1,000
ಹೇಮಾವತಿ	2,922	2,921.47	3,128	3,067
ಲಿಂಗನಮಕ್ಕಿ	1,819	1,815	3,441	7,001
ಸೂಪಾ (ಮೀ)	564	553.75	1,379	3,066
ಮಾಣಿ	595	589	180	743
ತುಂಗಭದ್ರಾ	1,633	1,633	16,099	16,406
ಮಲಪ್ರಭಾ	2079.50	2,079.50	1,794	1,794
ಘಟಪ್ರಭಾ	2,175	2,174.73	2,116	2,599
ಭದ್ರಾ	186	185	2,504	386
ಆಲಮಟ್ಟಿ (ಮೀ)	519.60	519.60	12,951	12,951
ನಾರಾಯಣಪುರ (ಮೀ)	492.25	492.03	18,000	19,000

* ನೆಲಮಟ್ಟದಿಂದ

ಆಕಾಶದ ಗುಡ್ಡಕ್ಕೆ ಶಿಶು ಏರೀತಲೇ ಪರಾಕ್

ರಾಣೆಬೆನ್ನೂರು: ತಾಲ್ಲೂಕಿನ ಸುಕ್ಷೇತ್ರ ದೇವರಗುಡ್ಡದ ಮಾತಲೇಶ ದೇವಸ್ಥಾನದ ವಿಜಯದಶಮಿ ದಸರಾ ಹಬ್ಬದ ಕಾರ್ಣಿಕೋತ್ಸವ ಮಂಗಳವಾರ ಸಂಜೆ ಆಯುಧ ಪೂಜೆ ದಿನ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಕಾರ್ಣಿಕ ಗೊರವಯ್ಯ ನಾಗಪ್ಪಜ್ಜ ಉರ್ಮಿ ಅವರು, 'ಆಕಾಶದ ಗುಡ್ಡಕ್ಕೆ ಶಿಶು ಏರೀತಲೇ ಪರಾಕ್' ಎಂದು ಕಾರ್ಣಿಕ ನುಡಿದಿದ್ದಾರೆ.

'ಈ ಬಾರಿ ಸಣ್ಣ ರೈತರು ಉತ್ತಮ ಪ್ರಗತಿ ಹೊಂದಲಿದ್ದಾರೆ. ಯುವ ರಾಜಕಾರಣಿಗಳಿಗೆ ಹೆಚ್ಚಿನ ಅವಕಾಶ ಸಿಗಲಿದೆ. ಯುವಕನಿಗೆ ರಾಜ್ಯದ ಮಂತ್ರಿ ಸ್ಥಾನ ದೊರೆಯಲಿದೆ' ಎಂದು ವಿಶ್ಲೇಷಿಸಲಾಗಿದೆ ಎಂದು ದೇವಸ್ಥಾನದ ಅರ್ಚಕ ಸಂತೋಷ ಭಟ್ ಪೂಜಾರ ತಿಳಿಸಿದರು.

ಕಾರ್ಣಿಕ ಗೊರವಯ್ಯ ನಾಗಪ್ಪಜ್ಜ ಉರ್ಮಿ ಬಿಲ್ಲನ್ನು ಏರಿ ಆಕಾಶದ ಗುಡ್ಡಕ್ಕೆ ಶಿಶು ಏರೀತಲೇ ಪರಾಕ್ ಎಂದು ಕಾರ್ಣಿಕ ನುಡಿದರು

ಪಾಂಡವಪುರದಿಂದ ಭಾರತ್ ಜೋಡೊ ಯಾತ್ರೆ ಪುನರಾರಂಭ

ರಾಹುಲ್ ಜೊತೆ ಸೋನಿಯಾ ನಡಿಗೆ ಇಂದು

ಪ್ರಜಾವಾಣಿ ವಾರ್ತೆ

ಮಂಡ್ಯ: ಹಬ್ಬದ ಬಿಡುವಿನ ಬಳಿಕ, ಪಾಂಡವಪುರ ತಾಲ್ಲೂಕಿನ ಜಕ್ಕನಹಳ್ಳಿ ಕ್ರಾಸ್‌ನಿಂದ ಗುರುವಾರ ಪುನರಾರಂಭಗೊಳ್ಳಲಿರುವ ಭಾರತ್ ಜೋಡೊ ಪಾದಯಾತ್ರೆಯಲ್ಲಿ, ಪುತ್ರ ರಾಹುಲ್ ಗಾಂಧಿ ಅವರೊಂದಿಗೆ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಹೆಜ್ಜೆ ಹಾಕಲಿದ್ದಾರೆ.

ಅ.3ರಂದೇ ರಾಜ್ಯಕ್ಕೆ ಬಂದಿದ್ದ ಅವರು ಎಚ್.ಡಿ.ಕೋಟೆ ತಾಲ್ಲೂಕಿನ ಬೀರಂಬಳ್ಳಿಯ ಆರೆಂಜ್ ಕೌಂಟಿ ರೆಸಾರ್ಟ್‌ನಲ್ಲಿ ಪುತ್ರನೊಂದಿಗೆ 2 ದಿನ ವಾಸ್ತವ್ಯ ಹೂಡಿದ್ದರು. ಬಿಡುವಿನ ನಂತರ ರಾಹುಲ್ ಗಾಂಧಿ ಗುರುವಾರ ಬೆಳಿಗ್ಗೆ 6.30ಕ್ಕೆ ಪಾಂಡವಪುರ ಸಮೀಪದ ಬೆಳ್ಳಾಳೆ ಗ್ರಾಮದ ಮೂಲಕ ಪಾದಯಾತ್ರೆ ಆರಂಭಿಸಲಿದ್ದಾರೆ.

ಯಾತ್ರೆಯು ಬೆಳಿಗ್ಗೆ 8.30ಕ್ಕೆ ಮೇಲುಕೋಟೆ ಸಮೀಪದ ಜಕ್ಕನಹಳ್ಳಿ ಕ್ರಾಸ್ ತಲುಪಲಿದೆ. ಹೊನ್ನೆಮಡು ಗ್ರಾಮದ ಬಳಿಯ ಹೆಲಿಪ್ಯಾಡ್‌ಗೆ ಬಂದಿಳಿಯುವ ಸೋನಿಯಾ ಗಾಂಧಿ ಜಕ್ಕನಹಳ್ಳಿ ಕ್ರಾಸ್‌ನಲ್ಲಿ ಪಾದಯಾತ್ರೆ ಸೇರಿಕೊಳ್ಳಲಿದ್ದಾರೆ.

ಉಪಾಹಾರ ಸೇವನೆ ನಂತರ ಪಾದಯಾತ್ರೆ ಮುಂದುವರಿಸಲಿದ್ದಾರೆ. ಅವರು 20 ನಿಮಿಷ ಹೆಜ್ಜೆ ಹಾಕಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಬೆಳಿಗ್ಗೆ 11.30ರ ಹೊತ್ತಿಗೆ ಪಾದಯಾತ್ರೆ ನಾಗಮಂಗಲ ತಾಲ್ಲೂಕು ಪ್ರವೇಶಿಸಲಿದೆ. ಮಧ್ಯಾಹ್ನ 12ಗಂಟೆಗೆ ಖರಡ್ಯ ಗ್ರಾಮದ ಬಳಿ ರಾಹುಲ್ ಗಾಂಧಿ ರೈತರೊಂದಿಗೆ ಸಂವಾದ ನಡೆಸಲಿದ್ದಾರೆ.

ಪಕ್ಷದ ರಾಷ್ಟ್ರೀಯ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸಿಂಗ್ ಸುರ್ಜೇವಾಲ, ವೇಣುಗೋಪಾಲ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪಾಲ್ಗೊಳ್ಳಲಿದ್ದಾರೆ.

ಬಿಗಿ ಬಂದೋಬಸ್ತ್: ಸೋನಿಯಾ ಗಾಂಧಿ ಪಾಲ್ಗೊಳ್ಳುತ್ತಿರುವುದರಿಂದ ಪೊಲೀಸ್ ಭದ್ರತೆ ಬಿಗಿಗೊಳಿಸಲಾಗಿದೆ. 'ಭದ್ರತೆಯಲ್ಲಿ ಲೋಪವಾಗಿದೆ' ಎಂಬ ಆರೋಪ ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಎಡಿಜಿಪಿ ಅಲೋಕ್ ಕುಮಾರ್ ಜಿಲ್ಲಾ ಪೊಲೀಸರೊಂದಿಗೆ ಸಭೆ ನಡೆಸಿದ್ದಾರೆ.

'ಕೇಂದ್ರೀಯ ಭದ್ರತಾ ಸಿಬ್ಬಂದಿಯೊಂದಿಗೆ ಸ್ಥಳೀಯ ಪೊಲೀಸರು ಭದ್ರತೆ ನೀಡಲಿದ್ದಾರೆ. ನಮ್ಮ ಸಿಬ್ಬಂದಿ ಈಗಾಗಲೇ ಪಾದಯಾತ್ರೆ ಸ್ಥಳಕ್ಕೆ ತೆರಳಿದ್ದಾರೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಹೇಳಿದರು.

ಗಾಯಾಳು ಆನೆಮರಿಗೆ ಚಿಕಿತ್ಸೆ: ಸಿಎಂಗೆ ರಾಹುಲ್ ಪತ್ರ

ಬೆಂಗಳೂರು: ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯದ ವ್ಯಾಪ್ತಿಯಲ್ಲಿರುವ ಗಾಯಗೊಂಡಿರುವ ಆನೆ ಮರಿಯೊಂದಕ್ಕೆ ತಕ್ಷಣ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

ಭಾರತ್ ಜೋಡೊ ಯಾತ್ರೆಗೆ ವಿರಾಮ ನೀಡಿರುವ ಕಾರಣದಿಂದ ರಾಹುಲ್ ಅವರು ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರೊಂದಿಗೆ ನಾಗರಹೊಳೆಯಲ್ಲಿ ಮಂಗಳವಾರ ಸಫಾರಿಗೆ ತೆರಳಿದ್ದರು. ಆಗ, ತಾಯಿಯ ಜತೆಗಿದ್ದ ಆನೆ ಮರಿಯೊಂದು ತೀವ್ರವಾಗಿ ಗಾಯಗೊಂಡಿರುವುದನ್ನು ಕಂಡಿದ್ದರು. ಈ ಕುರಿತು ಮುಖ್ಯಮಂತ್ರಿಗೆ ಬುಧವಾರ ಪತ್ರ ಬರೆದು ಮಾಹಿತಿ ನೀಡಿದ್ದಾರೆ.

'ತಾಯಿಯ ಜತೆಗಿದ್ದ ಚಿಕ್ಕ ಆನೆ ಮರಿಯ ಬಾಲ ಮತ್ತು ಸೊಂಡಿಲಿಗೆ ಗಾಯಗಳಾಗಿವೆ. ಅದು ಜೀವ ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿದೆ. ನಿಸರ್ಗ ಸಹಜವಾಗಿಯೇ ಪ್ರಕ್ರಿಯೆಗಳು ನಡೆಯಬೇಕು ಎಂಬ ಅಭಿಪ್ರಾಯ ಇದೆ. ಆದರೂ, ಅಳಿವಿನಂಚಿನಲ್ಲಿರುವ ಪ್ರಭೇದದ ಜೀವಿಗಳು ಮತ್ತು ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಅಂತಹ ಅಭಿಪ್ರಾಯದ ಹೊರತಾಗಿ ಯೋಚಿಸಬೇಕಾಗುತ್ತದೆ. ಈ ಆನೆ ಮರಿಗೆ ತುರ್ತಾಗಿ ವೈದ್ಯಕೀಯ ನೆರವು ಬೇಕಿರುವುದರಲ್ಲಿ ಯಾವುದೇ ಸಂಶಯವಿಲ್ಲ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಆನೆ ಮರಿಗೆ ಚಿಕಿತ್ಸೆ ನೀಡಿ, ಅದನ್ನು ರಕ್ಷಿಸುವ ವಿಚಾರದಲ್ಲಿ ರಾಜಕೀಯ ಗಡಿಗಳನ್ನು ಮೀರಿ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸರಿಯಾದ ಚಿಕಿತ್ಸೆ ಲಭಿಸಿದರೆ ಆ ಮರಿಯು ಜೀವಂತವಾಗಿ ಉಳಿಯುತ್ತದೆ ಎನ್ನುವ ವಿಶ್ವಾಸವಿದೆ. ಈ ಆನೆ ಮರಿಯ ಜೀವ ಉಳಿಸಲು ನೀವು ಸಕಾಲಕ್ಕೆ ನೆರವು ನೀಡುತ್ತೀರಿ ಎಂಬ ಭರವಸೆ ಇದೆ' ಎಂದು ರಾಹುಲ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಟ್ರ್ಯಾವನ್‌ಕೋರ್ ಅಳಿಲು ಪತ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಅಪರೂಪದ ಟ್ರ್ಯಾವನ್‌ಕೋರ್ (Travanacore) ಹಾರುವ ಅಳಿಲು ಪತ್ತೆಯಾಗಿದೆ.

ಇವು ನಿಶಾಚರಿ ಆಗಿರುವುದರಿಂದ ಕಾಣಸಿಗುವುದು ಅಪರೂಪ. ಪರಿಸರ ಸಂರಕ್ಷಕ ದೀಪಕ್ ಸುಳ್ಯ ಅವರು ತಮ್ಮ ತೋಟದಲ್ಲಿ ಈ ಅಳಿಲು ಕಂಡು, ಚಿತ್ರ ಕ್ಲಿಕ್ಕಿಸಿದ್ದರು.

ನಿಸರ್ಗ ಕನ್ಸರ್ವೇಷನ್ ಟ್ರಸ್ಟ್‌ನ ನಾಗರಾಜ್ ಬೆಳ್ಳೂರು ಅವರು, ಇದು ಚಿಕ್ಕ ಹಾರುವ ಅಳಿಲು ಎಂಬುದನ್ನು ಖಚಿತಪಡಿಸಿದ್ದಾರೆ. ಸ್ಥಳೀಯವಾಗಿ ಇದನ್ನು 'ದರಗು ಪಾಂಜ, ಚಿಕ್ಕ ಪಾಂಜ್' ಎಂದು ಕರೆಯುತ್ತಾರೆ.

'ಪಶ್ಚಿಮಘಟ್ಟದಲ್ಲಿರುವ ಟ್ರ್ಯಾವನ್ ಕೋರ್ ಹಾರುವ ಅಳಿಲು ಪ್ರಸ್ತುತ ದಕ್ಷಿಣ ಏಷ್ಯಾದ ಅತ್ಯಂತ ಚಿಕ್ಕ ಹಾರುವ ಅಳಿಲು ಜಾತಿಗಳಲ್ಲಿ ಒಂದಾಗಿದೆ. ಇದು ಕೇವಲ 32 ಸೆಂ.ಮೀ ಉದ್ದ ಇರುತ್ತದೆ. ದಕ್ಷಿಣ ಭಾರತದಲ್ಲಿ ಅಪರೂಪದ ಅಳಿಲು ಜಾತಿಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ದೈತ್ಯ ಹಾರುವ ಅಳಿಲು (ಇಂಡಿಯನ್ ಜೈಂಟ್) ಮತ್ತು ಟ್ರ್ಯಾವನ್‌ಕೋರ್ ಹಾರುವ ಅಳಿಲು ಎಂಬ ಎರಡು ಜಾತಿಗಳಿವೆ. ಒಂದು ಕಾಲದಲ್ಲಿ ನಾಶವಾಗಿವೆ ಎಂದು ನಂಬಲಾಗಿದ್ದ ಈ ಟ್ರ್ಯಾವನ್‌ಕೋರ್, ನೂರು ವರ್ಷಗಳ ನಂತರ ಕೇರಳದ ಪಶ್ಚಿಮಘಟ್ಟದಲ್ಲಿ ಪತ್ತೆಯಾಗಿತ್ತು' ಎನ್ನುತ್ತಾರೆ ಜೀವವೈವಿಧ್ಯ ಸಂಶೋಧಕ ಮಂಜುನಾಥ ನಾಯಕ್.

ನಿರ್ದೇಶಕ ಸುರೇಶ ಕುಲಕರ್ಣಿ ನಿಧನ

ಧಾರವಾಡ: ನಟ, ನಿರ್ದೇಶಕ, ಹಿರಿತೆರೆ ಹಾಗೂ ಕಿರುತೆರೆ ತಂತ್ರಜ್ಞ ಸುರೇಶ ಕುಲಕರ್ಣಿ (75) ಕೆಲ ಕಾಲದ ಅನಾರೋಗ್ಯ ದಿಂದ ಬುಧವಾರ ನಿಧನರಾದರು.

ಅವಿವಾಹಿತರಾಗಿದ್ದ ಅವರು ಇಲ್ಲಿನ ಮಾಳಮಡ್ಡಿಯಲ್ಲಿ ನೆಲೆಸಿದ್ದರು. ನಾಟಕಕಾರ ಹಾಗೂ ನಿರ್ದೇಶಕ ದಿ.ಗಿರೀಶ ಕಾರ್ನಾಡ ಅವರೊಂದಿಗೆ ಚಿತ್ರರಂಗದಲ್ಲಿ ಸಹಾಯಕ ನಿರ್ದೇಶಕರಾಗಿ ಹಲವು ವರ್ಷ ಕೆಲಸ ಮಾಡಿದ್ದರು. ಅಂತ್ಯಕ್ರಿಯೆ ನಗರದ ಹೊಸಯಲ್ಲಾಪುರ ರುದ್ರಭೂಮಿಯಲ್ಲಿ ನೆರವೇರಿತು.

ಕಾಶ್ಮೀರದ ತೀತ್ವಾಲ್‌ನಲ್ಲಿ ಶಾರದಾ ದೇಗುಲ ನಿರ್ಮಾಣ

ಶಾರದಾಂಬೆ ಪಂಚಲೋಹ ಮೂರ್ತಿ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕಾಶ್ಮೀರದ ಗಡಿಯ ತೀತ್ವಾಲ್‌ನಲ್ಲಿ ನಿರ್ಮಿಸುತ್ತಿರುವ ಶಾರದಾ ಯಾತ್ರಾ ದೇಗುಲದಲ್ಲಿ ಪ್ರತಿಷ್ಠಾಪಿಸಲು ಶೃಂಗೇರಿಯ ದಕ್ಷಿಣಾಮ್ನಾಯ ಶಾರದಾ ಪೀಠದಿಂದ ಅನುಗ್ರಹಿಸಿರುವ ಶಾರದಾಂಬೆ ಪಂಚಲೋಹ ಮೂರ್ತಿಯನ್ನು ಕಾಶ್ಮೀರದ ಸೇವ್ ಶಾರದಾ ಸಮಿತಿಗೆ ಬುಧವಾರ ಹಸ್ತಾಂತರಿಸಲಾಯಿತು.

ಶಾರದಾಂಬೆ ಸನ್ನಿಧಿಯ ಪ್ರವಚನ ಮಂದಿರದಲ್ಲಿ ಪಂಚಲೋಹ ಮೂರ್ತಿಗೆ ಪೂಜೆ ಸಲ್ಲಿಸಲಾಯಿತು. ಶಾರದಾ ಪೀಠದ ವಿಧುಶೇಖರಭಾರತೀ ಸ್ವಾಮೀಜಿ ಅವರು ಪೂಜಾ ಕೈಂಕರ್ಯ ನೇರವೇರಿಸಿದರು. ಮೂರ್ತಿಯು ಮೂರು ಅಡಿ ಎತ್ತರ ಇದೆ. ಸಮಿತಿಯ ಮುಖ್ಯಸ್ಥ ರವೀಂದ್ರ ಪಂಡಿತ ಅವರು ಮೂರ್ತಿಯನ್ನು ಪಡೆದುಕೊಂಡರು. ಸಮಿತಿಯ ಮಂಜುನಾಥ ಶರ್ಮ, ಸದಸ್ಯರು ಇದ್ದರು. ವಿಜಯದಶಮಿ ಅಂಗವಾಗಿ ದೇಗುಲದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು.

ರವೀಂದ್ರ ಪಂಡಿತ 'ಪ್ರಜಾವಾಣಿ'ಯೊಂದಿಗೆ ಮಾತನಾಡಿ, 'ತೀತ್ವಾಲ್‌ನಲ್ಲಿ ದೇಗುಲ ನಿರ್ಮಾಣ ಕಾಮಗಾರಿ 2023 ನವೆಂಬರ್ ಹೊತ್ತಿಗೆ ಮುಗಿಯುವ ಸಾಧ್ಯತೆ ಇದೆ. ಪಂಚಲೋಹ ಮೂರ್ತಿಯನ್ನು ಈಗ ಶೃಂಗೇರಿಯ ಸನ್ನಿಧಿಯಲ್ಲಿ ಇಟ್ಟಿರುತ್ತೇವೆ. ಜ. 15ರ ನಂತರ ಕಾಶ್ಮೀರಕ್ಕೆ ಒಯ್ಯಲು ನಿರ್ಧರಿಸಿದ್ದೇವೆ' ಎಂದು ತಿಳಿಸಿದರು.

ಶೃಂಗೇರಿಯಲ್ಲಿ ಶಾರದಾ ಪಂಚಲೋಹ ಮೂರ್ತಿಯನ್ನು ಕಾಶ್ಮೀರದ ಸೇವ್ ಶಾರದಾ ಸಮಿತಿಯವರಿಗೆ ಬುಧವಾರ ಹಸ್ತಾಂತರಿಸಲಾಯಿತು. ಶಾರದಾ ಪೀಠದ ವಿಧುಶೇಖರಭಾರತೀ ಸ್ವಾಮೀಜಿ ಇದ್ದರು.

ಗುರುವಾರ, ಅಕ್ಟೋಬರ್ 6, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 276 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ನಾಟಕ ಈಜುಪಟುಗಳ ಪಾರಮ್ಯ 10

ಆಳ-ಅಗಲ ತೃತೀಯ ರಂಗ: ಪ್ರಾದೇಶಿಕ ಪಕ್ಷಗಳ ರಾಷ್ಟ್ರ ರಾಜಕಾರಣದ ಕನಸು

ಮುಸ್ಲಿಂ ಯುವಕರನ್ನು ಥಳಿಸಿದ ಪೊಲೀಸರು: ತನಿಖೆಗೆ ಆದೇಶ 9

ಮಾದರಿ ನೀತಿಸಂಹಿತೆ ತಿದ್ದುಪಡಿಗೆ ನಿರ್ಧಾರ 9

ಪರವಾನಗಿ, ಇ–ಸ್ವತ್ತು, ಸಹಿ ಹೊಣೆಗಾರಿಕೆಯೂ ಪಿಡಿಒಗಳ ಹೆಗಲಿಗೆ

ಗ್ರಾ.ಪಂ ಅಧ್ಯಕ್ಷರ ಅಧಿಕಾರಕ್ಕೆ ಕತ್ತರಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಹಣಕಾಸು ನಿರ್ವಹಣೆಯ ಹೊಣೆಗಾರಿಕೆಯಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಹೊರಗಿಡಲು ಸರ್ಕಾರ ನಿರ್ಧರಿಸಿದ್ದು, ವ್ಯವಹಾರದ ಎಲ್ಲ ಚೆಕ್‌ಗಳಿಗೂ ಸಹಿ ಮಾಡುವ ಅಧಿಕಾರವನ್ನು ಪಿಡಿಒ ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರಿಗೆ (ಎಸ್‌ಡಿಎಎ) ನೀಡಲಾಗಿದೆ.

ಈ ಸಂಬಂಧ ರೂಪಿಸಲಾದ ನಡಾವಳಿಗಳನ್ನು ಜಾರಿಗೊಳಿಸಲು ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣಗಳಿಗೆ ತಿದ್ದುಪಡಿ ಮತ್ತು ಗ್ರಾಮ ಪಂಚಾಯಿತಿ ನೌಕರರ ಸೇವಾ ವಿಷಯಗಳ ಕುರಿತು ಗ್ರಾಮೀಣಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ ಸಭೆಯಲ್ಲಿ ನಡಾವಳಿಗಳನ್ನು ರೂಪಿಸಲಾಗಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯ ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕಪತ್ರಗಳ ನಿಯಮಕ್ಕೆ 2006ರಲ್ಲಿ ತಂದಿದ್ದ ತಿದ್ದುಪಡಿಯಂತೆ ಗ್ರಾಮ ಪಂಚಾಯಿತಿಯ ಹಣಕಾಸಿನ ವ್ಯವಹಾರವನ್ನು ಸರ್ಕಾರ ಸೂಚಿಸುವ ಅಧಿಕಾರಿಗಳು ಅಥವಾ ಪ್ರಾಧಿಕಾರ ನಿರ್ವಹಿಸಬಹುದು. ಇಂತಹ ಅಧಿಕಾರವನ್ನು ಇಲ್ಲಿಯವರೆಗೂ ಸ್ಥಳೀಯ ಆಡಳಿತದ ಚುನಾಯಿತ ಮುಖ್ಯಸ್ಥರಾದ ಅಧ್ಯಕ್ಷರಿಗೂ ನೀಡಲಾಗಿತ್ತು. ಉದ್ಯೋಗ ಖಾತ್ರಿ, ವಿವಿಧ ವಸತಿ ಯೋಜನೆಗಳ ಅನುಷ್ಠಾನ, ಹಣಕಾಸಿನ ನಿಧಿ, ಪಂಚಾಯಿತಿ ತೆರಿಗೆ, ಖರ್ಚು– ವೆಚ್ಚಗಳ ಎಲ್ಲ ಚೆಕ್‌ಗಳಿಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಹಿಂದೆ ಕಾರ್ಯದರ್ಶಿ) ಹಾಗೂ ಅಧ್ಯಕ್ಷರ ಜಂಟಿ ಸಹಿ ಕಡ್ಡಾಯವಾಗಿತ್ತು. ಈಗ ಸರ್ಕಾರ 2006ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಧ್ಯಕ್ಷರ ಸಹಿ ಅಧಿಕಾರ ಹಿಂಪಡೆಯಲು ಹೊಸದಾಗಿ ನಡಾವಳಿ ರೂಪಿಸಿದೆ.

ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅಧಿಕಾರ ಮೊಟಕುಗೊಳಿಸುವ ನಿರ್ಧಾರ ಪ್ರಜಾಪ್ರಭುತ್ವ ವಿರೋಧಿ ನಡೆ. ಈ ಕುರಿತು ಹೋರಾಟ ರೂಪಿಸಲಾಗುವುದು.

ಕಾಡಶೆಟ್ಟಿಹಳ್ಳಿ ಸತೀಶ್,
ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ

ಪ್ರಜಾವಾಣಿ ವಿಶೇಷ

ಅಧ್ಯಕ್ಷರ ಅಧಿಕಾರ ಮೊಟಕು ಏಕೆ?: ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ನೀಡಲಾಗಿದ್ದ ಸಹಿ ಅಧಿಕಾರವನ್ನು ಹಿಂಪಡೆಯಲು ಸರ್ಕಾರ ಪ್ರಮುಖವಾಗಿ ಎರಡು ಕಾರಣಗಳನ್ನು ಪಟ್ಟಿ ಮಾಡಿದೆ. ವಿವಿಧ ಯೋಜನೆಗಳು, ಕಾರ್ಯಕ್ರಮಗಳ ಬಿಲ್ ಪಾವತಿ ಮಾಡಲು ಲಂಚ ಪಡೆಯುವಾಗ ರಾಜ್ಯದ ಹಲವು ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಹಲವು ಪ್ರಕರಣಗಳಲ್ಲಿ ವಿಳಂಬವಾಗಿ ಬಿಲ್ ಪಾವತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಧ್ಯಕ್ಷರು ಚುನಾಯಿತ ಪ್ರತಿನಿಧಿಯಾಗಿದ್ದು, ಹಣಕಾಸಿನ ವ್ಯವಹಾರಗಳಿಗೆ ಹೊಣೆಗಾರರಲ್ಲದ ಕಾರಣ ಸರ್ಕಾರಿ ನೌಕರರಾದ ಪಿಡಿಒ, ಎಸ್‌ಡಿಎಎ ನಿರ್ವಹಿಸಬೇಕು. ಒಂದು ವೇಳೆ ಪಂಚಾಯಿತಿಗಳಲ್ಲಿ ಎಸ್‌ಡಿಎಎ ಸ್ಥಾನ ಖಾಲಿ ಇದ್ದರೆ, ಪಿಡಿಒ ಜತೆಗೆ ಕಾರ್ಯದರ್ಶಿ ಜಂಟಿ ಸಹಿ ಮಾಡಬೇಕು ಎಂದು ಸೂಚಿಸಲಾಗಿದೆ.

ತೆರಿಗೆ ನಿರ್ಧಾರ ಹೊಣೆಗಾರಿಕೆಯೂ ಮೊಟಕು: ಇದುವರೆಗೂ ಗ್ರಾಮ ಪಂಚಾಯಿತಿ ನಿರ್ಣಯ ತೆಗೆದುಕೊಂಡ ನಂತರ, ಪಂಚಾಯಿತಿ ನಿರ್ಣಯ ಸಂಖ್ಯೆ, ದಿನಾಂಕ ನಮೂದಿಸಿ ಇ–ಸ್ವತ್ತು ತಂತ್ರಾಂಶದ ಮೂಲಕ ತೆರಿಗೆ ನಿರ್ಧಾರ ಪಟ್ಟಿಗಳನ್ನು ವಿತರಿಸಲಾಗುತ್ತಿತ್ತು. ಪಂಚಾಯಿತಿ ಸಭೆಗಳು ಕಾಲಕಾಲಕ್ಕೆ ನಡೆಯದ ಕಾರಣ, ನಮೂನೆ ವಿತರಿಸುವ ಸಂಪೂರ್ಣ ಅಧಿಕಾರವನ್ನು ಪಿಡಿಒಗಳಿಗೇ ನೀಡಲಾಗಿದೆ. ರಾಜ್ಯದಲ್ಲಿ 5,963 ಗ್ರಾಮ ಪಂಚಾಯಿತಿಗಳಿದ್ದು, 91,437 ಗ್ರಾಮ ಪಂಚಾಯಿತಿ ಸದಸ್ಯರು ಇದ್ದಾರೆ.

ಸದಸ್ಯರ ಅಧಿಕಾರವೂ ಮೊಟಕು

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಗೃಹ, ವಾಣಿಜ್ಯ ಕಟ್ಟಡ ಕಾಮಗಾರಿಗಳು, ಕೈಗಾರಿಕೆ, ಗಣಿಗಾರಿಕೆ, ಅಂಗಡಿ, ಹೋಟೆಲ್ ಮತ್ತಿತರ ವಾಣಿಜ್ಯ ವಹಿವಾಟುಗಳ ಆರಂಭಕ್ಕೆ ಪರವಾನಗಿ, ಇ–ಸ್ವತ್ತು (ನಮೂನೆ–9, 11ಎ, 11ಬಿ) ನೀಡುವ ಕುರಿತು ಗ್ರಾಮ ಪಂಚಾಯಿತಿ ಸದಸ್ಯರ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುತ್ತಿತ್ತು. ಪಂಚಾಯತ್ ರಾಜ್ ಕಾಯ್ದೆಯ 64 ರಿಂದ 70ರವರೆಗಿನ ನಿಯಮಗಳಿಗೆ ತಿದ್ದುಪಡಿ ತಂದು ಪರವಾನಗಿ ನೀಡುವ ಅಧಿಕಾರವನ್ನು ಪಿಡಿಒಗಳಿಗೆ ನೀಡಲಾಗಿದೆ. ನೀಡಿದ ನಂತರ ಸಭೆಯ ಗಮನಕ್ಕೆ ತರಲೂ ಸೂಚಿಸಲಾಗಿದೆ. ಗ್ರಾಮ ಪಂಚಾಯಿತಿ ಸಭೆಗಳು ಸಕಾಲದಲ್ಲಿ ನಡೆಯದ ಕಾರಣ ವಿಳಂಬ ತಪ್ಪಿಸಲು ಇಂತಹ ಕ್ರಮ ಅನಿವಾರ್ಯ ಎಂದು ವಿವರಿಸಲಾಗಿದೆ.

ನಾಡಹಬ್ಬ ದಸರೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಜಂಬೂಸವಾರಿಯು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದ ಮೈಸೂರಿನ ರಸ್ತೆಯಲ್ಲಿ ಬುಧವಾರ ಸಾಗಿತು ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.

ದೀಪದ ಬೆಳಕಿನಲ್ಲಿ ಅದ್ಧೂರಿ ಜಂಬೂಸವಾರಿ

• ಕೆ. ನರಸಿಂಹಮೂರ್ತಿ

ಮೈಸೂರು: ಕೋವಿಡ್‌ನಿಂದಾಗಿ ಎರಡು ವರ್ಷ ಅಂಬಾವಿಲಾಸ ಅರಮನೆಯ ಆವರಣಕ್ಕಷ್ಟೇ ಸೀಮಿತವಾಗಿದ್ದ ನಾಡಹಬ್ಬ ದಸರಾ ಉತ್ಸವದ ಜಂಬೂಸವಾರಿ ಬುಧವಾರ ಅದ್ಧೂರಿಯಾಗಿ ನಡೆಯಿತು. ಇದಕ್ಕೆ ಸಾವಿರಾರು ಮಂದಿ ಸಾಕ್ಷಿಯಾದರು.

ಸಂಜೆ 5.37ಕ್ಕೆ ಅರಮನೆ ಆವರಣದಲ್ಲಿ ಶುರುವಾದ ಜಂಬೂಸವಾರಿ ರಾಜಪಥವನ್ನು ಪ್ರವೇಶಿಸಿ ಮುಂದೆ ಸಾಗುವ ಹೊತ್ತಿಗೆ ಕತ್ತಲೆ ಆವರಿಸಿತು. ರಸ್ತೆಯುದ್ದಕ್ಕೂ ಝಗಮಗಿಸಿದ ವಿದ್ಯುತ್ ದೀಪಾಲಂಕಾರದ ಬೆಳಕಿನಲ್ಲಿ ಅಂಬಾರಿಯು ಹೊಳೆದು ದಸರೆಯನ್ನು ವಿಶೇಷವಾಗಿ ಸಂಪನ್ನಗೊಳಿಸಿತು. ವಿದ್ಯುತ್ ದೀಪಗಳ ಬೆಳಕಿನಲ್ಲಿ ಸಾಗಲು ಆನೆಗಳಿಗೆ ತರಬೇತಿಯನ್ನೂ ನೀಡಿದ್ದು ಈ ಬಾರಿಯ ವಿಶೇಷ. ಉತ್ಸವದ ಇತಿಹಾಸದಲ್ಲಿ ಇದೇ ಮೊದಲು.

ಮಧ್ಯಾಹ್ನ 2.34ಕ್ಕೆ ಅರಮನೆ ಹೊರ ಆವರಣದ ಕೋಟೆ ಆಂಜನೇಯ ಗುಡಿಯ ಮುಂದೆ ನಂದಿಧ್ವಜಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪೂಜೆ ಸಲ್ಲಿಸಿದ ಬಳಿಕ ಸ್ತಬ್ಧಚಿತ್ರ ಮತ್ತು ಕಲಾತಂಡಗಳ ಮೆರವಣಿಗೆ ಆರಂಭವಾಯಿತು.

ಎರಡೂವರೆ ಗಂಟೆ ಜನಸಾಗರವನ್ನು ಆಕರ್ಷಕ ಮೆರವಣಿಗೆ ಹಿಡಿದಿಟ್ಟಿತ್ತು. ಬಳಿಕ, ಅಭಿಮನ್ಯು ಆನೆ ಹೊತ್ತಿದ್ದ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯಲ್ಲಿ ಅಲಂಕರಿಸಿಡಲಾಗಿದ್ದ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುಷ್ಪನಮನ ಸಲ್ಲಿಸಿದರು.

ರಾಷ್ಟ್ರಗೀತೆ ಮುಗಿಯುವುದರೊಳಗೆ 21 ಸುತ್ತು ಕುಶಾಲತೋಪು ಸಿಡಿಸಲಾಯಿತು. ಆನೆಗಳು ಸೊಂಡಿಲೆತ್ತಿ ದೇವಿಗೆ ನಮಸ್ಕರಿಸಿದವು. ಎಲ್ಲರೂ ಚಾಮುಂಡೇಶ್ವರಿಗೆ ಜೈಕಾರ ಹಾಕಿದ ಬಳಿಕ ಅಂಬಾರಿಯು ಮುಂದಕ್ಕೆ ಸಾಗಿತು.

ಅಂಬಾರಿ ಆನೆ ಜೊತೆ ಕುಮ್ಕಿ ಆನೆಗಳಾಗಿ ಚೈತ್ರಾ, ಕಾವೇರಿ ಹೆಜ್ಜೆ ಹಾಕಿದರೆ, ಅರ್ಜುನ ನಿಶಾನೆ ಆನೆಯಾಗಿ ಜವಾಬ್ದಾರಿ ನಿರ್ವಹಿಸಿದ. ಮಹೇಂದ್ರ, ಭೀಮ, ಧನಂಜಯ, ಗೋಪಾಲಸ್ವಾಮಿ ಹಾಗೂ ಗೋಪಿ ಆನೆಗಳು ಜೊತೆಯಾದವು. ಆಕರ್ಷಕವಾದ ಸ್ತಬ್ಧಚಿತ್ರಗಳು, ಪೊಲೀಸ್ ಪಡೆ, ಅಶ್ವಾರೋಹಿ ಪಡೆಗಳೊಂದಿಗೆ, ಜಾನಪದ ಕಲಾ ತಂಡಗಳ ನೂರಾರು ಕಲಾವಿದರು ಸಾಂಸ್ಕೃತಿಕ ವೈಭವವನ್ನು ಸೃಷ್ಟಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಸಾಯನವಿಜ್ಞಾನ ಮೂವರಿಗೆ ನೊಬೆಲ್

ಸ್ಟಾಕ್‌ಹೋಮ್ (ಎಪಿ): ರಸಾಯನ ವಿಜ್ಞಾನದಲ್ಲಿನ ಸಂಶೋಧನೆಗಾಗಿ ಮೂವರು ವಿಜ್ಞಾನಿಗಳನ್ನು ಈ ವರ್ಷದ ನೊಬೆಲ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ರಾಯಲ್ ಸ್ವೀಡಿಷ್ ಅಕಾಡೆಮಿ ಘೋಷಿಸಿದೆ. 8

ನೊಬೆಲ್ ಪಟ್ಟಿಯಲ್ಲಿ ಜುಬೈರ್, ಸಿನ್ಹಾ

ನ್ಯೂಯಾರ್ಕ್ (ಪಿಟಿಐ): ಆಲ್ಟ್ ನ್ಯೂಸ್ ಸಹ ಸಂಸ್ಥಾಪಕರಾದ ಪ್ರತೀಕ್ ಸಿನ್ಹಾ, ಮೊಹಮ್ಮದ್ ಜುಬೈರ್ ಹಾಗೂ ಲೇಖಕ ಹರ್ಷ್ ಮಂದರ್ ಅವರು ಈ ವರ್ಷದ ನೊಬೆಲ್ ಶಾಂತಿ ಪುರಸ್ಕಾರದ ನೆಚ್ಚಿನ ಸ್ಪರ್ಧಿ ಪಟ್ಟಿಯಲ್ಲಿದ್ದಾರೆ. 8

ಕಂದಕಕ್ಕೆ ಉರುಳಿದ ಬಸ್: 33 ಸಾವು

ಪೌಡಿ (ಉತ್ತರಾಖಂಡ) (ಪಿಟಿಐ): ಪೌಡಿ ಗಡವಾಲ್ ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ ಮದುವೆ ದಿಬ್ಬಣದ ಬಸ್ ಕಂದಕಕ್ಕೆ ಉರುಳಿ 33 ಮಂದಿ ಮೃತಪಟ್ಟು, 19 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. 9

‘ಪಾಕಿಸ್ತಾನದ ಜೊತೆ ಮಾತುಕತೆ ಇಲ್ಲ’

ಬಾರಾಮುಲ್ಲಾ (ಪಿಟಿಐ): ‘ಪಾಕಿಸ್ತಾನದ ಜೊತೆ ಮಾತುಕತೆ ನಡೆಸುವ ಪ್ರಶ್ನೆಯೇ ಇಲ್ಲ. ನರೇಂದ್ರ ಮೋದಿ ಸರ್ಕಾರವು ಭಯೋತ್ಪಾದನೆಯನ್ನು ಸಹಿಸುವುದಿಲ್ಲ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. 9

‘ಜನಸಂಖ್ಯೆ ನಿಯಂತ್ರಣ ಎಲ್ಲಾ ಧರ್ಮಕ್ಕೂ ಅನ್ವಯವಾಗಲಿ’

ನಾಗಪುರ/ಬೆಂಗಳೂರು: ದೇಶದಲ್ಲಿನ ಎಲ್ಲಾ ಧಾರ್ಮಿಕ ಸಮುದಾಯಗಳಿಗೆ ಅನ್ವಯವಾಗುವಂತೆ ಜನಸಂಖ್ಯಾ ನೀತಿಯನ್ನು ಜಾರಿಗೆ ತರಬೇಕು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಬುಧವಾರ ಹೇಳಿದ್ದಾರೆ.



ಮೋಹನ್ ಭಾಗವತ್

ನಾಗಪುರದಲ್ಲಿರುವ ಆರ್‌ಎಸ್‌ಎಸ್ ಕೇಂದ್ರ ಕಚೇರಿಯಲ್ಲಿ ನಡೆದ ವಿಜಯದಶಮಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಿಶ್ವದಲ್ಲಿ ಜನಸಂಖ್ಯೆಯು ಎರಡು ರೀತಿಯಲ್ಲಿ ಏರಿಕೆಯಾಗುತ್ತಿದೆ. ಒಂದು ದೇಶದ ಸಂಪನ್ಮೂಲವಾಗಿ ಬಳಕೆಯಾಗುವ ಜನಸಂಖ್ಯೆಯ ಏರಿಕೆ. ಮತ್ತೊಂದು ದೇಶಕ್ಕೆ ಹೊರೆಯಾಗುವ ಜನಸಂಖ್ಯೆ. ಎರಡನೇ ಸ್ವರೂಪದ ಜನಸಂಖ್ಯೆ ಏರಿಕೆಯಾಗುತ್ತಲೇ ಇದ್ದರೆ ಅದು ಹೊರಲಾಗದ ಹೊರೆಯಾಗುತ್ತದೆ. ಒಬ್ಬ ಮಹಿಳೆ ಎಷ್ಟು ಮಕ್ಕಳನ್ನು ಹೆತ್ತಿದ್ದಾಳೆ ಎಂಬುದು ಆಕೆಯ ಮಾನಸಿಕ ಆರೋಗ್ಯ, ಜತೆಗೆ ಆರ್ಥಿಕ ಸ್ಥಿತಿಯನ್ನೂ ಬಾಧಿಸುತ್ತದೆ. ದೇಶದ ಪರಿಸರವನ್ನೂ ಬಾಧಿಸುತ್ತದೆ’ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

‘ಯಾವುದೇ ಕುಟುಂಬ ಏನು ಬಯಸುತ್ತದೆ ಎಂಬುದೂ ಜನಸಂಖ್ಯೆಯ ಏರಿಕೆಯ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ರಾಷ್ಟ್ರೀಯ ಅಸ್ಮಿತೆ ಮತ್ತು ರಾಷ್ಟ್ರೀಯ ಭದ್ರತೆಗೆ ಪ್ರಸ್ತುತವಾಗುವಂತೆ ಜನಸಂಖ್ಯೆಯನ್ನು ರೂಪಿಸಿ, ರಕ್ಷಿಸಬೇಕಾಗುತ್ತದೆ. ಹೀಗಾಗಿ ಜನಸಂಖ್ಯೆಯ ನಿಯಂತ್ರಣ ನೀತಿ ಅತ್ಯಗತ್ಯ. ಆದರೆ ಜನಸಂಖ್ಯಾ ನಿಯಂತ್ರಣ ನೀತಿಯು ಎಲ್ಲಾ ಧಾರ್ಮಿಕ ಸಮುದಾಯಗಳಿಗೆ ಸಮಾನವಾಗಿ ಅನ್ವಯವಾಗಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

ದೇಶದಲ್ಲಿ ಫಲವಂತಿಕೆ ದರವು ಸರಿಯಾದ ಮಟ್ಟಕ್ಕೆ ಬಂದಿದೆ. ಭವಿಷ್ಯವನ್ನು ಕಾಯ್ದುಕೊಳ್ಳಲು ಜನಸಂಖ್ಯೆ ಶಕ್ತವಾಗಿದೆ. ಹೀಗಾಗಿ ಇನ್ನಷ್ಟು ನಿಯಂತ್ರಣದ ಅಗತ್ಯವಿಲ್ಲ

ಅಸಾದುದ್ದೀನ್ ಒವೈಸಿ,
ಎಐಎಂಐಎಂ ಅಧ್ಯಕ್ಷ

ನವೆಂಬರ್‌ನಿಂದ ದಿನಕ್ಕೆ 20 ಲಕ್ಷ ಬ್ಯಾರಲ್ ತೈಲ ಉತ್ಪಾದನೆ ಕಡಿತ

ವಿಯೆನ್ನಾ (ಎಎಫ್‌ಪಿ): ಪೆಟ್ರೋಲಿಯಂ ರಫ್ತುದಾರ ರಾಷ್ಟ್ರಗಳ ಒಕ್ಕೂಟ (ಒಪೆಕ್) ಮತ್ತು ಆ ಒಕ್ಕೂಟದ ಮಿತ್ರರಾಷ್ಟ್ರಗಳ (ಒಪೆಕ್ +) ಪ್ರತಿನಿಧಿಗಳು ನವೆಂಬರ್‌ನಿಂದ ದಿನಕ್ಕೆ 20 ಲಕ್ಷ ಬ್ಯಾರಲ್‌ಗಳಷ್ಟು ಕಚ್ಚಾ ತೈಲ ಉತ್ಪಾದನೆ ತಗ್ಗಿಸುವ ನಿರ್ಧಾರಕ್ಕೆ ಬಂದಿವೆ.

2020ರ ಬಳಿಕ ಅತ್ಯಂತ ಗರಿಷ್ಠ ಮಟ್ಟದ ಉತ್ಪಾದನೆ ಕಡಿತ ಇದಾಗಿದೆ. ಜಾಗತಿಕ ಆರ್ಥಿಕತೆಯ ಬಗ್ಗೆ ಮೂಡಿರುವ ಅನಿಶ್ಚಿತ ಪರಿಸ್ಥಿತಿ ಮತ್ತು ತೈಲ ಮಾರುಕಟ್ಟೆಯ ಮುನ್ನೋಟದ ಆಧಾರದ ಮೇಲೆ ಉತ್ಪಾದನೆ ಕಡಿತದ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ‘ಒಪೆಕ್ +’ ಬುಧವಾರ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ನಿರ್ಧಾರದಿಂದ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಭಾರಿ ಏರಿಕೆಗೆ ಕಾಣಲಿದೆ. ಹಲವು ದೇಶಗಳಲ್ಲಿ ಹಣದುಬ್ಬರವು ಈಗಾಗಲೇ ದಶಕಗಳ ಗರಿಷ್ಠ ಮಟ್ಟದಲ್ಲಿ ಇದ್ದು, ತೈಲ ಉತ್ಪಾದನೆ ಕಡಿತದಿಂದಾಗಿ ಅದು ಇನ್ನಷ್ಟು ಏರಿಕೆ ಆಗುವ ನಿರೀಕ್ಷೆ ಇದೆ.

ರಷ್ಯಾ ದೇಶವು ಉಕ್ರೇನ್ ಮೇಲೆ ದಾಳಿ ಆರಂಭಿಸಿದ ಬಳಿಕ ಕಚ್ಚಾ ತೈಲ ದರ ಭಾರಿ ಏರಿಕೆ ಕಂಡಿತು. ಇದನ್ನು ನಿಯಂತ್ರಿಸಲು ಉತ್ಪಾದನೆ ಹೆಚ್ಚಿಸುವಂತೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಜುಲೈನಲ್ಲಿ ಸೌದಿ ಅರೇಬಿಯಾಕ್ಕೆ ಒತ್ತಾಯಿಸಿದ್ದರು.

8ನೇ ಪುಟ ನೋಡಿ

ಓದುಗರು ಕಂಡಂಥ ರಸ್ತೆ ಗುಂಡಿ

‘ಸವಾರರ ಹರಸಾಹಸ’

ಎಚ್‌ಎಂಟಿ ಆಸ್ಪತ್ರೆಗೆ ಹತ್ತಿರದ ಜಾಲಹಳ್ಳಿ ಪೊಲೀಸ್ ಠಾಣೆಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಗುಂಡಿಮಯವಾಗಿದೆ. ಈ ರಸ್ತೆಯಲ್ಲಿ ದ್ವಿಚಕ್ರ ವಾಹನ ಸವಾರರು ಸಂಚರಿಸಲು ಹರಸಾಹಸ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ರಸ್ತೆಯಲ್ಲಿ ದೊಡ್ಡ ಗುಂಡಿಗಳು ಬಿದ್ದಿರುವುದರಿಂದ ಈಗಾಗಲೇ ಹಲವಾರು ಅಪಘಾತಗಳು ಸಂಭವಿಸಿವೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ರಾಘವೇಂದ್ರ ಎಚ್.ಎಂ., ಸ್ಥಳೀಯ ನಿವಾಸಿ

‘ಶ್ರೀಗಂಧಕಾವಲ್‌ನಲ್ಲಿ ಬೃಹತ್ ಗುಂಡಿ’

ನಾಗರಬಾವಿಯ ಶ್ರೀಗಂಧಕಾವಲ್‌ನ ಡಿ ಗ್ರೂಪ್ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ಕೆಇಬಿ ರಸ್ತೆಯಲ್ಲಿ ಬೃಹತ್ ಗುಂಡಿ ಬಿದ್ದು ಮೂರು ವರ್ಷಗಳೇ ಆಗಿವೆ. ಇದುವರೆಗೂ ಈ ರಸ್ತೆ ದುರಸ್ತಿಯಾಗಿಲ್ಲ. ವಾಹನ ಸವಾರರು ಈ ಗುಂಡಿಯಲ್ಲಿ ಬಿದ್ದ ಹಲವು ನಿದರ್ಶನಗಳಿವೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ನಿತ್ಯ ಇಲ್ಲಿ ನೂರಾರು ವಾಹನಗಳು ಸಂಚರಿಸುತ್ತಿದ್ದು, ಇನ್ನೊಂದು ಅನಾಹುತ ಸಂಭವಿಸುವ ಮುನ್ನ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

–ಕೆ. ಆರ್. ರಂಗನಾಥ್, ಸ್ಥಳೀಯ ನಿವಾಸಿ



ಮೇಲ್ಸೇತುವೆ ಮೇಲಿರುವ ಗುಂಡಿ ಮುಚ್ಚಿ

ದೊಡ್ಡನೆಕ್ಕುಂದಿ ಮೇಲ್ಸೇತುವೆ ಮೇಲೆ ಬಿದ್ದಿರುವ ಗುಂಡಿಯನ್ನು ತ್ವರಿತವಾಗಿ ಮುಚ್ಚಬೇಕು. ದಿನನಿತ್ಯ ಈ ಮಾರ್ಗದಲ್ಲಿ ಸಂಚರಿಸುವ ವಾಹನಗಳು ನಿಧಾನಗತಿಯಲ್ಲಿ ಸಾಗುತ್ತಿವೆ. ಇದರಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳು ತಮ್ಮ ತರಗತಿಗಳಿಗೆ, ನೌಕರರು ತಮ್ಮ ಕಚೇರಿಗಳಿಗೆ ತಡವಾಗಿ ತಲುಪುತ್ತಿದ್ದಾರೆ. ಕೂಡಲೇ ಮೇಲ್ಸೇತುವೆ ಮೇಲಿನ ಗುಂಡಿ ಮುಚ್ಚಲು ಅಗತ್ಯ ಕ್ರಮ ಕೈಗೊಳ್ಳಬೇಕು.

–ವೆಂಕಟ್, ವಾಹನ ಸವಾರ

ಬಿಬಿಎಂಪಿ ನಗರದ ರಸ್ತೆಗಳನ್ನು ಗುಂಡಿಮುಕ್ತವನ್ನಾಗಿಸಲು ಕಾರ್ಯಪಡೆ ರಚಿಸಿದೆ. ಆದರೆ, ಹಲವು ತಿಂಗಳಿಂದ ಸಾಕಷ್ಟು ರಸ್ತೆಗಳಲ್ಲಿ ಗುಂಡಿ ಉಳಿದೇ ಇರುತ್ತದೆ. ಇಂತಹ ರಸ್ತೆ ಗುಂಡಿಗಳು ನಿಮ್ಮ ಬಡಾವಣೆ ಅಥವಾ ನೀವು ಸಂಚರಿಸುವ ರಸ್ತೆಯಲ್ಲಿ ಕಂಡರೆ ಅದರ ಫೋಟೊ ತೆಗೆದು, ಅದು ಎಲ್ಲಿದೆ, ಯಾವ ಪ್ರದೇಶ ಎಂಬ ಮಾಹಿತಿಯ ಸಹಿತ ಕಳುಹಿಸಿ. ‘ಪ್ರಜಾವಾಣಿ’ ಅವನ್ನು ಪ್ರಕಟಿಸಿ, ಬಿಬಿಎಂಪಿ ಗಮನ ಸೆಳೆಯಲಿದೆ.

ಪ್ರಜಾವಾಣಿ 96060 38256

ನಗರದಲ್ಲಿ ಇಂದು

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ನಿರ್ಮಿಸಿರುವ ಜಯದೇವ ಹೃದ್ರೋಗ ಆಸ್ಪತ್ರೆ 50 ಹಾಸಿಗೆ ಉಪಘಟಕ, ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ 50 ಹಾಸಿಗೆ ಸಾಮರ್ಥ್ಯದ ತೀವ್ರ ನಿಗಾ ಘಟಕದ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಡಾ.ಕೆ. ಸುಧಾಕರ್, ಸ್ಥಳ: ಕೆ.ಸಿ. ಜನರಲ್ ಆಸ್ಪತ್ರೆ ಆವರಣ, ಮಲ್ಲೇಶ್ವರ, ಬೆಳಿಗ್ಗೆ 11

ಗ್ಲೇನ್ಸ್ ಬೇಕ್ ಹೌಸ್ ಉದ್ಘಾಟನೆ: ಆರಗ ಜ್ಞಾನೇಂದ್ರ, ಅತಿಥಿಗಳು: ಎಚ್. ಹಾಲಪ್ಪ, ಕೃಷ್ಣ ಬೈರೇಗೌಡ, ಆಯೋಜನೆ ಮತ್ತು ಸ್ಥಳ: ಸಹಕಾರನಗರ, ಸಂಜೆ 6

ಕೂಚಿಪುಡಿ ಮತ್ತು ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಅನಘಾ ಪ್ರಕಾಶ್ ಮತ್ತು ತಂಡ, ಆಯೋಜನೆ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7

ವೈಟ್‌ಫೀಲ್ಡ್ ಮೆಟ್ರೋ: 45 ದಿನ ಪರೀಕ್ಷಾರ್ಥದ ಬಳಿಕ ಸುರಕ್ಷತೆ ಪರಿಶೀಲನೆ

25ರಿಂದ ಪರೀಕ್ಷಾರ್ಥ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿಯಿಂದ ಬೈಯಪ್ಪನಹಳ್ಳಿ ತನಕ ಇರುವ ಮೆಟ್ರೊ ರೈಲು ನೇರಳೆ ಮಾರ್ಗ ವೈಟ್‌ಫೀಲ್ಡ್ ತನಕ ವಿಸ್ತರಣೆಯಾಗುವ ಕಾಲ ಹತ್ತಿರವಾಗಿದೆ. ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ತನಕದ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಅಕ್ಟೋಬರ್ 25ರಿಂದಲೇ ರೈಲುಗಳ ಪರೀಕ್ಷಾರ್ಥ ಸಂಚಾರ ಆರಂಭಿಸಲು ಬೆಂಗಳೂರು ಮೆಟ್ರೊ ರೈಲು ನಿಗಮ(ಬಿಎಂಆರ್‌ಸಿಎಲ್) ಸಿದ್ಧತೆ ಮಾಡಿಕೊಂಡಿದೆ.

ಬಹುನಿರೀಕ್ಷಿತ ಈ ಮೆಟ್ರೊ ರೈಲು ಮಾರ್ಗ ಬೆಂಗಳೂರು ಪೂರ್ವ ಮತ್ತು ಪಶ್ಚಿಮ ಭಾಗಕ್ಕೆ ಸಂಪರ್ಕ ಕೊಂಡಿಯಾಗಲಿದೆ. ವಯಾಡಕ್ಟ್ ಮೇಲೆಹಾದು ಹೋಗಿರುವ 33 ಕೆ.ವಿ ವಿದ್ಯುತ್ ಕೇಬಲ್‌ಗಳು ಮತ್ತು 750 ವೋಲ್ಟ್ ಕಂಬಿಗಳಿಗೆ ಅ.15ರಿಂದ ಪರೀಕ್ಷಾರ್ಥ ವಿದ್ಯುತ್ ಹರಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಪ್ರಕಟಣೆ ಹೊರಡಿಸಿದೆ.

‘ಕನಿಷ್ಠ 45 ದಿನಗಳ ಕಾಲ ಪರೀಕ್ಷಾರ್ಥ ಸಂಚಾರ ಇರಲಿದ್ದು, ಬಳಿಕ ರೈಲ್ವೆ ಸುರಕ್ಷಿತ ಆಯುಕ್ತರಿಂದ(ಸಿಆರ್‌ಎಸ್) ಪರಿಶೀಲನೆ ಆಗಬೇಕಿದೆ. ಎಲ್ಲವೂ ಅಂದುಕೊಂಡಂತೆ ಆದರೆ 2023ರ ಆರಂಭದಲ್ಲೇ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳಿದರು.

ಮೆಟ್ರೊ ರೈಲು ಮಾರ್ಗದ 2ನೇ ಹಂತದ ಕಾಮಗಾರಿಗಳಲ್ಲಿ ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್‌ಗೆ ಸಂಪರ್ಕ ಕಲ್ಪಿಸುವ ಯೋಜನೆ ಅತ್ಯಂತ ಮಹತ್ವದ್ದಾಗಿದೆ. ಐಟಿ ಕಂಪನಿಗಳು ಹೆಚ್ಚಿರುವ ಭಾಗಕ್ಕೆ ಬೆಂಗಳೂರಿನ ಬೇರೆ ಬೇರೆ ಭಾಗಗಳಿಂದ ಜನ ನಿತ್ಯ ಪ್ರಯಾಣ ಮಾಡುತ್ತಿದ್ದಾರೆ. ಸದ್ಯ ಬೈಯಪ್ಪನಹಳ್ಳಿ ತನಕ ಇರುವ ಮೆಟ್ರೊ ರೈಲಿನಲ್ಲಿ ಹೋಗಿ ಅಲ್ಲಿಂದ ಮುಂದಕ್ಕೆ ಬಿಎಂಟಿಸಿ ಬಸ್, ಸ್ಥಳೀಯ ರೈಲು ಮತ್ತು ಕ್ಯಾಬ್‌ಗಳನ್ನು ಹತ್ತಿ ವೈಟ್‌ಫೀಲ್ಡ್ ಕಡೆಗೆ ಪ್ರಯಾಣ ಮಾಡುತ್ತಿದ್ದಾರೆ. ಇದರಿಂದಾಗಿ ಈ ಭಾಗದಲ್ಲಿ ಸಂಚಾರ ದಟ್ಟಣೆ ಬೇರೆಡೆಗಿಂತ ಹೆಚ್ಚಾಗಿದೆ.

ಸಂಚಾರ ದಟ್ಟಣೆಗೆ ಪರಿಹಾರ ಕಲ್ಪಿಸಲು ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್‌ಗೆ ಮೆಟ್ರೊ ರೈಲು ಸಂಪರ್ಕ ಕಲ್ಪಿಸಲು ಇದು ಅನುಕೂಲ ಆಗಲಿದೆ. ನಿಗದಿಯಂತೆ 2020ರ ವೇಳೆಗೆ ಕಾಮಗಾರಿ ಪೂರ್ಣಗೊಳ್ಳ ಬೇಕಿತ್ತು. ಭೂಸ್ವಾಧೀನ ಪ್ರಕ್ರಿಯೆ, ಮರಗಳ ಸ್ಥಳಾಂತರ, ಕೋವಿಡ್ ಕಾರಣದಿಂದ ಕಾಮಗಾರಿ ವಿಳಂಬವಾಗಿದೆ. ಕೋವಿಡ್ ಪ್ರಕರಣ ಗಳು ಕಡಿಮೆಯಾದ ಬಳಿಕ ಎಲ್ಲ ಅಡೆ ತಡೆಗಳೂ ನಿವಾರಣೆಯಾಗಿ ಕಾಮಗಾರಿ ಚುರುಕು ಪಡೆದುಕೊಂಡಿದೆ.

ಕಾಮಗಾರಿ ಪೂರ್ಣಗೊಂಡರೆ ನಗರದ ಅನೇಕ ರಸ್ತೆಗಳಲ್ಲಿ ವಾಹನ ದಟ್ಟಣೆ ಕಡಿಮೆಗೊಳಿಸುವಲ್ಲಿ ಈ ಮೆಟ್ರೊ ಮಾರ್ಗ ಮಹತ್ತರ ಪಾತ್ರವಹಿಸಲಿದೆ.

‘ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ತನಕ 15.50 ಕಿ.ಮೀ. ಉದ್ದದ ರೈಲು ಮಾರ್ಗದಲ್ಲಿ 13 ನಿಲ್ದಾಣಗಳು ನಿರ್ಮಾಣವಾಗುತ್ತಿವೆ. ಎತ್ತರಿಸಿದ ರೈಲು ಮಾರ್ಗದ ಸಿವಿಲ್ ಕಾಮಗಾರಿ ಮುಕ್ತಾಯಗೊಂಡಿದೆ. ಹಳಿಗಳ ಜೋಡಣೆ ಕಾರ್ಯವೂ ಪೂರ್ಣಗೊಂಡಿದ್ದು, ಪರೀಕ್ಷೆಗೆ ಸಿದ್ಧವಾಗಿದೆ. ವೈಟ್‌ಫೀಲ್ಡ್ ತನಕ ರೈಲುಗಳ ಸಂಚಾರ ಆರಂಭವಾದರೆ ಐ.ಟಿ ಕಾರಿಡಾರ್‌ಗೆ ನಗರದ ವಿವಿಧೆಡೆಯಿಂದ ಸಂಪರ್ಕ ಕಲ್ಪಿಸಿದಂತೆ ಆಗಲಿದೆ. ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆಯೂ ದುಪ್ಪಟ್ಟಾಗುವ ಸಾಧ್ಯತೆ ಇದೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ವೈಟ್‌ಫೀಲ್ಡ್ ಬಳಿ ಮೆಟ್ರೊ ನಿಲ್ದಾಣ ಮತ್ತು ಮೆಟ್ರೊ ರೈಲು ಡಿಪೊ ನಡುವೆ ನಿರ್ಮಾಣ ಆಗಿರುವ ಮಾರ್ಗಗಳು –ಪ್ರಜಾವಾಣಿ ಚಿತ್ರ/ಎಂ.ಎಸ್‌.ಮಂಜುನಾಥ್

13 ಮೆಟ್ರೊ ನಿಲ್ದಾಣ
• ಬೆನ್ನಿಗಾನಹಳ್ಳಿ
• ಕೆ.ಆರ್.ಪುರಂ
• ಮಹದೇವಪುರ
• ಗರುಡಾಚಾರ್‌ಪಾಳ್ಯ
• ಹೂಡಿ ಜಂಕ್ಷನ್
• ಸೀತಾರಾಮಪಾಳ್ಯ
• ಕುಂದಲಹಳ್ಳಿ
• ನಲ್ಲೂರುಹಳ್ಳಿ
• ಶ್ರೀಸತ್ಯಸಾಯಿ ಆಸ್ಪತ್ರೆ
• ಪಟ್ಟಂದೂರು ಅಗ್ರಹಾರ
• ಕಾಡುಗೋಡಿ
• ಚನ್ನಸಂದ್ರ
• ವೈಟ್‌ಫೀಲ್ಡ್

ವಿಮಾನ ನಿಲ್ದಾಣಕ್ಕೆ ನೇರ ಮಾರ್ಗ

ವೈಟ್‌ಫೀಲ್ಡ್‌ಗೆ ಮೆಟ್ರೊ ರೈಲು ಸಂಪರ್ಕ ದೊರೆತರೆ ಮುಂದಿನ ದಿನಗಳಲ್ಲಿ ವೈಟ್‌ಫೀಲ್ಡ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ನೇರ ಸಂಪರ್ಕ ದೊರಕಲಿದೆ.

ಕೆ.ಆರ್.ಪುರ–ಹೆಬ್ಬಾಳ ಮಾರ್ಗದಲ್ಲಿ ವಿಮಾನ ನಿಲ್ದಾಣಕ್ಕೆ ಮೆಟ್ರೊ ರೈಲು ಸಂಪರ್ಕ ಕಲ್ಪಿಸುವ ಕಾಮಗಾರಿ ಭರದಿಂದ ಸಾಗಿದೆ. ಈ ಕಾಮಗಾರಿಯನ್ನು 2025ರ ವೇಳೆಗೆ ಪೂರ್ಣಗೊಳಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ.

ಈ ಎರಡು ಯೋಜನೆಗಳು ಪೂರ್ಣಗೊಂಡರೆ ವೈಟ್‌ಫೀಲ್ಡ್ ಭಾಗದ ಜನ ನೇರವಾಗಿ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸಬಹುದು. ಅದರಲ್ಲೂ ಐ.ಟಿ ಕಂಪನಿ ಉದ್ಯೋಗಿಗಳಿಗೆ ಹೆಚ್ಚಿನ ಅನುಕೂಲ ಆಗಲಿದೆ.

ನಾಳೆ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ

ಬೆಂಗಳೂರು: ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ ಇದೇ ಶುಕ್ರವಾರ (ಅ.7) ಅರಮನೆ ಮೈದಾನದಲ್ಲಿ ನಡೆಯಲಿದ್ದು, ಮುಂಬರುವ ದಿನಗಳಲ್ಲಿ ಜನಸ್ಪಂದನ ಮತ್ತು ರಾಜ್ಯ ನಾಯಕರ ಜಿಲ್ಲಾ ಪ್ರವಾಸಗಳನ್ನು ನಡೆಸುವ ಬಗ್ಗೆ ತೀರ್ಮಾನಿಸಲಾಗುವುದು.

ಈಗಾಗಲೇ ದೊಡ್ಡಬಳ್ಳಾಪುರದಲ್ಲಿ ಮೊದಲ ಜನಸ್ಪಂದನ ನಡೆದಿದ್ದು, ಉಳಿದ ಜನಸ್ಪಂದನ ಸಮಾವೇಶಗಳ ದಿನಾಂಕ ನಿಗದಿಯಾಗಬೇಕಾಗಿದೆ. ಪಕ್ಷದ ಸಂಘಟನೆ ಮತ್ತು ಜನಸಂಪರ್ಕಕ್ಕೆ ಸಂಬಂಧಿಸಿದಂತೆ ಹೊಣೆಗಾರಿಕೆ ಹಂಚಿಕೆಯ ವಿಚಾರವನ್ನೂ ತೀರ್ಮಾನಿಸಲಾಗುವುದು. ಈ ಸಭೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಆಹ್ವಾನಿಸಲು ಉದ್ದೇಶಿಸಲಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪ್ರತಿ ಎರಡು ತಿಂಗಳಿಗೊಮ್ಮೆ ರಾಜ್ಯ ಇತರ ಜಿಲ್ಲೆಗಳಲ್ಲಿ ರಾಜ್ಯ ಕಾರ್ಯಕಾರಿಣಿ ಸಭೆ ನಡೆಸಲಾಗಿತ್ತು. ಈ ಬಾರಿ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ಅವರು ಭಾಗವಹಿಸಲಿದ್ದಾರೆ. ಗುರುವಾರ ಸಂಜೆ ನಗರಕ್ಕೆ ಬರುವ ಅವರು, ಸಂಜೆ ಪಕ್ಷದ ಕಚೇರಿಯಲ್ಲಿ ನಡೆಯುವ ರಾಜ್ಯ ಪ್ರಧಾನ ಕಾರ್ಯದರ್ಶಿಗಳ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ವಂಚನೆ: ಬಂಧನ

ಬಾಗೇಪಲ್ಲಿ: ನ್ಯಾಷನಲ್ ಹೈವೇ ಲ್ಯಾಂಡ್ ಅಕ್ವಿಸಿಷನ್ ಅಧಿಕಾರಿಗಳ ಸೋಗಿನಲ್ಲಿ ವಂಚಿಸಿರುವ ಆರೋಪಿಯೊಬ್ಬನನ್ನು ಬಂಧಿಸುವಲ್ಲಿ ಚಿಕ್ಕಬಳ್ಳಾಪುರ ಪೊಲೀಸರು ಯಶಸ್ವಿಯಾಗಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಆನೇಕಲ್‌ನ ಸೈಯದ್ ಮುಬಾರಕ್ ಬಂಧಿತ. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ.

ನಗರದಲ್ಲಿ ವಿತರಿಸಲಾದ ಲಸಿಕೆ ಪೈಕಿ ಶೇ80 ಕೋವಿಶೀಲ್ಡ್

ಕೋವಿಡ್: 3 ಲಸಿಕೆ ಮಾತ್ರ ಲಭ್ಯ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಈವರೆಗೆ ಕೋವಿಡ್ ಲಸಿಕೆಯ 2.37 ಕೋಟಿ ಡೋಸ್‌ಗಳನ್ನು ವಿತರಿಸಲಾಗಿದೆ. ಈವರೆಗೆ ಆರು ಲಸಿಕೆಗಳನ್ನು ಸಂಶೋಧಿಸಲಾಗಿದ್ದರೂ ವಿತರಿಸಲಾದ ಲಸಿಕೆಯಲ್ಲಿ ಶೇ 80ರಷ್ಟು ಡೋಸ್‌ಗಳು ‘ಕೋವಿಶೀಲ್ಡ್’ ಲಸಿಕೆಯದ್ದೇ ಆಗಿವೆ.

ನಗರದಲ್ಲಿ 2021ರ ಜ.16ರಿಂದ ಕೋವಿಡ್ ಲಸಿಕೆ ವಿತರಣೆ ಪ್ರಾರಂಭವಾಗಿದೆ. 2022ರ ಜ.10ರಿಂದ ಮೂರನೇ ಡೋಸ್ ವಿತರಿಸಲಾಗುತ್ತಿದೆ. ಎರಡು ಡೋಸ್ ಲಸಿಕೆ ಪಡೆದು ಆರು ತಿಂಗಳಾದವರಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆ ನೀಡಲಾಗುತ್ತಿದೆ. 2022ರ ಜನವರಿಯಿಂದ 15ರಿಂದ 18 ವರ್ಷದೊಳಗಿನವರಿಗೆ, 2022ರ ಮಾ.16ರಿಂದ 12ರಿಂದ 14 ವರ್ಷದ ಮಕ್ಕಳಿಗೆ ಲಸಿಕೆ ವಿತರಿಸಲಾಗುತ್ತಿದೆ.

ಕೋವಿಶೀಲ್ಡ್, ಕೋವ್ಯಾಕ್ಸಿನ್, ಸ್ಪುಟ್ನಿಕ್, ಕೊರ್ಬೆವ್ಯಾಕ್ಸ್, ಜೈಕೋವ್-ಡಿ ಹಾಗೂ ಕೊವೊವ್ಯಾಕ್ಸ್ ಲಸಿಕೆ ಮಾರುಕಟ್ಟೆಗೆ ಪರಿಚಯಿತಗೊಂಡವು. 12 ವರ್ಷಗಳು ಮೇಲ್ಪಟ್ಟ ಎಲ್ಲ ವಯೋಮಾನದವರಿಗೂ ಸರ್ಕಾರಿ ಕೇಂದ್ರಗಳಲ್ಲಿ ಮೊದಲೆರಡು ಡೋಸ್‌ಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. 18ರಿಂದ 59 ವರ್ಷದವರು ಮುನ್ನೆಚ್ಚರಿಕೆ ಡೋಸ್ ಲಸಿಕೆಯನ್ನು ಖಾಸಗಿ ಕೇಂದ್ರಗಳಲ್ಲಿ ಪಡೆಯಬೇಕು. 2022 ಜು.15ರಿಂದ ಸೆ.30ರವರೆಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಸರ್ಕಾರವು ಉಚಿತವಾಗಿ ಮುನ್ನೆಚ್ಚರಿಕೆ ಡೋಸ್ ಲಸಿಕೆ ಒದಗಿಸಿತ್ತು.

ಮೂರು ಲಸಿಕೆಗಳು ಅಲಭ್ಯ: ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗಳನ್ನು ಲಸಿಕೆ ತಯಾರಿಕಾ ಕಂಪನಿಗಳು ₹225ಕ್ಕೆ ಖಾಸಗಿ ಆಸ್ಪತ್ರೆಗಳಿಗೆ ಒದಗಿಸುತ್ತಿವೆ. ಸೇವಾ ಶುಲ್ಕ ಸಹಿತ ಒಂದು ಡೋಸ್ ಲಸಿಕೆಗೆ ಆಸ್ಪತ್ರೆಗಳು ₹ 386 ಪಾವತಿಸಬೇಕು. 150ಕ್ಕೂ ಅಧಿಕ ಕೇಂದ್ರಗಳಲ್ಲಿ ಲಸಿಕೆ ಒದಗಿಸಲಾಗುತ್ತಿದ್ದರೂ ಬೆರಳಣಿಕೆಯಷ್ಟು ಕೇಂದ್ರಗಳಲ್ಲಿ ಮಾತ್ರ ಕೊವ್ಯಾಕ್ಸಿನ್ ಲಸಿಕೆ ಲಭ್ಯವಿದೆ. ಸ್ಪುಟ್ನಿಕ್ ಲಸಿಕೆ ಸದ್ಯ ಲಭ್ಯವಿಲ್ಲ. ಅದೇ ರೀತಿ, ಮಕ್ಕಳಿಗೆ ನೀಡುವ ಜೈಕೋವ್-ಡಿ ಹಾಗೂ ಕೊವೊವ್ಯಾಕ್ಸ್ ಲಸಿಕೆಯೂ ನಗರದಲ್ಲಿ ದೊರೆಯುತ್ತಿಲ್ಲ.

ನಗರದಲ್ಲಿ ಈವರೆಗೆ ವಿತರಿಸಲಾದ ಲಸಿಕೆಯಲ್ಲಿ 1.90 ಕೋಟಿ ಡೋಸ್‌ಗಳು ಕೋವಿಶೀಲ್ಡ್ ಲಸಿಕೆಯದ್ದಾಗಿವೆ. 39.95 ಲಕ್ಷ ಡೋಸ್‌ಗಳು ಕೋವ್ಯಾಕ್ಸಿನ್, 5.36 ಲಕ್ಷ ಡೋಸ್‌ಗಳು ಕೊರ್ಬೆವ್ಯಾಕ್ಸ್ ಹಾಗೂ 95 ಸಾವಿರ ಡೋಸ್‌ಗಳು ಸ್ಪುಟ್ನಿಕ್ ಲಸಿಕೆಯನ್ನು ವಿತರಿಸಲಾಗಿದೆ.

ಪ್ರಕ್ರಿಯಾ ಆಸ್ಪತ್ರೆ, ಅಪೋಲೊ ಕ್ಲಿನಿಕ್, ಕೊಲಂಬಿಯಾ ಏಷ್ಯಾ ಆಸ್ಪತ್ರೆ, ಸಕ್ರಾ ಪ್ರೀಮಿಯಂ ಕ್ಲಿನಿಕ್, ಸುಗುಣಾ, ಮಣಿಪಾಲ್, ಫೋರ್ಟಿಸ್ ಸೇರಿ ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿಯೂ ಲಭ್ಯವಿರುವ ಹೆಚ್ಚಿನ ಡೋಸ್‌ಗಳು ಕೋವಿಶೀಲ್ಡ್ ಲಸಿಕೆಯಾಗಿದೆ. ಲಸಿಕೆ ಕಾಯ್ದಿರಿಸುವ ಪೋರ್ಟಲ್‌ನಲ್ಲಿ ಕೋವ್ಯಾಕ್ಸಿನ್ ಲಸಿಕೆಗೆ ಸಂಬಂಧಿಸಿದಂತೆ ನಿಗದಿ ಪಡಿಸಲಾದ ಬಹುತೇಕ ಎಲ್ಲ ಸ್ಲಾಟ್‌ಗಳು ಮುಂಚಿತವಾಗಿಯೇ ಬುಕ್ ಆಗುತ್ತಿವೆ.

ಆರಂಭದಲ್ಲಿ ಕೋವಿಶೀಲ್ಡ್ ಲಸಿಕೆ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆ ಆಗಿತ್ತು. ಆದ್ದರಿಂದ ಎರಡು, ಮೂರನೇ ಡೋಸ್ ಅದೇ ಲಸಿಕೆ ನೀಡಬೇಕಾಗುತ್ತದೆ.
ಡಾ.ಕೆ.ವಿ. ತ್ರಿಲೋಕ್ ಚಂದ್ರ, ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ)

ನಗರದಲ್ಲಿ ಕೋವಿಡ್ ಲಸಿಕೆ ವಿತರಣೆ ವಿವರ

1.12 ಕೋಟಿ
ಈವರೆಗೆ ಮೊದಲ ಡೋಸ್ ಪಡೆದವರು

1.09 ಕೋಟಿ
ಎರಡನೇ ಡೋಸ್ ಪಡೆದವರು

16.11 ಲಕ್ಷ
ಮೂರನೇ ಡೋಸ್ ಪಡೆದವರು

‘ಲಸಿಕೆ ಪೂರೈಕೆ: ಸಮಸ್ಯೆಯಿಲ್ಲ’

‘ಕೋವಿಡ್ ಲಸಿಕೆಯ ಮೊದಲ ಹಾಗೂ ಎರಡನೇ ಡೋಸ್ ವಿತರಣೆಯಲ್ಲಿ ಶೇ 100ರಷ್ಟು ಸಾಧನೆ ಮಾಡಿದ್ದೇವೆ. ಎಲ್ಲ ಲಸಿಕೆಗಳು ಒಂದೇ ರೀತಿಯ ಫಲಿತಾಂಶ ನೀಡುತ್ತವೆ. ಲಭ್ಯತೆ ಅನುಸಾರ ಸರ್ಕಾರ ಪೂರೈಸಿದ ಲಸಿಕೆಯನ್ನು ಆರೋಗ್ಯ ಕೇಂದ್ರಗಳಿಗೆ ಹಂಚಿಕೆ ಮಾಡಲಾಗುತ್ತದೆ. ಲಸಿಕೆ ಪೂರೈಕೆಯಲ್ಲಿ ಸಮಸ್ಯೆಯಿಲ್ಲ. 18 ವರ್ಷಗಳು ಮೇಲ್ಪಟ್ಟವರಲ್ಲಿ ಹೆಚ್ಚಿನ ಮಂದಿ ಮೊದಲ ಡೋಸ್ ಕೋವಿಶೀಲ್ಡ್ ಲಸಿಕೆ ಪಡೆದಿದ್ದರು. ಇದರಿಂದಾಗಿ ಆ ಲಸಿಕೆ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆ ಆಗುತ್ತಿದೆ’ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ತಿಳಿಸಿದರು.

ಭಾರತ ಬಿಟ್ಟು ಓಡೊ ಯಾತ್ರೆ: ಕಟೀಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಡೆಸುತ್ತಿರುವುದು ಭಾರತ್ ಜೋಡೊ ಅಲ್ಲ, ‘ಭಾರತ ಬಿಟ್ಟು ಓಡೊ ಯಾತ್ರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ವ್ಯಂಗ್ಯವಾಡಿದರು.

ಕಾಂಗ್ರೆಸ್ ಪಕ್ಷದೊಳಗೆ ಆಂತರಿಕ ಪ್ರಜಾಪ್ರಭುತ್ವ ಇಲ್ಲ; ಅದು ಚೇತರಿಕೆ ಕಾಣಲಾರದು ಎಂದು ಮನಗಂಡ ಹಲವು ನಾಯಕರು ಪಕ್ಷಕ್ಕೆ ವಿದಾಯ ಹೇಳಿದ್ದಾರೆ. ಅವರನ್ನು ಜೋಡಿಸಬೇಕಿದ್ದ ರಾಹುಲ್, ಅವರ ತಾತ ವಿಭಜಿಸಿದ್ದ ದೇಶ ಜೋಡಿಸಲು ಹೊರಟಿದ್ದಾರೆ. ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ 370ನೇ ವಿಧಿ ರದ್ದು ಮಾಡಿದ ಪ್ರಧಾನಿ ನರೇಂದ್ರ ಮೋದಿ ನಿಜವಾಗಲೂ ದೇಶ ಜೋಡಿಸುವ ಕಾರ್ಯ ಮಾಡಿದ್ದಾರೆ. ಸ್ವಜನಪಕ್ಷಪಾತ, ಕುಟುಂಬ ರಾಜಕಾರಣದ ಕಾಂಗ್ರೆಸ್ ಮುಂದಿನ ದಿನಗಳಲ್ಲಿ ಆಂತರಿಕ ಭಿನ್ನಮತ ಹಾಗೂ ಸಮರ್ಥ ನಾಯಕತ್ವದ ಕೊರತೆಯಿಂದ ನೆಲಕಚ್ಚಲಿದೆ. ಶಾಶ್ವತವಾಗಿ ಮೂಲೆಗುಂಪಾಗಲಿದೆ ಎಂದು ಟೀಕಿಸಿದ್ದಾರೆ.

ರಾಹುಲ್ ಗಾಂಧಿ ಭಾರತ್ ಜೋಡೊ ಕರ್ನಾಟಕಕ್ಕೆ ಪ್ರವೇಶ ಮಾಡುವಾಗ ಕಾಂಗ್ರೆಸ್ ಮುಖಂಡರು ಎರಡು ತಂಡಗಳಾಗಿ ಸ್ವಾಗತ ಮಾಡಿದ್ದಾರೆ. ಮುಖ್ಯಮಂತ್ರಿ ಕುರ್ಚಿಯ ಹಗಲುಕನಸು ಕಾಣುವ ಸಿದ್ದರಾಮಯ್ಯ, ಜೈಲಿನತ್ತ ಮುಖ ಮಾಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರತ್ಯೇಕವಾಗಿ ಸ್ವಾಗತಿಸಿದ್ದಾರೆ. 2023ರ ಚುನಾವಣೆಯಲ್ಲಿ ಗೆದ್ದು ಕರ್ನಾಟಕವನ್ನು ‘ಕಾಂಗ್ರೆಸ್ ಪಾರ್ಟಿ ಎಟಿಎಂ’ ಮಾಡಿಕೊಳ್ಳಲು ಕಾಂಗ್ರೆಸ್‌ನ ನಕಲಿ ಗಾಂಧಿ ಕುಟುಂಬ ಯೋಚಿಸಿದೆ. ಅದು ಈಡೇರುವ ಸಾಧ್ಯತೆ ಇಲ್ಲ ಎಂದು ಕುಟುಕಿದ್ದಾರೆ.

ಪಿಎಫ್‌ಐ, ಎಸ್‌ಡಿಪಿಐ ಮುಖಂಡರು ಹಾಗೂ ಕಾರ್ಯಕರ್ತರ ಮೇಲಿದ್ದ ಪ್ರಕರಣಗಳನ್ನು ರದ್ದು ಮಾಡಿದ್ದ ಸಿದ್ದರಾಮಯ್ಯ, ರಾಜ್ಯಕ್ಕೆ ‘ಪಿಎಫ್‌ಐ ಭಯೋತ್ಪಾದನಾ ಭಾಗ್ಯ’ ನೀಡಿದ್ದರು. ಈಗ ಆ ಸಂಘಟನೆಗಳ ನಿಷೇಧ ನುಂಗಲಾರದ ಬಿಸಿತುಪ್ಪದಂತಾಗಿದೆ. ಓಲೈಕೆ, ತುಷ್ಟೀಕರಣ, ಹಿಂದೂ ವಿರೋಧಿ ರಾಜಕಾರಣ ಮುಂದಿನ ಚುನಾವಣೆಯಲ್ಲಿ ಫಲ ಕೊಡುವುದಿಲ್ಲ ಎಂದು ಛೇಡಿಸಿದ್ದಾರೆ.

ಏಕನಾಥ ಶಿಂದೆ ಜತೆ ವೇದಿಕೆ ಹಂಚಿಕೊಂಡ ಉದ್ಧವ್ ಅಣ್ಣ

ಮುಂಬೈ (ಪಿಟಿಐ): ಶಿವಸೇನಾದ ಅಧ್ಯಕ್ಷ ಉದ್ಧವ್ ಠಾಕ್ರೆ ಅವರ ಅಣ್ಣ ಜೈದೇವ್ ಠಾಕ್ರೆ ಅವರು ಬುಧವಾರ ಸಂಜೆ ಮುಂಬೈನ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿ (ಬಿಕೆಸಿ) ನಡೆದ ದಸರಾ ರ್‍ಯಾಲಿ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿ, ಶಿವಸೇನಾದ ಬಂಡಾಯ ಬಣದ ಏಕನಾಥ ಶಿಂದೆ ಅವರೊಂದಿಗೆ ವೇದಿಕೆ ಹಂಚಿಕೊಂಡರು.

ಜೈದೇವ್ ಠಾಕ್ರೆ ಅವರಿಂದ ಪ್ರತ್ಯೇಕಗೊಂಡಿರುವ ಅವರ ಪತ್ನಿ ಸ್ಮಿತಾ ಅವರು ಕೂಡಾ ರ್‍ಯಾಲಿಯಲ್ಲಿ ಹಾಜರಿದ್ದರು.

ಉದ್ಧವ್ ಅವರ ಹಿರಿಯ ಅಣ್ಣ, ದಿವಂಗತ ಬಿಂದುಮಾಧವ್ ಠಾಕ್ರೆ ಅವರ ಮಗ ನಿಹಾರ್ ಹಾಗೂ ದಿವಂಗತ ಬಾಳಾ ಠಾಕ್ರೆ ಅವರ ನಂಬಿಕೆಯ ವ್ಯಕ್ತಿಯಾಗಿದ್ದ ಚಂಪಾ ಸಿಂಗ್ ಥಾಪಾ ಅವರು ಕೂಡಾ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು.

ಸುದ್ದಿಗಾರರೊಂದಿಗೆ ಮಾತನಾಡಿದ ಸ್ಮಿತಾ ಠಾಕ್ರೆ, ‘ಶಿಂದೆ ಅವರು ರ್‍ಯಾಲಿಗೆ ನನ್ನನ್ನು ಆಹ್ವಾನಿಸಿದ್ದರು’ ಎಂದು ತಿಳಿಸಿದ್ದಾರೆ.

ಕೋವಿಡ್: ವಾರದಲ್ಲಿ 548 ಪ್ರಕರಣ

ಬೆಂಗಳೂರು: ನಗರದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದ್ದು, ಕಳೆದೊಂದು ವಾರದಲ್ಲಿ 548 ಮಂದಿ ಸೋಂಕಿತರಾಗಿದ್ದಾರೆ.

ಕಳೆದ ತಿಂಗಳು ಬಹುತೇಕ ವಾರಗಳಲ್ಲಿ ಸಾವಿರಕ್ಕೂ ಅಧಿಕ ಪ್ರಕರಣಗಳು ದೃಢಪಟ್ಟಿದ್ದವು. ವಾರದಲ್ಲಿ 54,740 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 1ರಷ್ಟಿದೆ. ಏಳು ದಿನಗಳ ಅವಧಿಯಲ್ಲಿ 398 ಮಂದಿ ಚೇತರಿಸಿಕೊಂಡಿದ್ದಾರೆ. ಈ ಅವಧಿಯಲ್ಲಿ ಸೋಂಕಿತರೊಬ್ಬರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಕಲ್ಕರೆ ಬಡಾವಣೆಯ ನಿವಾಸಿಗಳಾದ ರೇಖಾ ಮತ್ತು ಗಣೇಶ್ ಅವರು ತಮ್ಮ ನಿವಾಸದಲ್ಲಿ ದಸರಾ ಅಂಗವಾಗಿ ಕೂರಿಸಿದ್ದ ಗೊಂಬೆಗಳಿಗೆ ಪೂಜೆ ಸಲ್ಲಿಸಿದರು. ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ತಂದೆಯಿಂದ ಬುದ್ಧಿವಾದ ವಿದ್ಯಾರ್ಥಿನಿ ಆತ್ಮಹತ್ಯೆ

ತುಮಕೂರು: ಮೊಬೈಲ್ ಬಳಸದಂತೆ ತಂದೆ ಹೇಳಿದ ಬುದ್ದಿಮಾತಿನಿಂದ ನೊಂದು ತಾಲ್ಲೂಕಿನ ಬೆಳ್ಳಾವಿ ಗ್ರಾಮದ ವಿದ್ಯಾರ್ಥಿನಿಯೊಬ್ಬಳು ನೇಣು ಹಾಕಿಕೊಂಡು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನಗರದ ಕಾಲೇಜೊಂದರಲ್ಲಿ ಪ್ರಥಮ ವರ್ಷದ ಬಿ.ಕಾಂ ಪದವಿ ಅಧ್ಯಯನ ಮಾಡುತ್ತಿದ್ದ ಪವಿತ್ರಾ (19) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ.

ನಿಧನ

ಎನ್.ಎಂ.ಕೃಷ್ಣಾರೆಡ್ಡಿ

ಇವರು ದಿ: **05-10-2022**ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ: **06-10-2022** ರಂದು ಸಂಜೆ **4.00** ಗಂಟೆಗೆ **ದೊಡ್ಡನೆಕ್ಕುಂದಿ, ಬೆಂಗಳೂರು–37** ಇಲ್ಲಿ ನಡೆಸಲಾಗುವುದು.

ಇಂತಿ ದುಃಖತಪ್ತರು: **ದೊಡ್ಡಕೊಂಡರೆಡ್ಡಿ ಕುಟುಂಬವರ್ಗದವರು**

9945300099/9900180099

ಕನಿಷ್ಠ ಪಿಂಚಣಿಗೆ ಒತ್ತಾಯ

ಬೆಂಗಳೂರು: 1995ರ ನೌಕರರ ಭವಿಷ್ಯ ನಿಧಿ (ಇಪಿಎಸ್ 95) ಕಾಯ್ದೆಯಲ್ಲಿನ ತಿದ್ದುಪಡಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ನೌಕರರ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) ಸಲ್ಲಿಸಿರುವ ಮೇಲ್ಮನವಿಯ ತೀರ್ಪು ನಿವೃತ್ತರ ಬದುಕಿಗೆ ಆಶಾದಾಯಕವಾಗಿರಲಿದೆ ಎಂದು ಪಿಂಚಣಿದಾರರು ವಿಶ್ವಾಸ ವ್ಯಕ್ತಪಡಿಸಿದರು.

ಇಪಿಎಸ್–95 ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಸಾರಿಗೆ ನಿಗಮಗಳ ನಿವೃತ್ತ ನೌಕರರ ಸಂಘದ ಪಿಂಚಣಿದಾರರು ನಗರದಲ್ಲಿ ಸಭೆ ನಡೆಸಿದರು. ಜಿ.ಎಸ್.ಎಂ. ಸ್ವಾಮಿ ಮಾತನಾಡಿ, 'ನಮ್ಮ ಹೋರಾಟದ ಗುರಿ ತಲುಪುವವರೆಗೂ ಎಲ್ಲ ಅಂಗಸಂಸ್ಥೆಗಳು ಒಗ್ಗೂಡಿ ಭಾಗವಹಿಸಬೇಕು. ರಾಜ್ಯ ಸರ್ಕಾರದ ವತಿಯಿಂದಲೂ ನಮಗೆ ಕನಿಷ್ಠ ಪಿಂಚಣಿ ₹ 2,000 ನೀಡಬೇಕು. ಈ ಬಗ್ಗೆ ಹಕ್ಕೊತ್ತಾಯ ಮನವಿಯನ್ನು ಮುಖ್ಯಮಂತ್ರಿ ಅವರಿಗೆ ಸಲ್ಲಿಸಬೇಕು' ಎಂದು ಹೇಳಿದರು.

ಸಂಘಟನೆಯ ಕಾರ್ಯಾಧ್ಯಕ್ಷ ನಂಜುಂಡೇಗೌಡ ಅವರು, 'ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಪ್ರತಿಪಾದಿಸಿದ ಅಹಿಂಸೆ ಮತ್ತು ಶಾಂತಿ ಮಾರ್ಗದಲ್ಲಿ ನಮ್ಮ ಹೋರಾಟ ನಡೆಸಲಾಗುವುದು. ಸುಪ್ರೀಂ ಕೋರ್ಟ್ ತೀರ್ಪು ನಿವೃತ್ತರ ಬದುಕಿಗೆ ಆಶಾದಾಯಕವಾಗಲಿದೆ' ಎಂದು ತಿಳಿಸಿದರು.

ಶಂಕರ್ ಕುಮಾರ್, 'ಸುಪ್ರೀಂ ಕೋರ್ಟ್ ತೀರ್ಪು ಸಮಾಧಾನಕರ ಆಗಿರದಿದ್ದಲ್ಲಿ ನಮ್ಮ ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ' ಎಂದು ಹೇಳಿದರು.

ಮರಗಳ ರಕ್ಷಣೆ: ಡಿಪಿಆರ್‌ನಲ್ಲೇ ಮರ ಕಡಿಯುವ ಮಾಹಿತಿ ಇರಲಿ

ಅರಣ್ಯಾಧಿಕಾರಿಗಳ ನಿರ್ಲಕ್ಷ್ಯ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮರಗಳಿಗೆ ಕೊಡಲಿ ಹಾಕುವ ಮುನ್ನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ವಿಭಾಗಕ್ಕೆ ಕಾಳಜಿ ಇಲ್ಲ. ಎಲ್ಲದಕ್ಕೂ ಒಂದೇ ರೀತಿಯ ಸಾರ್ವಜನಿಕ ನೋಟಿಸ್ ಜಾರಿ ಮಾಡಿ, ಮರಗಳನ್ನು ಕತ್ತರಿಸಲಾಗುತ್ತಿದೆ' ಎಂದು ನಮ್ಮ ಬೆಂಗಳೂರು ಪ್ರತಿಷ್ಠಾನ ಆರೋಪಿಸಿದೆ.

ಈ ಬಗ್ಗೆ ವಿವರವಾದ ಪತ್ರವನ್ನು ಬಿಬಿಎಂಪಿ ಅರಣ್ಯ ವಿಭಾಗದ ಡಿಎಫ್‌ಒ ಸರೀನಾ ಸಿಕ್ಕಲಿಗರ ಅವರಿಗೆ ಬರೆದು, ಇನ್ನು ಮುಂದಾದರೂ ಯೋಜನೆಗಳನ್ನು ರೂಪಿಸುವಾಗಲೇ ಮರಗಳ ರಕ್ಷಣೆ ಹಾಗೂ ಅವುಗಳನ್ನು ಕಡಿಯುವ ಬಗ್ಗೆ ಮಾಹಿತಿಯನ್ನು ನೀಡಬೇಕು ಎಂದು ಆಗ್ರಹಿಸಲಾಗಿದೆ.

'ನಗರದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾದರೆ ಅದಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಾಗುತ್ತದೆ. ಆದರೆ ನಿರ್ದಿಷ್ಟ ಯೋಜನೆಗೆ ಎಲ್ಲಿ ಎಷ್ಟು ಮರಗಳನ್ನು ಕಡಿಯಲಾಗುತ್ತದೆ ಎಂಬ ಮಾಹಿತಿಯೇ ಇರುವುದಿಲ್ಲ. ಬದಲಿಗೆ ಯೋಜನೆ ಅನುಷ್ಠಾನವಾದ ನಂತರ ಮರಗಳನ್ನು ಕಡಿಯಲಾಗುತ್ತದೆ ಎಂದು ಬಿಬಿಎಂಪಿ ಅರಣ್ಯ ಇಲಾಖೆ ಸಾಮಾನ್ಯ ನೋಟಿಸ್ ನೀಡುತ್ತದೆ. ಇದರಿಂದ ಮರಗಳನ್ನು ಎಲ್ಲೆಂದರಲ್ಲಿ ಕಡಿಯಲಾಗುತ್ತಿದೆ. ಮರಗಳನ್ನು ಉಳಿಸುವ ಪ್ರಯತ್ನವೇ ಆಗುತ್ತಿಲ್ಲ' ಎಂದು ಪ್ರತಿಷ್ಠಾನದ ವ್ಯವಸ್ಥಾಪಕ ನಿರ್ದೇಶಕ ವಿನೋದ್ ಜಾಕೊಬ್ ದೂರಿದರು.

'ಹಲವು ಯೋಜನೆಗಳು ಅನುಷ್ಠಾನಗೊಂಡ ಸಾಕಷ್ಟು ದಿನಗಳ ನಂತರ ಮರಗಳನ್ನು ಕಡಿಯುವ ಪ್ರಕ್ರಿಯೆ ನಡೆಸಲಾಗುತ್ತದೆ. ಇದರ ಬಗ್ಗೆ ಡಿಪಿಆರ್‌ನಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ. ಕೆಲವು ಬಾರಿ ಮರ ಕಡಿಯುವ ಸಂದರ್ಭದಲ್ಲಿ ನೀಡುವ ಕಾರಣಗಳು ಸಾಕಷ್ಟು ಗೊಂದಲ ಹಾಗೂ ಅನುಮಾನಗಳಿಗೆ ಕಾರಣವಾಗುತ್ತವೆ. ಉದಾಹರಣೆಗೆ, ರಾಧಾಕೃಷ್ಣ ದೇವಸ್ಥಾನದ ಬಳಿ ರಾಜಕಾಲುವೆ ಸಮೀಪವಿರುವ ಮರಗಳನ್ನು ಕಡಿಯಲು ಸೆ.16ರಂದು ಸಾರ್ವಜನಿಕ ನೋಟಿಸ್ ಜಾರಿ ಮಾಡಲಾಗಿದೆ. ಸ್ಥಳ ಪರಿಶೀಲನೆ ಮಾಡಿದಾಗ, ನೋಟಿಸ್‌ನಲ್ಲಿ ಪ್ರಕಟಿಸಿರುವ ಸ್ಥಳಕ್ಕೂ ವಾಸ್ತವ ಸ್ಥಳಕ್ಕೂ ಒಂದು ಕಿ.ಮೀ ದೂರವಿದೆ. ಅಂದರೆ, ಅರಣ್ಯಾಧಿಕಾರಿಗಳು ವಾಸ್ತವದ ಅರಿವಿಲ್ಲದೆ ನೋಟಿಸ್ ಜಾರಿ ಮಾಡಿ, ಕ್ರಮ ತೆಗೆದುಕೊಳ್ಳುತ್ತಿರುವುದು ಸ್ಪಷ್ಟವಾಗುತ್ತದೆ' ಎಂದಿದ್ದಾರೆ.

'ಅರಣ್ಯ ವಿಭಾಗದ ಅಧಿಕಾರಿಗಳು ಸಾರ್ವಜನಿಕ ನೋಟಿಸ್ ಜಾರಿ ಮಾಡುವ ಮುನ್ನ ಅಗತ್ಯವಾದ ಅಧ್ಯಯನ ನಡೆಸಿ, ಯೋಜನೆಯ ಪರಿಶೀಲನೆ ನಡೆಸಿ ಮರಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರಿಗೆ ಸಾಕಷ್ಟು ಕಾಲಾವಕಾಶ ನೀಡಿ ಎಲ್ಲ ರೀತಿಯ ಮಾಹಿತಿಯನ್ನು ಒದಗಿಸಬೇಕು. ಯಾವ ಪ್ರದೇಶದಲ್ಲಿ ಮರಗಳನ್ನು ಕಡಿಯುವ ಪ್ರಸ್ತಾವ ಇದೆಯೋ ಅಲ್ಲಿ ಮೊದಲು ಸಾರ್ವಜನಿಕರ ಸಭೆ ನಡೆಸಬೇಕು. ಸ್ಥಳೀಯರ ಪ್ರತಿಕ್ರಿಯೆ ಪಡೆದ ನಂತರ ಮರಗಳನ್ನು ಕಡಿಯುವ ಬಗ್ಗೆ ನೋಟಿಸ್ ಜಾರಿ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ಈ ಬಗ್ಗೆ ಅರಣ್ಯ ವಿಭಾಗದ ಡಿಎಫ್‌ಒ ಸರೀನಾ ಅವರನ್ನು ಸಂಪರ್ಕಿಸಿದಾಗ ಪ್ರತಿಕ್ರಿಯಿಸಲಿಲ್ಲ.

ಟ್ರೀ ಕಮಿಟಿ ಏನು ಮಾಡುತ್ತಿದೆ?

'ಬಿಬಿಎಂಪಿ ಅರಣ್ಯ ವಿಭಾಗದಲ್ಲಿ 'ಟ್ರೀ ಕಮಿಟಿ' ಇದೆ. ನಗರದಲ್ಲಿ ಮರಗಳ ರಕ್ಷಣೆಗೆ ಈ ಸಮಿತಿ ಕಾರ್ಯನಿರ್ವಹಿಸಬೇಕು. ಆದರೆ ಮರಗಳ ರಕ್ಷಣೆ ಹಾಗೂ ಕತ್ತರಿಸಿದ ಮರಗಳ ಬದಲಿಗೆ ನೆಡಲಾಗುತ್ತಿರುವ ಸಸಿಗಳ ಮಾಹಿತಿ ಈ ಸಮಿತಿಗೆ ಇಲ್ಲ' ಎಂದು ವಿನೋದ್ ಜಾಕೊಬ್ ದೂರಿದರು.

'ನಾವು ಅಭಿವೃದ್ಧಿಗೆ ವಿರೋಧವಾಗಿಲ್ಲ. ಆದರೆ ಯೋಜನೆಗಳಿಗೆ ಕಡಿಯಲಾಗುವ ಮರಗಳ ಬದಲಿಗೆ ಸಸಿಗಳನ್ನು ನೆಡಬೇಕು. ಇಲ್ಲಿ ಮರ ಕಡಿದು ಕಾಡಿನಲ್ಲಿ ಸಸಿ ನೆಟ್ಟರೆ ಉಪಯೋಗವಾಗಲಾರದು. ಮರ ಕಡಿದ ಪ್ರದೇಶದ ಸುತ್ತಮುತ್ತ, ಅದು ಸಾಧ್ಯವಾಗದಿದ್ದರೆ ಆಯಾ ವಾರ್ಡ್‌ಗಳಲ್ಲಾದರೂ ಸಸಿಗಳನ್ನು ನೆಡಬೇಕು' ಎಂದರು.

106 ಶಿಕ್ಷಕರಿಗೆ 'ಉತ್ತಮ ಶಿಕ್ಷಕ' ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಕರ್ನಾಟಕ ರಾಜ್ಯ ಖಾಸಗಿ ಶಾಲಾಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟದ ಆಶ್ರಯದಲ್ಲಿ ಯಲಹಂಕದ ಅಂಬೇಡ್ಕರ್ ಭವನದಲ್ಲಿ ನಡೆದ ಗುರುವಂದನ ಕಾರ್ಯಕ್ರಮದಲ್ಲಿ ಶಿಕ್ಷಕರಿಗೆ 'ಉತ್ತಮ ಶಿಕ್ಷಕ' ಪ್ರಶಸ್ತಿ ವಿತರಿಸಲಾಯಿತು. ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಅ.ದೇವೇಗೌಡ, ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್, ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್‌ನ ಅಧ್ಯಕ್ಷ ಹುಲಿಕಲ್ ನಟರಾಜ್, ಒಕ್ಕೂಟದ ಅಧ್ಯಕ್ಷ ಡಾ.ರಾಮಚಂದ್ರಪ್ಪ, ಕಾರ್ಯದರ್ಶಿ ವಿ.ಸುರೇಶ್ ಇತರರು ಇದ್ದರು.

ಯಲಹಂಕ: 'ಖಾಸಗಿ ಶಾಲಾ ಆಡಳಿತ ಮಂಡಳಿ ಪದಾಧಿಕಾರಿಗಳು ಹಾಗೂ ಶಿಕ್ಷಕರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವರ ಹಿತ ಕಾಯಲು ಸದಾ ಬದ್ಧನಾಗಿದ್ದೇನೆ' ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಖಾಸಗಿ ಶಾಲಾ-ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟದ ಆಶ್ರಯದಲ್ಲಿ ಉಪನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಗುರುವಂದನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಖಾಸಗಿ ಶಾಲಾ ಶಿಕ್ಷಕರನ್ನು ಗುರುತಿಸಿ, ಉತ್ತಮ ಶಿಕ್ಷಕ ಪ್ರಶಸ್ತಿ ನೀಡುತ್ತಿರುವುದು ವಿಶೇಷವಾಗಿದೆ. ಇದರಿಂದ ಅವರು ತಮ್ಮ ವೃತ್ತಿಯಲ್ಲಿ ಇನ್ನೂ ಹೆಚ್ಚಿನ ನೈಪುಣ್ಯ ಸಾಧಿಸಲು ಸಾಧ್ಯವಾಗುವುದರ ಜೊತೆಗೆ ಇತರೆ ಶಿಕ್ಷಕರಿಗೂ ಪ್ರೇರೇಪಣೆ ನೀಡಿದಂತಾಗುತ್ತದೆ' ಎಂದರು.

'ಒಕ್ಕೂಟವು ಶಿಕ್ಷಕರಿಗಾಗಿ ಆರೋಗ್ಯ ತಪಾಸಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅವರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳ ಕುರಿತು ಮಾಹಿತಿ ನೀಡಿದರೆ ನನ್ನಿಂದಾಗುವ ಸಹಾಯ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ' ಎಂದರು.

ಕಾರ್ಯಕ್ರಮದಲ್ಲಿ 106 ಶಿಕ್ಷಕರಿಗೆ 'ಉತ್ತಮ ಶಿಕ್ಷಕ' ಪ್ರಶಸ್ತಿ ವಿತರಿಸಲಾಯಿತು. ಖಾಸಗಿ ಶಾಲಾ-ಕಾಲೇಜುಗಳ ಆಡಳಿತ ಮಂಡಳಿಗಳ 85 ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು. ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ಮಾಜಿ ಸದಸ್ಯ ಎಚ್.ಎಂ.ರಮೇಶ್ ಗೌಡ, ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್, ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್‌ನ ಅಧ್ಯಕ್ಷ ಹುಲಿಕಲ್ ನಟರಾಜ್, ಒಕ್ಕೂಟದ ಅಧ್ಯಕ್ಷ ಡಾ.ರಾಮಚಂದ್ರಪ್ಪ, ಕಾರ್ಯದರ್ಶಿ ವಿ.ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ರೇಸ್

ಸ್ಟಾರ್ ಗ್ಲೋರಿ ಗೆಲ್ಲುವ ನಿರೀಕ್ಷೆ

ಮೈಸೂರು ದಸರಾ ಸ್ಪ್ರಿಂಟ್ ಚಾಂಪಿಯನ್‌ಷಿಪ್ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಟಾರ್ ಗ್ಲೋರಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ದಿ ರೆಸ್ಟಾನ್ಸ್ 2, ಕ್ಯಾಪಿಟಲ್ ಗೈನ್ 6, ಡಾ.ಲೋಗನ್ 5
2ನೇ ರೇಸ್: ಅಮೆಜೋನಿಯಾ 8, ಜಬ್ಬಾರ್ 11, ಮ್ಯುಟಾಂಟ್ 2
3ನೇ ರೇಸ್: ಸ್ಟಾಮ್‌ಫೋರ್ಡ್ ಬ್ರಿಡ್ಜ್ 6, ಬ್ಲೂಸ್ ಆಲ್‌ಮೈಟ 1, ಮಿಲಾನೀ 10
4ನೇ ರೇಸ್: ಮಿಸ್ಟಿಕ್ ಮೌಂಟೇನ್ 6, ಏಂಜೆಲ್ ಬ್ಲಿಸ್ 3, ಫಾರೆಸ್ಟ್ ವ್ಯೂ 2
5ನೇ ರೇಸ್: ಓ ಕನ್ನಯ್ಯ 3, ಸೆರ್ಡಾರ್ 4, ಟ್ವಿಲೈಟ್ ಟೊರ್ನಾಡೊ 6
6ನೇ ರೇಸ್: ಸ್ಟಾರ್ ಗ್ಲೋರಿ 6, ದಿ ಸಾವರಿನ್ ಆರ್ಬ್ 5, ಅಸ್ಸೊವಾಲ್ 1
7ನೇ ರೇಸ್: ಕೆನ್‌ಸಿಂಗ್ಟನ್ 5, ಸಿಲ್ವೇರಿಯಸ್ 6, ಟ್ರಸ್ಟ್‌ಬಾಂಡ್ 2
8ನೇ ರೇಸ್: ಸರ್ಕಸ್ ಕ್ವೀನ್ 12, ಜಾನಿ ಬ್ರಾವೊ 13, ತೆನಾಲಿ 3

ಉತ್ತಮ ಬೆಟ್: ಸ್ಟಾಮ್‌ಫೋರ್ಡ್ ಬ್ರಿಡ್ಜ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
4,5,6,7,8	1,2,3	4,5,6	6,7,8

ಕೆಪಿಸಿಸಿ ವಕ್ತಾರ ಸ್ಥಾನಕ್ಕೆ ವಿ.ಆರ್. ಸುದರ್ಶನ್ ರಾಜೀನಾಮೆ

ಕೋಲಾರ: ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಮಲ್ಲಿಕಾರ್ಜುನ ಖರ್ಗೆ ಪರ ಪ್ರಚಾರ ನಡೆಸುವ ಉದ್ದೇಶದಿಂದ ವಿ.ಆರ್.ಸುದರ್ಶನ್ ಅವರು ಕೆಪಿಸಿಸಿ ಮುಖ್ಯ ವಕ್ತಾರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

'ಪಕ್ಷದ ಕೇಂದ್ರೀಯ ಚುನಾವಣಾ ಸಮಿತಿ ಮುಖ್ಯಸ್ಥ ಮಧುಸೂದನ್ ಮಿಸ್ತ್ರಿ ನಿರ್ದೇಶಿಸಿರುವ ಪ್ರಕಾರ ಪ್ರಚಾರ ನಡೆಸುವವರು ಪಕ್ಷದಲ್ಲಿ ಯಾವುದೇ ಸ್ಥಾನ ಹೊಂದಿರಬಾರದು. ಹೀಗಾಗಿ, ಈ ನಿರ್ಧಾರ ಕೈಗೊಂಡಿದ್ದು, ರಾಜೀನಾಮೆಯನ್ನು ಕೆಪಿಸಿಸಿ ಅಧ್ಯಕ್ಷರಿಗೆ ಸಲ್ಲಿಸಿದ್ದೇನೆ' ಎಂದು ಸುದರ್ಶನ್ ಅವರು ಹೇಳಿದರು.

ಚಿತ್ರಾವಳಿ

ದಸರಾ ಹಬ್ಬದ ಪ್ರಯುಕ್ತ ಪಾಲಿಕೆಯ ಪೌರ ಕಾರ್ಮಿಕರಿಗೆ ಬಹುಜನ ಸಮಾಜ ಪಕ್ಷದ ರಾಜ್ಯ ಉಸ್ತುವಾರಿ ಮಾರಸಂದ್ರ ಮುನಿಯಪ್ಪ ಅವರು ಬಟ್ಟೆ ಮತ್ತು ಸಿಹಿ ವಿತರಿಸಿದರು

ರಾಜಾಜಿನಗರದ ನಿವೃತ್ತ ಸೇನಾಧಿಕಾರಿ ರಾಜಾರಾಮ್, ಮೀನಾ ಅವರ ಮನೆಯಲ್ಲಿ ಕೂರಿಸಿರುವ ದಸರಾ ಬೊಂಬೆಗಳು ಎಲ್ಲರನ್ನು ಆಕರ್ಷಿಸುತ್ತಿವೆ. ಚಿತ್ರದ ಎರಡನೇ ಮೆಟ್ಟಿಲು ಮೇಲಿರುವ ಪಟ್ಟದ ಗೊಂಬೆಗಳು 115 ವರ್ಷ ಹಳೆಯವು. ಮೂರು ತಲೆಮಾರಿನ ಒಟ್ಟು 2087 ಗೊಂಬೆಗಳನ್ನು ಕೂಡಿಸಿದ್ದಾರೆ.

ಸಹಕಾರನಗರ: ₹9 ಕೋಟಿ ವೆಚ್ಚದಲ್ಲಿ ನಿರ್ಮಾಣ

ಒಳಾಂಗಣ ಕ್ರೀಡಾಂಗಣ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಸಹಕಾರನಗರ ಒಳಾಂಗಣ ಕ್ರೀಡಾಂಗಣವನ್ನು ಸಂಸದ ಡಿ.ವಿ.ಸದಾನಂದಗೌಡ, ಶಾಸಕ ಕೃಷ್ಣ ಬೈರೇಗೌಡ ಉದ್ಘಾಟಿಸಿದರು. ಮಾಜಿ ಉಪಮೇಯರ್ ಎಂ.ಆನಂದ್, ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತರಾದ ಪೂರ್ಣಿಮಾ, ಇತರರು ಇದ್ದರು.

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಕೊಡಿಗೇಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಬಿಬಿಎಂಪಿ ವತಿಯಿಂದ ₹9 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಸಹಕಾರನಗರ ಒಳಾಂಗಣ ಕ್ರೀಡಾಂಗಣವನ್ನು ಸಂಸದ ಡಿ.ವಿ.ಸದಾನಂದಗೌಡ ಮತ್ತು ಶಾಸಕ ಕೃಷ್ಣ ಬೈರೇಗೌಡ ಲೋಕಾರ್ಪಣೆಗೊಳಿಸಿದರು.

18 ಸಾವಿರ ಚದರಡಿ ವಿಸ್ತೀರ್ಣದಲ್ಲಿ ನಿರ್ಮಿಸಿರುವ ಈ ಕ್ರೀಡಾಂಗಣದಲ್ಲಿ ಯೋಗ, ಜುಂಬಾ, ಏರೋಬಿಕ್ಸ್ ಅಭ್ಯಾಸಕ್ಕಾಗಿ ಹಾಲ್, ಜಿಮ್ ಹಾಲ್, 4 ಬ್ಯಾಡ್ಮಿಂಟನ್ ಕೋರ್ಟ್, ಟೇಕ್ವಾಂಡೊ ಕರಾಟೆ ಹಾಲ್, ಟೇಬಲ್ ಟೆನ್ನಿಸ್, ಕೇರಮ್, ಸ್ಕೇಟಿಂಗ್, ಚೆಸ್, ಸ್ಕ್ವಾಶ್ ಕೋರ್ಟ್‌ಗಳನ್ನು ನಿರ್ಮಿಸಲಾಗಿದೆ. ಅಲ್ಲದೆ ಸಭೆ, ಸಮಾರಂಭಗಳನ್ನು ಆಯೋಜಿಸಲು ವಿಶಾಲವಾದ ವಿವಿಧೋದ್ದೇಶ ಸಭಾಂಗಣ ನಿರ್ಮಿಸಲಾಗಿದೆ.

ಸದಾನಂದಗೌಡ ಮಾತನಾಡಿ, 'ಈ ಭಾಗದ ಜನರಿಗೆ ಅನುಕೂಲವಾಗುವಂತೆ ವಿವಿಧ ಸೌಲಭ್ಯಗಳನ್ನು ಒಳಗೊಂಡ ಒಳಾಂಗಣ ಕ್ರೀಡಾಂಗಣ ನಿರ್ಮಿಸಿರುವುದು ಶ್ಲಾಘನೀಯ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು' ಎಂದು ಮನವಿ ಮಾಡಿದರು.

ಕೃಷ್ಣ ಬೈರೇಗೌಡ ಮಾತನಾಡಿ, 'ಖಾಸಗಿ ಕ್ರೀಡಾಂಗಣಗಳನ್ನೂ ಮೀರಿಸುವ ರೀತಿಯಲ್ಲಿ ಒಂದೇ ಸೂರಿನಡಿಯಲ್ಲಿ ವಿವಿಧ ಕ್ರೀಡೆಗಳ ಅಭ್ಯಾಸ ಮತ್ತು ಪಂದ್ಯಗಳನ್ನು ಆಯೋಜಿಸಲು ಅನುಕೂಲವಾಗುವಂತೆ ಸುಸಜ್ಜಿತ ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗಿದೆ' ಎಂದು ತಿಳಿಸಿದರು.

ಕ್ರೀಡಾಹಬ್ಬ: ಕ್ರೀಡಾಂಗಣದ ಉದ್ಘಾಟನಾ ಸಮಾರಂಭದ ಪ್ರಯುಕ್ತ 2 ದಿನಗಳ ಕ್ರೀಡಾಕೂಟವನ್ನು ಏರ್ಪಡಿಸಲಾಗಿತ್ತು. ಕರಾಟೆ, ವಾಲಿಬಾಲ್, ಬ್ಯಾಸ್ಕೆಟ್ ಬಾಲ್, ಬ್ಯಾಡ್ಮಿಂಟನ್, ಚೆಸ್, ಟೇಬಲ್ ಟೆನ್ನಿಸ್ ಮತ್ತಿತರ ಪಂದ್ಯಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಮಾಜಿ ಉಪಮೇಯರ್ ಎಂ.ಆನಂದ್, ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತರಾದ ಪೂರ್ಣಿಮಾ, ಮುಖ್ಯ ಎಂಜಿನಿಯರ್ ಎಸ್.ಪಿ.ರಂಗನಾಥ್, ಕಾರ್ಯಪಾಲಕ ಎಂಜಿನಿಯರ್ ಸುಧಾಕರ ರೆಡ್ಡಿ, ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್. ಶ್ರೀನಿವಾಸಯ್ಯ, ವಿ.ವಿ.ಪಾರ್ಥಬರಾಜನ್, ವಿ.ಹರಿ, ಟಿ.ಕೆ.ಗೋಪಾಲಯ್ಯ, ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಬಿ.ಎಂ. ದೇವರಾಜಪ್ಪ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

TITAN COMPANY LIMITED
Registered Office : 3, Sipcot Industrial Complex, Hosur, Tamil Nadu – 635126

NOTICE is hereby given that the certificate for the undermentioned securities of the Company has/have been lost / misplaced and the holder of the said securities / applicant has / have applied to the Company to issue duplicate certificate.

Any person who has a claim in respect of the said securities should lodge such claim with the Company at its Registered Office within 15 days from this date, else the company will proceed to issue duplicate certificate without further intimation.

Name of the Holder : Mani Venugopal, **Kind of Securities and Face Value :** Equity Shares / Face Value Re.1/-, **No. of Securities :** 9000, **Distinctive No.:** 23001641 – 23010640.

Bangalore **Dr. Mani Venugopal**
26th Sept 2022

PUBLIC NOTICE

My client entered into Sale Agreement to purchase the Schedule Property from Smt. **LEENA MENEZES** W/o. D. Menezes, Aged about 74 years, residing at No.202, "Favourite Chalet", No.15, 1st Cross, Cooke Town, D' Costa Layout, Bangalore – 84. This Notice is hereby given for the information of General Public that any persons or Banks or Financial Institutions or any statutory authorities having any right, title, interest or claim against the Schedule Property, may contact with documentary proof in support of his/her/their claim. If no claim is so lodged with us within the said period of 15 days from this date of publication, it shall be presumed by my client that no one has any claim against the Schedule Property.

SCHEDULE PROPERTY : All that piece and parcel of immovable property vacant Site bearing No.2B.C-301, situated at East of N.G.E.F Extension, BBMP Ward No.51, Bangalore,. **Site measuring** East to West: 8.70 mtrs., on northern side, 9.70 mtrs., on southern side, North to South :12.50 mtrs., total: 115 sq.mtrs., **Bounded on** East By: Site No.2B.C-303, West By :3rd 'A' Main Road, North By -Site No.2C.C-302, South By : 2nd 'B' Cross Road,

Sd/- P. Narasimhaiah, Advocate, No.1, 18th Cross, Malleswaram, Bangalore-55 Ph:080 23343461 Mob: 94482 73366 Mail: p.narasimhaiah@yahoo.co.in www.pnarasimhaiah-advocate.com
Date:06.10.2022 Place: Bangalore

COURT NOTICE

In,
The Court of Presiding Officer, D.C.D.R.C. at Seraikella
C.C. No. 03/2021
ADANKI MOHAN. .....Complainant
Vs.
FLIPKART INTERNET PVT. LTD. ......Opp. Party

To,
FLIPKART INTERNET PVT. LTD.
At. -Ozone Maney Tech Park 56/18 & 55/09, 7th Floor, Garvebhari Paiya Hosur Road, Bangalore (KARNATAKA) Pin- 560068

Whereas the complainant has filed this case against you.
Where it has been proved to the satisfaction of the commission that the Q.P. above named can not be served in the ordinary way of service, hence this proclamation is hereby issued against him.
you are hereby ordered to appear before this learned commission personally or through duly authorized advocate and state your case on 21-10-2022 time 10:30 AM before this commission positively failing which this case, shall be heard and determine in your absence.
Give under my hand and seal of the commission on 22/09/2022
Sd/-
The Court of Presiding Officer, D.C.D.R.C. at Seraikella

JOB OPPORTUNITIES

Security & Detectives

WANTED EXPERIENCED MARKETING EXECUTIVE/ OPERATION/ AREA MANAGER/ FIELD OFFICER/ SUPERVISOR/ GUARD for a REPUTED SECURITY AGENCY at BANGALORE. Contact: 9945273400 Monday-Saturday, Between: 9.30AM -5.30PM

Hospital & Medical Jobs

WANTED NURSING STAFF, PATIENT ATTENDANTS for CV HOSPITAL at Chetana Vihara, 143B Bommasandra IA, Vinayakanagara, Bangalore-99. Boarding & Lodging provided for eligible. Contact: 080-41511104; 97418-62781, Mail: cvhospital.in@gmail.com

Part-Time Jobs

MNC CO, Great Opportunity Work from Home, Earn Unlimited, Part/ Full. Time Job: 7019215243/ 9886641282

Teachers/ Professors

GURUKULA INTERNATIONAL School Requires, NURSERY/ Primary CO-ordinator, Computer Teachers for High School and Lady Accountant with Kannada Typing. 9th Cross, Near Magadi Road Metro Station, Bangalore-23. 7829338292 7676676629

For Advt. Booking Contact : 9845114560

PRINCIPAL REQUIRED for REPUTED ISLAMIC SCHOOL in Bangalore Minimum Qualification: Masters with B.Ed Minimum experience: 10years Call/WhatsApp: 9880194234 dzhussain@gmail.com

BUSINESS

Business Offers

Finance

NRI'S INVESTMENT And Finance 600Cr Available From Investor (security as property or viable huge projects) genuine parties Contact-7411265189

WANTED VEG Hotel Daily and Monthly Finance 10 Lakh Required Contact: 8892501007/ 9606701007

WE ARRANGE Finance from Financial institutions such as Term, Project loan Working capital Housing and Mortgage loan. Contact S Narayan Retd Banker. 8971377299/ 8971132289.

PERSONAL

Change of Name

GEETA BALA JANA, Mother/o, JC676311Y, NB SUB, PRASANTA KUMAR JANA, Vill- Srirampur, Akalpoush, Kharagpur, Paschim Medinipur, West Bengal changed name GEETA BALA JANA to GITA JANA 03/10/2022 Notary K.V. Mani Bangalore

BIJAY KRISHNA JANA, Father/o, JC676311Y, NB SUB, PRASANTA KUMAR JANA, Vill- Srirampur, Akalpoush, Kharagpur, Paschim Medinipur, West Bengal changed name BIJAY KRISHNA JANA to BIJOY JANA 03/10/2022 Notary K.V. Mani Bangalore

NIRMALA, WIFE/O, JC681752Y, SUB/ASH, HET RAM, Vill- Kangru, Baggi, Sadar Mandi, Mandi, Himachal Pradesh changed name NIRMALA to NIRMALA DEVI, 03/10/2022 Notary K.V. Mani Bangalore

SAKHARE SHIVANAND RAVASAHEB, JC672377X, SUB/MT, Vill - Belanki, Miraj, Sangli, Maharashtra, changed Son's name AMIT KUMAR to AMIT SHIVANAND SAKHARE, 04/10/2022, Notary K.V. Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD | ಪ್ರಜಾವಾಣಿ

BOOK YOUR CLASSIFIEDS ADVERTISEMENT

DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 |
9845114560 | 9731810277 | 9901641752 | 9886213331
conditions apply*
dhclassifieds@deccanherald.co.in www.dhclassifieds.com

ಗಾಂಬಿಯಾ: ಭಾರತದ ಕೆಮ್ಮಿನ ಸಿರಪ್ ಸೇವಿಸಿ 66 ಮಕ್ಕಳ ಸಾವು?

ನ್ಯೂಯಾರ್ಕ್ (ಪಿಟಿಐ): 'ಭಾರತದ ಕಂಪನಿಯೊಂದು ತಯಾರಿಸಿರುವ ನಾಲ್ಕು ಕಲುಷಿತ ಕೆಮ್ಮಿನ ಸಿರಪ್‌ಗಳನ್ನು ಸೇವಿಸಿ ಪಶ್ಚಿಮ ಆಫ್ರಿಕಾದಲ್ಲಿನ ಗಾಂಬಿಯಾ ದೇಶದ 66 ಮಕ್ಕಳು ಸಾವಿಗೀಡಾಗಿದ್ದಾರೆ' ಎಂದು ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಬುಧವಾರ ಆರೋಪಿಸಿದೆ.

ನವದೆಹಲಿ ಮೂಲದ ಮೈಡನ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ ತಯಾರಿಸಿರುವ ಈ ಸಿರಪ್‌ಗಳನ್ನು ಮಕ್ಕಳಲ್ಲಿ ಕೆಮ್ಮು ಮತ್ತು ಶೀತನಿವಾರಕವಾಗಿ ಬಳಸಲಾಗುತ್ತಿದೆ. ಈ ಸಿರಪ್‌ಗಳು ವಿಷಕಾರಿ ಹಾಗೂ ಮಾರಣಾಂತಿಕ ರಾಸಾಯನಿಕಗಳನ್ನು ಹೊಂದಿವೆ ಎಂದು ಡಬ್ಲ್ಯುಎಚ್‌ಒ ಅಭಿಪ್ರಾಯಪಟ್ಟಿದೆ.

ಪ್ರೊಮೆಥಜೈನ್ ಓರಲ್ ಸಲ್ಯೂಷನ್, ಕೊಫೆಕ್ಸ್‌ಮಲಿನ್ ಬೇಬಿ ಕಾಫ್ ಸಿರಪ್, ಮ್ಯಾಕಫ್ ಬೇಬಿ ಕಾಫ್ ಸಿರಪ್ ಮತ್ತು ಮಾಗ್ರಿಪ್ ಅಂಡ್ ಕೋಲ್ಡ್ ಸಿರಪ್ ಹೆಸರಿನ ಈ ಎಲ್ಲಾ ಸಿರಪ್‌ಗಳನ್ನು ಮೈಡನ್ ಫಾರ್ಮಾಸ್ಯುಟಿಕಲ್ಸ್ ಲಿ. ತಯಾರಿಸಿದೆ ಎಂದು ಡಬ್ಲ್ಯುಎಚ್‌ಒ ವೈದ್ಯಕೀಯ ಉತ್ಪನ್ನಗಳ ಎಚ್ಚರಿಕೆ ಪ್ರಕಟಣೆಯು ತಿಳಿಸಿದೆ.

'ಗಾಂಬಿಯಾದಲ್ಲಿ ಗುರುತಿಸಲಾಗಿರುವ ಈ 4 ಕಲುಷಿತ ಔಷಧಿಗಳನ್ನು ಸೇವಿಸಿದ 66 ಮಕ್ಕಳಲ್ಲಿ ತೀವ್ರತರವಾದ ಮೂತ್ರಪಿಂಡದ ಸಮಸ್ಯೆ, ವಾಂತಿ, ಹೊಟ್ಟೆ ನೋವು, ಅತಿಸಾರ, ತಲೆನೋವು ಕಾಣಿಸಿಕೊಂಡಿತ್ತು. ಈ ಮಕ್ಕಳ ಸಾವು ಅವರ ಕುಟುಂಬಗಳ ಪಾಲಿಗೆ ದೊಡ್ಡ ನೋವು ನೀಡಿದೆ' ಎಂದೂ ಡಬ್ಲ್ಯುಎಚ್‌ಒ ಮಹಾನಿರ್ದೇಶಕ ಟೆಡ್ರೊಸ್ ಅಧಾನಮ್ ಗೆಬ್ರಿಯೇಸಸ್ ಟ್ವೀಟ್ ಮಾಡಿದ್ದಾರೆ.

ಆರೋಪಿ ಜಾನ್ ಡಿ ಕ್ರೂಸ್ ಬಂಧಿಸಿದ ಆರ್‌.ಟಿ. ನಗರ ಪೊಲೀಸರು

ತಾಯಿ ಕೊಲೆಗೆ ಯತ್ನಿಸಿದ ಮಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಕ್ಷಾಂತರ ರೂಪಾಯಿ ಮೌಲ್ಯದ ಆಸ್ತಿಯನ್ನು ಮಗನ ಹೆಸರಿಗೆ ಬರೆದುಕೊಟ್ಟಿದ್ದರೂ ಉಳಿದ ಅಲ್ಪ ಆಸ್ತಿ ನೀಡುವಂತೆ ಒತ್ತಾಯಿಸುತ್ತಿದ್ದ ಪುತ್ರ, ತಾಯಿ ಕೊಲೆಗೆ ಯತ್ನಿಸಿದ ಘಟನೆ ಆರ್‌.ಟಿ.ನಗರದ 2ನೇ ಬ್ಲಾಕ್‌ನಲ್ಲಿ ನಡೆದಿದೆ.

ಆರ್‌.ಟಿ. ನಗರ ಪೊಲೀಸರು ಜಾನ್ ಡಿ ಕ್ರೂಸ್ (60) ಎಂಬಾತನನ್ನು ಬಂಧಿಸಿದ್ದಾರೆ.

ಕ್ಯಾಥರಿನ್

ಜಾನ್

'ಕ್ಯಾಥರಿನ್ ಡಿ ಕ್ರೂಸ್ (88) ಎಂಬುವವರಿಗೆ ನಾಲ್ವರು ಮಕ್ಕಳು. ಅದರಲ್ಲಿ ಇಬ್ಬರು ಗಂಡುಮಕ್ಕಳು ಅಮೆರಿಕದಲ್ಲಿ ನೆಲೆಸಿದ್ದಾರೆ. ಕ್ಯಾಥರಿನ್ ಅವರು ಪುತ್ರಿಯ ಮನೆಯಲ್ಲಿ ನೆಲೆಸಿದ್ದಾರೆ. ಮೊದಲ ಪುತ್ರ ಜಾನ್‌ಗೆ ಆಸ್ತಿ ಪಾಲು ಮಾಡಿಕೊಟ್ಟಿದ್ದರೂ ತಾಯಿ ಜತೆಗೆ ಗಲಾಟೆ ನಡೆಸುತ್ತಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಕ್ಯಾಥರಿನ್‌ಗೆ ಅಮೆರಿಕದಲ್ಲಿರುವ ಪುತ್ರರು ಕೇರ್‌ಟೇಕರ್ ನೇಮಿಸಿದ್ದರು. ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಅವರಿಗೆ ಮನೆಯಲ್ಲೇ ಆಮ್ಲಜನಕ ಪೂರೈಕೆಯ ವ್ಯವಸ್ಥೆ ಮಾಡಲಾಗುತ್ತಿತ್ತು. ಏಕಾಏಕಿ ಮನೆಗೆ ನುಗ್ಗಿದ ಜಾನ್ ಕೇರ್‌ಟೇಕರ್‌ನನ್ನು ಮನೆಯಿಂದ ಹೊರಗೆ ತಳ್ಳಿ ತಾಯಿಗೆ ಆಕ್ಸಿಜನ್ ಪೂರೈಕೆ ಪೈಪ್‌ಕಿತ್ತು ಹಲ್ಲೆ ನಡೆಸಿದ್ದಾನೆ. ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಕ್ಯಾಥರಿನ್ ಅವರನ್ನು ರಕ್ಷಿಸಲಾಯಿತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಲ್ಲೆ ಪ್ರಕರಣ: ಮೂವರ ಬಂಧನ

ಬೆಂಗಳೂರು: ಹಳೇ ದ್ವೇಷದಿಂದ ಯುವಕನ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

ಮುಬಾರಕ್, ಮೊಹಮ್ಮದ್ ಹಾಗೂ ಅಬೂಬಕರ್ ಬಂಧಿತ ಆರೋಪಿಗಳು. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ.

'ಶಾಮಣ್ಣ ಉದ್ಯಾನದಲ್ಲಿ ತನ್ನ ಸ್ನೇಹಿತರ ಜೊತೆಗೆ ಶೋಯಬ್ ಮಾತುಕತೆ ನಡೆಸುತ್ತಿದ್ದ ವೇಳೆ ಎರಡು ಬೈಕ್‌ನಲ್ಲಿ ಬಂದ ಆರೋಪಿಗಳು ಹಿಗ್ಗಾಮುಗ್ಗ ಥಳಿಸಿದ್ದರು. ಅಲ್ಲಿಂದ ಶೋಯಬ್ ತಪ್ಪಿಸಿಕೊಂಡು ಓಡಲು ಯತ್ನಿಸಿದಾಗ ಹಿಂಬಾಲಿಸಿದ ಆರೋಪಿಗಳು, ಬೆನ್ನು ಹಾಗೂ ಮುಖದ ಮೇಲೆ ಹಲ್ಲೆ ನಡೆಸಿದ್ದರು. ಸ್ಥಳದಲ್ಲೇ ಕುಸಿದು ಬಿದ್ದಿದ್ದ ಶೋಯಬ್‌ನನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಆತ ಪ್ರಾಣಾಪಾಯದಿಂದ ಪಾರಾಗಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮುಬಾಕರ್ ಸಂಬಂಧಿಗೆ ಶೋಯಬ್ ಹಲ್ಲೆ ನಡೆಸಿದ್ದಾನೆ ಎಂಬ ಕಾರಣಕ್ಕೆ ಇಬ್ಬರ ನಡುವೆ ದ್ವೇಷ ಬೆಳೆದಿತ್ತು. ಈ ಹಿಂದೆ ಗುಂಪೊಂದು ಶೋಯಬ್ ಮನೆ ಮೇಲೆ ಕಲ್ಲು ತೂರಾಟ ನಡೆಸಿತ್ತು' ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ದಸರಾ: ಮೂರ್ತಿ ವಿಸರ್ಜನೆ ವೇಳೆ ಇಬ್ಬರು ನೀರುಪಾಲು

ಬೆಂಗಳೂರು: ರಾಜರಾಜೇಶ್ವರಿ ನಗರದ ನಿವಾಸಿ ರಾಮ್ ರತನ್ ಅವರ ಮನೆಯಲ್ಲಿ ದಸರಾ ಅಂಗವಾಗಿ ಪೂಜಿಸಿದ್ದ ದುರ್ಗಾಮಾತೆ ಮೂರ್ತಿಯನ್ನು ಕೆರೆಯಲ್ಲಿ ವಿಸರ್ಜಿಸುವ ವೇಳೆ ಇಬ್ಬರು ನೀರು ಪಾಲಾಗಿದ್ದಾರೆ.

ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಶೋಧ ನಡೆಸಿದರೂ ಇಬ್ಬರ ಸುಳಿವು ಸಿಕ್ಕಿಲ್ಲ.

'ರತನ್ ಅವರು ಮಹಾರಾಷ್ಟ್ರದ ನಿವಾಸಿ. ನಗರದಲ್ಲಿ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದರು. ನವರಾತ್ರಿ ಅಂಗವಾಗಿ ಮನೆಯಲ್ಲಿ ದುರ್ಗಾ ಮಾತೆ ಪೂಜಿಸಿದ್ದರು. ಬುಧವಾರ ಕುಟುಂಬದ ಐವರೊಂದಿಗೆ ಮೂರ್ತಿ ವಿಸರ್ಜನೆಗೆ ಕೆಂಗೇರಿಯ ಉತ್ತರಹಳ್ಳಿ ಮುಖ್ಯರಸ್ತೆಯ ಸಾವನ್ ದರ್ಬಾರ್ ಆಶ್ರಮದ ಮುಂಭಾಗದ ಸುಣಕಲ್ ಪಾಳ್ಯಕೆರೆಗೆ ತೆರಳಿದ್ದರು. ಆಗ ಸೋಮೇಶ್ (21) ಹಾಗೂ ಜಿತು (22) ಅವರು ನಾಪತ್ತೆ ಆಗಿದ್ದಾರೆ. ಉಳಿದ ಮೂವರು ಮಾತ್ರ ನೀರಿನಿಂದ ಹೊರಬಂದಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಬ್ಬದ ತ್ಯಾಜ್ಯ ಆಯುಧಪೂಜೆ ಹಬ್ಬದ ನಂತರ ಕೆ.ಆರ್. ಮಾರುಕಟ್ಟೆಯ ಬಳಿ ಬುಧವಾರ ವಿಲೇವಾರಿಯಾಗದ ತ್ಯಾಜ್ಯ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ನಾಯಿಗೆ ಹೊಡೆದ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಭಟ್ಟರಹಳ್ಳಿ ಸಮೀಪದ ಮಂಜುನಾಥ್ ಲೇಔಟ್‌ನಲ್ಲಿ ತನ್ನ ನಾಯಿಯನ್ನು ಪಕ್ಕದ ಮನೆಯ ನಾಯಿ ಕಚ್ಚಿದೆ ಎಂಬ ಕಾರಣಕ್ಕೆ ಕಾಂಪೌಂಡ್ ಒಳಗೆ ನುಗ್ಗಿ, ನಾಯಿಯನ್ನು ಹಗ್ಗದಿಂದ ಕಟ್ಟಿಹಾಕಿ ಮನಸೋಇಚ್ಛೆ ಥಳಿಸಲಾಗಿದೆ. ನಾಯಿ ಥಳಿಸಿ ಮಾಲೀಕರಿಗೆ ಬೆದರಿಕೆ ಹಾಕಿದ ಮೂವರು ಆರೋಪಿಗಳನ್ನು ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ.

ನಾಗರಾಜ್ ಅವರ ನಾಯಿಯನ್ನು ಗದ್ದಿಗೆಪ್ಪ ಅವರಿಗೆ ಸೇರಿದ 'ಅಚ್ಚು' ಹೆಸರಿನ ಶ್ವಾನವು ಬೊಗಳಿ ಕಚ್ಚಿದೆ ಎಂಬ ಕಾರಣಕ್ಕೆ ಸೋಮವಾರ ರಾತ್ರಿ 10ರ ಸುಮಾರಿಗೆ ಪಕ್ಕದ ಮನೆ ನಾಗರಾಜ್ ಅವರ ಮಕ್ಕಳಾದ ರಾಹುಲ್, ರಜತ್ ಮತ್ತು ರಂಜಿತ್ ಎಂಬುವವರು ನಾಯಿ ಮೇಲೆ ಹಲ್ಲೆ ನಡೆಸಿದ್ದಾರೆ.



ಹಲ್ಲೆ ನಡೆಸಿದ ಆರೋಪಿಗಳು

ಹಗ್ಗದಿಂದ ಕಟ್ಟಿಹಾಕಿ ನಾಯಿ ಸುತ್ತುವರಿದು, ಕಣ್ಣುಗುಡ್ಡೆ ಹೊರ ಬರುವಂತೆ ಮನಬಂದಂತೆ ದೊಣ್ಣೆಗಳಿಂದ ಹೊಡೆದಿದ್ದಾರೆ. ಹಲ್ಲೆ ನಡೆಸುತ್ತಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದ್ದು, ಶ್ವಾನಪ್ರಿಯರ ಆಕ್ರೋಶಕ್ಕೆ ಕಾರಣವಾಗಿದೆ.

'ಅಚ್ಚು'ಗೆ ಹೊಡೆಯದಂತೆ ಕೇಳಿಕೊಂಡರೂ ಅವರ ಮನಸ್ಸು ಕರಗಲಿಲ್ಲ' ಎಂದು ಮಾಲೀಕರು ನೋವು ತೋಡಿಕೊಂಡಿದ್ದಾರೆ.

'ತಲೆಗೆ ತೀವ್ರ ಪೆಟ್ಟಾಗಿರುವ ನಾಯಿಗೆ ದೊಮ್ಮಲೂರಿನ ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಪ್ರಶ್ನಿಸಿದ್ದಕ್ಕೆ ನನ್ನ ಮೇಲೆಯೂ ಹಲ್ಲೆ ನಡೆಸಲಾಗಿದೆ. ಪ್ರಾಣ ಬೆದರಿಕೆ ಸಹ ಹಾಕಿದ್ದರು' ಎಂದು ಗದ್ದಿಗೆಪ್ಪ ಅವರು ಮೂವರ ವಿರುದ್ಧ ದೂರು ನೀಡಿದ್ದಾರೆ.

₹ 20 ಲಕ್ಷ ಮೌಲ್ಯದ ಚಿನ್ನಾಭರಣ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಿಯನಪಾಳ್ಯದಲ್ಲಿ ಮನೆಯ ಬೀಗ ಒಡೆದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿದ್ದ ಬನ್ನೇರಘಟ್ಟದ ಪಿಲ್ಲಗಾನಹಳ್ಳಿಯ ಕೃಷ್ಣಪ್ಪ ಲೇಔಟ್‌ನ ನಿವಾಸಿ, ಆರೋಪಿ ಕೆ. ಗುಣಶೇಖರ್ (23) ಎಂಬಾತನನ್ನು ತಲಘಟ್ಟಪುರ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಆರೋಪಿಯೊಂದಿಗೆ ಕಾರ್ಯಾಚರಣೆ ನಡೆಸಿದ ಪೊಲೀಸರು

'ಚಿನ್ನದ ಅಂಗಡಿಯಲ್ಲಿ ಅಡವಿಟ್ಟಿದ್ದ ₹ 20 ಲಕ್ಷದ 415 ಗ್ರಾಂ ಚಿನ್ನಾಭರಣ ಹಾಗೂ ₹ 12 ಸಾವಿರ ನಗದು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬೀರುವಿನಲ್ಲಿದ್ದ ಚಿನ್ನಾಭರಣ, ₹ 20 ಸಾವಿರ ನಗದು ಕಳವು ಮಾಡಿ ಆರೋಪಿ ಪರಾರಿಯಾಗಿದ್ದ' ಎಂದು ಮೂಲಗಳು ಹೇಳಿವೆ.

ಜೆಡಿಎಸ್, ಬಿಜೆಪಿ ದೂರು, ಪ್ರತಿದೂರು

ಚನ್ನಪಟ್ಟಣ: ಜೆಡಿಎಸ್ ಹಾಗೂ ಬಿಜೆಪಿ ಮುಖಂಡರಿಬ್ಬರು ತಮ್ಮ ಮೇಲೆ ಹಲ್ಲೆ ನಡೆದಿರುವುದಾಗಿ ಪುರ ಪೊಲೀಸ್ ಠಾಣೆಯಲ್ಲಿ ಪರಸ್ಪರ ದೂರು ಪ್ರತಿದೂರು ದಾಖಲಿಸಿದ್ದಾರೆ.

ಬಿಜೆಪಿ ಮುಖಂಡ ಹಾಗೂ ಸಾಮಾಜಿಕ ಕಾರ್ಯಕರ್ತ ಸಿದ್ದನಹಳ್ಳಿ ಸಿದ್ದೇಗೌಡ ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಜೆಡಿಎಸ್ ಮುಖಂಡ ಹಾಗೂ ಗುತ್ತಿಗೆದಾರ ಗೋವಿಂದಹಳ್ಳಿ ನಾಗರಾಜು ದೂರು ದಾಖಲಿಸಿದ್ದಾರೆ. ಇವರು ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಾಗೆಯೇ ಗೋವಿಂದಹಳ್ಳಿ ನಾಗರಾಜು ಹಾಗೂ ಅವರ ಬೆಂಬಲಿಗರು ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಸಿದ್ದನಹಳ್ಳಿ ಸಿದ್ದೇಗೌಡ ಅವರು ಪ್ರತಿದೂರು ದಾಖಲಿಸಿದ್ದಾರೆ. ಇವರು ಸಹ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದಿದ್ದಾರೆ.

ಮತಾಂತರ ಆರೋಪ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರೀಧರ್ ಎಂಬ ಯುವಕನನ್ನು ಬಲವಂತದಿಂದ ಮತಾಂತರ ಮಾಡಿದ್ದಾರೆ' ಎಂಬ ಆರೋಪದ ಹಿನ್ನೆಲೆಯಲ್ಲಿ, ಬನಶಂಕರಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಶಬ್ಬೀರ್ ಹಾಗೂ ಅತ್ತಾವುರ್ ರೆಹಮಾನ್ ಬಂಧಿತರು. ಈ ಪ್ರಕರಣದ ಸಂಬಂಧ ಇನ್ನೂ ಹಲವು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬನಶಂಕರಿ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದ್ದ ಕಾರಣಕ್ಕೆ ಹುಬ್ಬಳ್ಳಿ ನವನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಇಲ್ಲಿಗೆ ವರ್ಗಾವಣೆ ಮಾಡಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಬಂಧಿತ ಆರೋಪಿಗಳು

'ಧರ್ಮ ಬೋಧನೆ ಮಾಡಿ ಸಲ್ಮಾನ್ ಎಂದು ಹೆಸರು ಬದಲಾಯಿಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೆ. ಅತ್ತಾವರ್ ಬಳಿ ಹಣಕಾಸಿನ ತೊಂದರೆಯ ಬಗ್ಗೆ ಹೇಳಿಕೊಂಡಿದ್ದಕ್ಕೆ ಬನಶಂಕರಿಯ ಮಸೀದಿಗೆ ಕರೆತಂದಿದ್ದ. ಅಲ್ಲಿ ನನಗೆ ಬಂದೂಕು ನೀಡಿ ಹಲವರು ವಿಡಿಯೊ ಮಾಡಿಕೊಂಡಿದ್ದರು. ಈ ವಿಚಾರವನ್ನು ಪೊಲೀಸರು ಅಥವಾ ಬೇರೆ ಯಾರಿಗಾದರೂ ತಿಳಿಸಿದರೆ ವಿಡಿಯೊ ವೈರಲ್ ಮಾಡುವುದಾಗಿ ಬೆದರಿಕೆ ಹಾಕಿದ್ದರು' ಎಂದು ಯುವಕ ಪೊಲೀಸರಿಗೆ ತಿಳಿಸಿದ್ದಾನೆ.

ನಟಿ ಶ್ರೀಲೀಲಾ ತಾಯಿ ವಿರುದ್ಧ ಮತ್ತೊಂದು ಪ್ರಕರಣ

ಬೆಂಗಳೂರು: ಆಡುಗೋಡಿ ಪೊಲೀಸ್ ಠಾಣೆಯಲ್ಲಿ ನಟಿ ಶ್ರೀಲೀಲಾ ತಾಯಿ ಸ್ವರ್ಣಲತಾ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

ಅವರ ಮಾಜಿ ಪತಿ ಸುಧಾಕರ್ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೆಲವು ವರ್ಷಗಳ ಹಿಂದೆ ಸುಧಾಕರ್ ಮತ್ತು ಸ್ವರ್ಣಲತಾ ವಿಚ್ಛೇದನ ಪಡೆದುಕೊಂಡಿದ್ದರು. ಕೋರಮಂಗಲದ ತಮ್ಮ ಮನೆಗೆ ಸ್ವರ್ಣಲತಾ ನುಗ್ಗಿ ತಮ್ಮ ಮೇಲೆ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿ ಸುಧಾಕರ್ ದೂರು ನೀಡಿದ್ದಾರೆ. ಅತಿಕ್ರಮ ಪ್ರವೇಶದ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಜಾಮೀನು ಸಹಿತ ಪ್ರಕರಣವಾದದ್ದರಿಂದ ಬಂಧಿಸಿಲ್ಲ. ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕೆಲವು ತಿಂಗಳ ಹಿಂದೆ ಅಲಯನ್ಸ್ ವಿ.ವಿ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಆರೋಪ ಅಡಿ ಸ್ವರ್ಣಲತಾ ವಿರುದ್ಧ ಆನೇಕಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಭೂಕಬಳಿಕೆ ಆರೋಪ: ಪ್ರತಿಭಟನೆ

ಕೆಂಗೇರಿ: ಪರಿಶಿಷ್ಟ ಸಮುದಾಯಕ್ಕೆ ಸೇರಿದ ಭೂಮಿಯನ್ನು ಆರ್ಟ್ ಆಫ್ ಲಿವಿಂಗ್ ಆಶ್ರಮ ಕಬಳಿಸಿದೆ ಎಂದು ಆರೋಪಿಸಿ ಸಮತಾ ಸೈನಿಕ ದಳದ ಕಾರ್ಯಕರ್ತರು ಆಶ್ರಮದ ಎದುರು ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರದ ಗ್ರೋ ಮೋರ್ ಫುಡ್ ಯೋಜನೆಯ ಅಡಿ ನಗರದ ಲಕ್ಷ್ಮೀಪುರ ಗ್ರಾಮದ ಹನುಮಯ್ಯ ಹಾಗೂ ಇನ್ನಿತರ 7 ಮಂದಿಗೆ, ಕಗ್ಗಲೀಪುರ ಬಳಿ ಬಿಎಂ ಕಾವಲ್ ಸರ್ವೆ ನಂ. 32ರಲ್ಲಿ ತಲಾ 2 ಎಕರೆ ಜಮೀನು ಮಂಜೂರು ಮಾಡಲಾಗಿತ್ತು. ಈ ಜಮೀನಿಗೆ ಸದ್ಯದ ವಾರಸುದಾರರಾಗಿರುವ ದಿವಂಗತ ಹನುಮಯ್ಯ ಅವರ ಸೊಸೆ ರಂಗಮ್ಮ ಅವರಿಗೆ ಗೊತ್ತಿಲ್ಲದಂತೆ ಆರ್ಟ್ ಆಫ್ ಲಿವಿಂಗ್ ಆಶ್ರಮದ ಹೆಸರಿಗೆ ವರ್ಗಾಯಿಸಲಾಗಿದೆ ಎಂದು ಆರೋಪಿಸಿದ ಸಮತಾ ಸೈನಿಕ ದಳದ ಕಾರ್ಯರ್ತರು ಆಶ್ರಮದ ಮುಂದೆ ಪ್ರತಿಭಟನೆ ನಡೆಸಿದರು.

'ಅಕ್ರಮವಾಗಿ ಜಮೀನು ವರ್ಗಾವಣೆಯಾಗಿರುವ ಬಗ್ಗೆ ಹಲವಾರು ಬಾರಿ ಆಶ್ರಮದ ಗಮನಕ್ಕೆ ತರಲಾಗಿದೆ. ಜಮೀನು ಹಿಂದಿರುಗಿಸುವ ಬಗ್ಗೆ ಆಶ್ರಮದ ವತಿಯಿಂದ ಈವರೆಗೆ ಯಾವುದೇ ಭರವಸೆ ಬಂದಿಲ್ಲ. ಇನ್ನೂ ಹತ್ತಾರು ಮಂದಿ ನೂರಾರು ಎಕರೆ ಕಳೆದುಕೊಂಡಿರುವ ಮಾಹಿತಿಯಿದೆ. ಸರ್ಕಾರ ಕೂಡಲೇ ಸಮಗ್ರ ತನಿಖೆ ನಡೆಸಬೇಕು' ಎಂದು ಸಮತಾ ಸೈನಿಕ ದಳದ ರಾಜ್ಯಾಧ್ಯಕ್ಷ ವೆಂಕಟಸ್ವಾಮಿ ಆಗ್ರಹಿಸಿದರು.

ವಕೀಲ ಪ್ರವೀಣ್ ಕುಮಾರ್ ಮಾತನಾಡಿ, 'ರೈತರ, ಸರ್ಕಾರದ ಭೂಮಿ ಗುಳುಂ ಆಗಿದೆ. ತನಿಖೆ ನಡೆದರೆ ಎಲ್ಲಾ ಸತ್ಯಾಸತ್ಯತೆ ಹೊರ ಬರಲಿದೆ' ಎಂದು ಆರೋಪಿಸಿದರು. ಸ್ಥಳಕ್ಕೆ ಬಂದ ಬೆಂಗಳೂರು ದಕ್ಷಿಣ ಜಿಲ್ಲೆ ಎ.ಸಿ. ರಘುನಂದನ್, ದಾಖಲಾತಿ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸುವ ಭರವಸೆ ನೀಡಿದರು.

ಒಂದೇ ಕುಟುಂಬದ ಮೂವರು ಸಾಮೂಹಿಕ ಆತ್ಮಹತ್ಯೆ

ಶಿಡ್ಲಘಟ್ಟ: ಅನ್ಯಜಾತಿ ಯುವಕನೊಂದಿಗೆ ಮಗಳು ನಾಪತ್ತೆಯಾದ ಕಾರಣ ಮನನೊಂದ ಹಂಡಿಗನಾಳ ಗ್ರಾಮದ ಒಂದೇ ಕುಟುಂಬದ ಮೂವರು ಸೋಮವಾರ ವಿಷಪೂರಿತ ಮಾತ್ರೆ ಸೇವಿಸಿ ಸಾಮೂಹಿಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕುಟುಂಬದ ಯಜಮಾನ ಶ್ರೀರಾಮಪ್ಪ (69) ಅವರ ಪತ್ನಿ ಸರೋಜ (55) ಹಾಗೂ ಮಗ ಮನೋಜ್ (25) ಆತ್ಮಹತ್ಯೆಗೆ ಶರಣಾಗಿದ್ದು, ಮಂಗಳವಾರ ಈ ವಿಷಯ ಗೊತ್ತಾಗಿದೆ.

ಒಕ್ಕಲಿಗ ಸಮುದಾಯದ ಶ್ರೀರಾಮಪ್ಪ ಮತ್ತು ಸರೋಜ ದಂಪತಿಯ ಪುತ್ರಿ ಅರ್ಚನಾ ಮತ್ತು ಅದೇ ಗ್ರಾಮದ ಪರಿಶಿಷ್ಟ ಜಾತಿಯ ಯುವಕ ನಾರಾಯಣ ಸ್ವಾಮಿ ಹಲವು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಇಬ್ಬರೂ ಈಚೆಗೆ ನಾಪತ್ತೆಯಾಗಿದ್ದರು. ಇದರಿಂದ ಮನನೊಂದ ಕುಟುಂಬ ಸದಸ್ಯರು, 'ತಮ್ಮ ಸಾವಿಗೆ ಅರ್ಚನಾ ಕಾರಣ' ಎಂದು ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮುಖ್ಯ ಆಯುಕ್ತರ ಹೆಸರಿನಲ್ಲಿ ಸಂದೇಶ ರವಾನೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರ ಹೆಸರಿನಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಮೊಬೈಲ್ ಸಂದೇಶ ಕಳುಹಿಸುತ್ತಿದ್ದು, ಈ ಸಂಬಂಧ ಹಲಸೂರು ಗೇಟ್ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'8076618135 ಮೊಬೈಲ್ ಸಂಖ್ಯೆಯಿಂದ ಅನುಮತಿಯಿಲ್ಲದೆ ಡಿ.ಪಿಗೆ ನನ್ನ ಭಾವಚಿತ್ರ ಅಳವಡಿಸಿಕೊಂಡು ಬಿಬಿಎಂಪಿಯ ಸಹೋದ್ಯೋಗಿಗಳಿಗೆ ತಪ್ಪಾಗಿ ಸಂದೇಶ ರವಾನಿಸುತ್ತಿದ್ದಾನೆ. ಆ ವ್ಯಕ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ' ಎಂದು ದೂರಿನಲ್ಲಿ ಆಯುಕ್ತರು ಉಲ್ಲೇಖಿಸಿದ್ದಾರೆ.

'ಆಯುಕ್ತರ ಸಹೋದ್ಯೋಗಿಗೆ ಕಳುಹಿಸಿದ ಸಂದೇಶದ ಸ್ಕ್ರೀನ್‌ಶಾಟ್ ಅನ್ನು ನೀಡಿದ್ದಾರೆ. ದಾಖಲೆ ಆಧರಿಸಿ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

प्रवर्तन निदेशालय
बेंगलुरु आंचलिक कार्यालय
DIRECTORATE OF ENFORCEMENT
BENGALURU ZONAL OFFICE
भारत सरकार
Government of India
3 तल, (बी) ब्लॉक, बी.एम.टी.सी., शांतिनगर, टी.टी.एम.सी., के.एच.मार्ग, शांतिनगर, बंगलौर – 560 027
3rd Floor, B Block, BMTC, Shantinagar – TTMC, K.H.Road, Shantinagar, Bengaluru – 560 027
080-2253 7815/84, 080-2253 7883/ddbgzo4-ed@gov.in

F. No.: ECIR/BGZO/08/2013(AD-RK) **Date: 04.10.2022**

FORM-I
{Sub-Rule(1) of Rule 6}

NOTICE FOR TAKING POSSESSION UNDER SUB-SECTION (4) OF SECTION 8 OF THE PREVENTION OF MONEY-LAUNDERING ACT, 2002 (15 OF 2003)

WHEREAS, the immovable property/ies mentioned below have been provisionally attached under sub-section (1) of section 5 of the Prevention of Money Laundering Act, 2002 (15 of 2003) vide Provisional Attachment Order No. 01/2022 dated 30.03.2022 issued by the Deputy Director of Enforcement, Bangalore Zonal Office.

SCHEDULE

Sl No.	Sale deed No.	Extent of property	Re survey No. 135, in survey No. 5	Name of purchaser in 1999	Name of title holder as per EC generated in the year 2022.	Value of the Property
1	2975/1999 & 2977/1999	2 Acre	8 acres at Survey No. 5, Re Sy. No.135 and Survey No. 74, situated at NS Palya village, Begur Hobli, Bengaluru South Taluk, Bannerghatta Road, Bengaluru 560078	Mr. A. Khaleel	Mr. A. Khaleel	(I) Sale deed Value in 1999 - Rs.14.4 lakhs. (ii) Present Guidance value (Approx) – Rs. 227,16,58,878/- (iii) Present Market Value - Rs. 243,93,60,000/-
2	2987/1999, 1989/1999,	2 Acre		Mr. H.V. Abudul Wahab	Mehrun Bee, Shafiulla, A. Khaleel, Sirajunissa, Mumtazunissa, Naseemunnissa	
3	2979/1999 & 2981/1999	2 acre		Mr. Mohamed Yousuf	Mohamed Asadulla & Mrs. Rizwana Begum	
4	2983/1999 & 2985/1999	2 acre		Mr. D. Noorullah	Mr. D. Noorullah	

WHEREAS, the said Provisional Attachment Order was subsequently confirmed by the Adjudicating Authority, constituted under section 6 of the Act, vide Order dated 23.09.2022 in Original Complaint No. 1714/2022 dated 28.04.2022.

WHEREAS, in compliance of the provisions contained under sub-section (4) of section 8 of the Act (15 of 2003), the undersigned has taken possession of the aforesaid properties, which shall be at the disposal of the Directorate of Enforcement until further order and such properties shall be kept intact by all concerned for further proceedings under the Act; and

I, Money Jain (Deputy Director, Directorate of Enforcement, Bangalore Zonal Office, Bangalore) therefore, order that all concerned are hereby prohibited and restrained until further order of the undersigned from transferring or charging the aforesaid property by sale, gift, mortgage, pledge or otherwise in any manner whatsoever and that all persons be and that they are hereby prohibited and restrained from receiving the same by purchase, gift, mortgage, pledge or otherwise in any manner whatsoever.

ISSUED ON THIS 04TH DAY OF OCTOBER, 2022.

BY ORDER
Sd/-
(MONEY JAIN)
DEPUTY DIRECTOR
AUTHORISED OFFICER

ಉದ್ಯೋಗ ವಾರ್ತೆ

3,154 ಅಪ್ರೆಂಟಿಸ್ ಹುದ್ದೆಗಳು

ರೈಲ್ವೆ ಇಲಾಖೆಯ ದಕ್ಷಿಣ ರೈಲ್ವೆಯಲ್ಲಿ 3154 ಅಪ್ರೆಂಟಿಸ್ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ವಿವರ: ಫಿಟ್ಟರ್, ಟರ್ನರ್, ಎಲೆಕ್ಟ್ರಿಷಿಯನ್, ಮೆಕಾನಿಕ್, ಪ್ಲಂಬರ್, ಪೇಂಟರ್ ಹುದ್ದೆಗಳು.

ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಐಟಿಐ ಪೂರ್ಣಗೊಳಿಸಿರಬೇಕು.

ತರಬೇತಿ ಭತ್ಯೆ: ಕೇಂದ್ರ ಸರ್ಕಾರದ ನಿಯಮಗಳ ಅನ್ವಯ ತರಬೇತಿ ಭತ್ಯೆ ನೀಡಲಾಗುವುದು.

ವಯೋಮಿತಿ: ಕನಿಷ್ಠ 15, ಗರಿಷ್ಠ 24 ವರ್ಷ. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಒಬಿಸಿಗೆ 3 ಹಾಗೂ ಅಂಗವಿಕಲರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ.

ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಒಬಿಸಿ ಅಭ್ಯರ್ಥಿಗಳಿಗೆ ₹100. ಎಸ್‌ಸಿ / ಎಸ್‌ಟಿ / ಅಂಗವಿಕಲ/ ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ.

ಅಧಿಕೃತ ವೆಬ್‌ಸೈಟ್ https://sr.indianrailways.gov.in ಗೆ ಲಾಗಿನ್ ಆಗಿ ಅರ್ಜಿ ಸಲ್ಲಿಸಬಹುದು. ಇತರೆ ವಿಧಾನದಲ್ಲಿ ಬಂದ ಅರ್ಜಿ ತಿರಸ್ಕರಿಸಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನ: 31-10-2022

ಅಧಿಸೂಚನೆ ಲಿಂಕ್: https://bit.ly/3fKbyI8

ವೆಬ್‌ಸೈಟ್: https://sr.indianrailways.gov.in

ಬ್ಯಾಂಕಿಂಗ್ ಪರೀಕ್ಷೆ

ಎಸ್‌ಬಿಐ ಪಿಒ ಹುದ್ದೆಗಳ ನೇಮಕಾತಿ

ಹೀಗಿದೆ ಮುಖ್ಯ ಪರೀಕ್ಷೆ

ಎಸ್‌ಬಿಐ ಪ್ರೊಬೆಷನರಿ ಆಫೀಸರ್ಸ್ ಹುದ್ದೆಗಳ ನೇಮಕಾತಿಗಾಗಿ ನಡೆಯುವ ಮುಖ್ಯಪರೀಕ್ಷೆ ಮತ್ತು ಸಂದರ್ಶನಗಳು ಹಾಗೂ ಹೊಸ ನಿಯಮಗಳ ಕುರಿತ ಮಾಹಿತಿ ಇಲ್ಲಿದೆ.

ಆರ್.ಕೆ. ಬಾಲಚಂದ್ರ

ಬ್ಯಾಂಕಿಂಗ್ ನೇಮಕಾತಿ ಪ್ರಕ್ರಿಯೆಯಲ್ಲಿ ಸಾಮಾನ್ಯವಾಗಿ ಅಧಿಕಾರಿಗಳ ನೇಮಕಾತಿಗೆ ಮೂರು ಹಂತಗಳಿರುತ್ತವೆ. ಎರಡು ಹಂತಗಳಲ್ಲಿ ಲಿಖಿತ ಪರೀಕ್ಷೆಗಳು ಹಾಗೂ ಮೂರನೇ ಹಂತವಾಗಿ ಸಂದರ್ಶನವಿರುತ್ತದೆ. ಕಳೆದ ವಾರ ಭಾರತೀಯ ಸ್ಟೇಟ್ ಬ್ಯಾಂಕ್ 1673 ಪ್ರೊಬೆಷನರಿ ಆಫೀಸರ್ಸ್(ಪಿಒ) ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದ್ದು, ಈ ನೇಮಕಾತಿಯಲ್ಲಿ ಮೂರು ಹಂತದ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ಈ ನೇಮಕಾತಿಗೆ ಸಂಬಂಧಿಸಿದಂತೆ ಕಳೆದ ಸಂಚಿಕೆಯಲ್ಲಿ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಹಾಗೂ ಪೂರ್ವಭಾವಿ ಪರೀಕ್ಷೆಗಳ ವಿವರವನ್ನು ನೀಡಲಾಗಿತ್ತು. ಪರೀಕ್ಷೆ ನಡೆಯುವ ವಿಧಾನ, ಪರೀಕ್ಷೆಯ ವಿಷಯ, ಸಮಯ ಹಾಗೂ ಅಂಕಗಳ ಬಗ್ಗೆಯೂ ವಿವರಿಸಲಾಗಿತ್ತು.

ಈ ಸಂಚಿಕೆಯಲ್ಲಿ ಮುಖ್ಯ ಪರೀಕ್ಷೆಯ ವಿಧಾನ, ವಿಷಯಗಳು, ಅಂಕಗಳು ಹಾಗೂ ಸಮಯದ ಬಗ್ಗೆ ತಿಳಿಯೋಣ. ಜೊತೆಗೆ, ಬದಲಾಗಿರುವ ಪರೀಕ್ಷಾ ನಿಯಮಗಳ ಬಗ್ಗೆಯೂ ಅರಿತುಕೊಳ್ಳೋಣ.

ಮುಖ್ಯ ಪರೀಕ್ಷೆಯ ವಿವರಗಳು

ಈ ಪರೀಕ್ಷೆಯಲ್ಲಿ ನಾಲ್ಕು ಪತ್ರಿಕೆಗಳಿರುತ್ತವೆ. 155 ಪ್ರಶ್ನೆಗಳಿಗೆ 200 ಅಂಕಗಳು ನಿಗದಿಯಾಗಿದ್ದು, 180 ನಿಮಿಷದ ಸಮಯಾವಕಾಶವನ್ನು ನಿಗದಿಪಡಿಸಲಾಗಿರುತ್ತದೆ(ವಿವರಗಳಿಗೆ ಕೋಷ್ಟಕ ನೋಡಿ).

ಇಂಗ್ಲಿಷ್ ಭಾಷೆ ಒಂದನ್ನು ಹೊರತುಪಡಿಸಿ ಮತ್ತೆಲ್ಲಾ ಪ್ರಶ್ನೆಗಳು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಇರುತ್ತದೆ. ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ತಪ್ಪು ಉತ್ತರ ಗುರುತಿಸಿದರೆ, ಆಯಾ ವಿಷಯದ ಪ್ರತಿ ಪ್ರಶ್ನೆಗೆ ನಿಗದಿಪಡಿಸಿದ ಅಂಕದ 0.25 ಅಂಕವನ್ನು ಋಣಾತ್ಮಕ ಮೌಲ್ಯಮಾಪನದ(ನೆಗೆಟಿವ್ ಕರೆಕ್ಷನ್) ನಿಯಮದಂತೆ ಗಳಿಸಿದ ಅಂಕದಿಂದ ಕಳೆಯಲಾಗುತ್ತದೆ.

ಮುಖ್ಯಪರೀಕ್ಷೆ ನಂತರ

ಮುಖ್ಯ ಪರೀಕ್ಷೆ ಮುಗಿಯುತ್ತಿದ್ದಂತೆ, ಇಂಗ್ಲಿಷ್ ಭಾಷೆಗೆ ಸಂಬಂಧಿಸಿದಂತೆ 50 ಅಂಕಗಳಿಗೆ ಡಿಸ್ಕ್ರಿಪ್ಟಿವ್ ಟೆಸ್ಟ್ (Letter Writing & Essay- with two questions) ನಡೆಸಲಾಗುತ್ತದೆ. ಅವಧಿ 30 ನಿಮಿಷಗಳು. ಇದು ಆನ್‌ಲೈನ್ ಪರೀಕ್ಷೆಯಾಗಿದ್ದು, ಅಭ್ಯರ್ಥಿಗಳು ಕಂಪ್ಯೂಟರ್‌ನಲ್ಲಿಯೇ ಉತ್ತರ ಬರೆಯಬೇಕು. ಈ ಎರಡೂ ಪರೀಕ್ಷೆಗಳಲ್ಲಿ ಬ್ಯಾಂಕ್ ನಿಗದಿಪಡಿಸಿದಷ್ಟು ಅಂಕ ಪಡೆದವರು ಮಾತ್ರ ಮೂರನೇ ಹಂತಕ್ಕೆ ಅರ್ಹರಾಗುತ್ತಾರೆ. ಇವುಗಳಿಗೆ ಬೇಕಾಗುವ ಕನಿಷ್ಠ ಅರ್ಹತಾ ಅಂಕಗಳನ್ನು ಬ್ಯಾಂಕ್ ನಿರ್ಧರಿಸುತ್ತದೆ.

ಮೂರನೇ ಹಂತದ ಆಯ್ಕೆ

ಹೊಸ ನಿಯಮದ ಪ್ರಕಾರ ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ನಂತರ, ಮೂರನೇ ಹಂತದಲ್ಲಿ ಸೈಕೋಮ್ಯಾಟ್ರಿಕ್ ಟೆಸ್ಟ್ ಆದ ಮೇಲೆ ಸಂದರ್ಶನ ಹಾಗೂ ಗುಂಪು ಚರ್ಚೆ ಇರುತ್ತದೆ. ಸಂದರ್ಶನಕ್ಕೆ 30 ಅಂಕಗಳು, ಗುಂಪು ಚರ್ಚೆಗೆ 20 ಅಂಕಗಳು. ಸಂದರ್ಶನದ ಸಂದರ್ಭದಲ್ಲಿ 'ಒಬಿಸಿ' ವರ್ಗದ ಅಡಿಯಲ್ಲಿ ಹಂತ -3 ಕ್ಕೆ ಅರ್ಹತೆ ಪಡೆದ ಅಭ್ಯರ್ಥಿಗಳು ಒಬಿಸಿ ಪ್ರಮಾಣಪತ್ರವನ್ನು 'ಕೆನೆರಹಿತ ಪದರ'('Non-Creamy layer') ಷರತ್ತನ್ನು ಒಳಗೊಂಡಿ ರುವುದನ್ನು ಸಲ್ಲಿಸಬೇಕಾಗುತ್ತದೆ. ಒಬಿಸಿ ಎಂದು ನೋಂದಾಯಿಸಿಕೊಂಡಿರುವ ಆದರೆ (Non-Creamy layer)'ಕೆನೆರಹಿತ ಪದರ' ಪ್ರಮಾಣಪತ್ರವನ್ನು ಸಲ್ಲಿಸದಿದ್ದಲ್ಲಿ ಅವರನ್ನು ಸಾಮಾನ್ಯ ವರ್ಗದ ಅಡಿಯಲ್ಲಿ ಸಂದರ್ಶನಕ್ಕೆ ಅವಕಾಶ ನೀಡಲಾಗುವುದಿಲ್ಲ. ಆರ್ಥಿಕವಾಗಿ ಹಿಂದುಳಿದವರ(EWS) ವರ್ಗದ ಅಡಿಯಲ್ಲಿ ಹಂತ -3 ಕ್ಕೆ ಅರ್ಹತೆ ಪಡೆದ ಅಭ್ಯರ್ಥಿಗಳು ಆರ್ಥಿಕ ವರ್ಷದ ಒಟ್ಟು ವಾರ್ಷಿಕ ಆದಾಯದ ಆಧಾರದ ಮೇಲೆ EWS ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ. ಇಡಬ್ಲ್ಯುಎಸ್ ಅಡಿಯಲ್ಲಿ ನೋಂದಾಯಿಸಿಕೊಂಡ ಅಭ್ಯರ್ಥಿಗಳು ಆರ್ಥಿಕ ಸಂಬಂಧಿಸಿದ ಪ್ರಮಾಣಪತ್ರ ಸಲ್ಲಿಸದಿದ್ದಲ್ಲಿ ಅಂತಹವರನ್ನು ಸಾಮಾನ್ಯ ವರ್ಗದ ಅಡಿಯಲ್ಲಿ ಸಂದರ್ಶನಕ್ಕೆ ಅವಕಾಶ ನೀಡಲಾಗುವುದಿಲ್ಲ.

ಪತ್ರಿಕೆ	ವಿಷಯ	ಪ್ರಶ್ನೆಗಳು	ಅಂಕಗಳು	ಅವಧಿ(ನಿ.)
I	ರೀಸನಿಂಗ್ ಮತ್ತು ಕಂಪ್ಯೂಟರ್ ಆಪ್ಟಿಟ್ಯೂಡ್	40	50	50
II	ಡೇಟಾ ಅನಾಲಿಸಿಸ್ ಆ್ಯಂಡ್ ಇಂಟರ್‌ಪ್ರಿಟೇಷನ್	30	50	45
III	ಜನರಲ್/ಎಕಾನಮಿ/ಬ್ಯಾಂಕಿಂಗ್ ಅವೇರ್‌ನೆಸ್	50	60	45
IV	ಇಂಗ್ಲಿಷ್ ಭಾಷೆ	35	40	40

ಆಯ್ಕೆ ಪಟ್ಟಿ

ಅಂತಿಮ ಸುತ್ತಿಗೆ ಆಯ್ಕೆಯಾದ ಅಭ್ಯರ್ಥಿಗಳು ಹಂತ- II ಮತ್ತು ಹಂತ- III ಎರಡರಲ್ಲೂ ಪ್ರತ್ಯೇಕವಾಗಿ ಅರ್ಹತೆ ಪಡೆದಿರಬೇಕು. ಮುಖ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳು (ಹಂತ- 2), ವಸ್ತುನಿಷ್ಠ ಪರೀಕ್ಷೆ ಮತ್ತು ವಿವರಣಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಹಾಗೂ ಹಂತ-3ರಲ್ಲಿ ಪಡೆದ ಅಂಕಗಳಿಗೆ ಸೇರಿಸಲಾಗುತ್ತದೆ. ಅರ್ಹತೆ ಪಟ್ಟಿಗೆ ಪ್ರಾಥಮಿಕ ಪರೀಕ್ಷೆಯಲ್ಲಿ (ಹಂತ -1) ಪಡೆದ ಅಂಕಗಳನ್ನು ಪರಿಗಣಿಸುವುದಿಲ್ಲ.

ಹಂತ-2ರಲ್ಲಿ ಅಭ್ಯರ್ಥಿಗಳು ಪಡೆದಿರುವ ಅಂಕಗಳಲ್ಲಿ (250 ಅಂಕಗಳಲ್ಲಿ) ಅದರ 75 ಅಂಕಗಳು ಮತ್ತು ಅಭ್ಯರ್ಥಿಗಳ ಹಂತ-3ರಲ್ಲಿ ಪಡೆದ ಅಂಕಗಳಲ್ಲಿ (50 ಅಂಕಗಳಲ್ಲಿ) ಅದರ 25 ಅಂಕಗಳನ್ನು ಸೇರಿಸಿ(100ರಲ್ಲಿ) ಪರಿವರ್ತಿತ ಅಂಕಗಳನ್ನು ಒಟ್ಟು ಸೇರಿಸಿ ನಂತರ ಅಂತಿಮ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುತ್ತದೆ. ಹಂತ- 2 ಮತ್ತು ಹಂತ- 3ರಲ್ಲಿ ಉನ್ನತ ಶ್ರೇಣಿಯನ್ನು ಪಡೆದ ಪ್ರತಿ ವರ್ಗದ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು. (ಮುಖ್ಯ ಪರೀಕ್ಷೆ ಮತ್ತು ಗುಂಪು ಚರ್ಚೆ ಹಾಗೂ ಸಂದರ್ಶನದಲ್ಲಿ ಪಡೆದ ಅಂಕಗಳ ಆಧಾರದ ಮೇಲಷ್ಟೇ ಮೆರಿಟ್ ಪಟ್ಟಿ ತಯಾರಿಸಿ, ನೇಮಕಾತಿ ಮಾಡಿಕೊಳ್ಳಲಾಗುತ್ತದೆ.)

ಆಯ್ಕೆಯಾದ ಅಭ್ಯರ್ಥಿಗಳಿಗೆ ಆನ್‌ಲೈನ್ ಮೂಲಕ ಮೂಲ ಬ್ಯಾಂಕಿಂಗ್ ಜ್ಞಾನ ಒದಗಿಸಲಾಗುತ್ತದೆ. ಪ್ರೊಬೆಷನರಿ ಆಫೀಸರ್ ಆಗಿ ನೇಮಕವಾದವರು ಮೊದಲಿಗೆ 2 ವರ್ಷ ಪ್ರೊಬೆಷನರಿ ಪಿರಿಯಡ್‌ನಲ್ಲಿ ವಿವಿಧ ತರಬೇತಿ ನೀಡಲಾಗುತ್ತದೆ. ಬ್ಯಾಂಕ್ ಆಯ್ಕೆಯಾದ ಅಭ್ಯರ್ಥಿಗಳಿಗೆ ನಿರಂತರ ಮೌಲ್ಯಮಾಪನಕ್ಕೆ ಒಳಪಡಿಸಲಾಗುತ್ತದೆ. ಬ್ಯಾಂಕಿನ ಅಸ್ತಿತ್ವದಲ್ಲಿರುವ ನೀತಿ ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ಕಾಲಕಾಲಕ್ಕೆ ಬ್ಯಾಂಕ್ ನಿರ್ಧರಿಸಿದ ಮಾನದಂಡಗಳ ಪ್ರಕಾರ ಮೌಲ್ಯಮಾಪನವನ್ನು ದೃಢೀಕರಿಸಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕ್ ಸೇರುವ ಮೊದಲು, ₹2 ಲಕ್ಷ ಮೌಲ್ಯಕ್ಕೆ ಬಾಂಡ್ ಅನ್ನು ಬ್ಯಾಂಕ್‌ಗೆ ಕನಿಷ್ಠ ಮೂರು ವರ್ಷಗಳ ಅವಧಿಗೆ ನೀಡಬೇಕು. ಅಭ್ಯರ್ಥಿಯು ಮೂರು ವರ್ಷಗಳ ಅವಧಿ ಮುಗಿಯುವ ಮೊದಲು ಬ್ಯಾಂಕ್ ಸೇವೆಗೆ ರಾಜೀನಾಮೆ ನೀಡಿದರೆ ಹಣ ಹಿಂತಿರುಗಿಸಲಾಗುವುದಿಲ್ಲ.

ಪ್ರೊಬೆಷನರಿ ಅಧಿಕಾರಿಯಾಗಿ ಆಯ್ಕೆಯಾದವರಿಗೆ ವೇತನ ಶ್ರೇಣಿ: ₹36,000-₹63,840 ಮಾಸಿಕ(ನಾಲ್ಕು ಅಡ್ವಾನ್ಸ್ ಇನಕ್ರಿಮೆಂಟ್ ಸೇರಿ) ಹಾಗೂ ಇತರೆ ಭತ್ಯೆಗಳು.

ಬದಲಾವಣೆಗಳಿವೆ, ಗಮನಿಸಿ

ಈ ಹಿಂದಿನ ಮುಖ್ಯ ಪರೀಕ್ಷೆಯಲ್ಲಿದ್ದ ಕೆಲವೊಂದು ನಿಯಮಗಳನ್ನು ಬದಲಾವಣೆ ಮಾಡಲಾಗಿದೆ. ಆ ಪ್ರಕಾರ ಈ ಬಾರಿ ಜನರಲ್/ಎಕಾನಮಿ/ ಬ್ಯಾಂಕಿಂಗ್ ಅವೇರ್‌ನೆಸ್ ಪತ್ರಿಕೆಯಲ್ಲಿ ಪ್ರಶ್ನೆಗಳ ಸಂಖ್ಯೆ ಹಾಗೂ ಅಂಕಗಳನ್ನು ಹೆಚ್ಚಿಸಲಾಗಿದೆ. ಹಾಗೆಯೇ ರೀಸನಿಂಗ್ ಮತ್ತು ಡಾಟಾ ಇಂಟ್ರಪೀಟೇಶನ್ ವಿಭಾಗದಲ್ಲಿ ಪ್ರಶ್ನೆಗಳ ಸಂಖ್ಯೆ ಹಾಗೂ ಅಂಕಗಳನ್ನು ಕಡಿಮೆಗೊಳಿಸಲಾಗಿದೆ.

ಈ ಬಾರಿ ಕನ್ನಡದಲ್ಲಿ ಪರೀಕ್ಷೆ ಇಲ್ಲ

ಎರಡು ವಾರಗಳ ಹಿಂದೆ ಕರೆಯಲಾಗಿದ್ದ ಎಸ್ ಬಿ ಐ- ಜೂನಿಯರ್ ಅಸೋಸಿಯೇಟ್ಸ್ ಹುದ್ದೆಗಳಿಗೆ ಎರಡೂ ಹಂತಗಳಲ್ಲಿ ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿದೆ. ಆದರೆ ಈ ಪ್ರೊಬೆಷನರಿ ಅಧಿಕಾರಿ ಹುದ್ದೆಗಳಿಗೆ ನಡೆಯುವ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಬರೆಯಲು ಅವಕಾಶ ನೀಡಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಿ.

ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್

ಯು.ಟಿ. ಆಯಿಶ ಫರ್ಝಾನ

ಯುಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, ಕೆಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3 ಸೇರಿದಂತೆ ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನದ ಮಾಹಿತಿ ಇಲ್ಲಿದೆ.

ನಾಲ್ಕು ವರ್ಷ ಪೂರೈಸಿದ ಆಯುಷ್ಮಾನ್ ಭಾರತ-ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಹಾಗೂ ಒಂದು ವರ್ಷ ಪೂರೈಸಿದ ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್ (ಎನ್‌ಡಿಎಚ್‌ಎಂ) ಯೋಜನೆಗಳ ಸಂಬಂಧ ನಡೆದ 'ಆರೋಗ್ಯ ಮಂಥನ್ 2022' ಕಾರ್ಯಕ್ರಮವನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಮನ್ಸುಖ್ ಮಾಂಡವೀಯ ಇತ್ತೀಚೆಗೆ ಉದ್ಘಾಟಿಸಿದರು,

74ನೇ ಸ್ವಾತಂತ್ರ್ಯ ದಿನದಂದು (2020ರಲ್ಲಿ) ಪ್ರಧಾನಮಂತ್ರಿ ನರೇಂದ್ರ ಮೋದಿಯವರು 'ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್' ಪ್ರಾಯೋಗಿಕ ಯೋಜನೆಯನ್ನು ಪ್ರಕಟಿಸಿದ್ದರು. ಪ್ರಧಾನಿ ಯವರು ಅಂದು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ, 'ಈಗ ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಮಿಷನ್ ಉದ್ಘಾಟಿಸಲಾಗಿದ್ದು, ಇದರ ಅಡಿಯಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಗೂ 'ಡಿಜಿಟಲ್ ರೂಪ'ದ ಆರೋಗ್ಯ ಗುರುತಿನ ಚೀಟಿಯನ್ನು ನೀಡಿ, ವಿಶಿಷ್ಟ ಸಂಖ್ಯೆಯನ್ನು ನೀಡಲಾಗುತ್ತದೆ' ಎಂದು ಹೇಳಿದ್ದರು.

ಏನಿದು ಎನ್‌ಡಿಎಚ್‌ಎಂ?

ಇದೊಂದು ಡಿಜಿಟಲ್ ರೂಪದ ಗುರುತಿನ ಆರೋಗ್ಯ ಚೀಟಿಯಾಗಿದ್ದು, ಇದರಲ್ಲಿ ವ್ಯಕ್ತಿಯೊಬ್ಬರ ಸಮಗ್ರ ಆರೋಗ್ಯ ಮಾಹಿತಿ ಇರುತ್ತದೆ.

ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್, ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (AB-PMJAY) ಅಡಿಯಲ್ಲಿ ಬರುತ್ತದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ವ್ಯಾಪ್ತಿಯಲ್ಲಿರುವ ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರವು ಈ ಯೋಜನೆಯನ್ನು ವಿನ್ಯಾಸಗೊಳಿಸಿ ದೇಶದಾದ್ಯಂತ ಅನುಷ್ಠಾನಗೊಳಿಸುತ್ತಿದೆ.

ಈ ಗುರುತಿನ ಚೀಟಿಯನ್ನು ವ್ಯಕ್ತಿಯ ಆರೋಗ್ಯ ಖಾತೆ ಎಂಬಂತೆ ಬಳಸಲಾಗುತ್ತದೆ. ಬಡವರು ಮತ್ತು ಮಧ್ಯಮ ವರ್ಗದವರ ವೈದ್ಯಕೀಯ ಚಿಕಿತ್ಸೆಯಲ್ಲಿನ ಸಮಸ್ಯೆಗಳನ್ನು ನಿವಾರಿಸುವಲ್ಲಿ ಈ ಯೋಜನೆ ದೊಡ್ಡ ಪಾತ್ರವನ್ನು ವಹಿಸುತ್ತದೆ ಎಂದು ಪ್ರಧಾನಿ ಅಭಿಪ್ರಾಯಪಟ್ಟಿದ್ದಾರೆ.

ಯೋಜನೆಯು ಆರು ಪ್ರಮುಖ ಅಂಶಗಳಾದ ಆರೋಗ್ಯ ಗುರುತಿನ ಚೀಟಿ, ಡಿಜಿ ಡಾಕ್ಟರ್, ಆರೋಗ್ಯ ಸೌಲಭ್ಯ ನೋಂದಣಿ, ವೈಯಕ್ತಿಕ ಆರೋಗ್ಯ ದಾಖಲೆಗಳು, ಇ-ಫಾರ್ಮಸಿ ಮತ್ತು ಟೆಲಿಮೆಡಿಸಿನ್ ಅನ್ನು ಒಳಗೊಂಡಿದೆ. ಇವೆಲ್ಲವನ್ನು ಕೇಂದ್ರ ಸರ್ಕಾರವೇ ನಿರ್ವಹಿಸುತ್ತದೆ.

ಈ ಯೋಜನೆಯಲ್ಲಿನ ಖಾಸಗಿ ಪಾಲುದಾರರಿಗೆ ತಮ್ಮದೇ ಆದ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಗೆ ಪ್ರವೇಶಿಸಲು ಸಮಾನ ಅವಕಾಶವಿದೆ. ಈ ಎಲ್ಲ ಪ್ರಕ್ರಿಯೆಗಳು ಸರ್ಕಾರದ ಸುಪರ್ದಿನಲ್ಲಿ ನಡೆಯುತ್ತವೆ. ಈ ಯೋಜನೆಯ ಅಡಿಯಲ್ಲಿ, ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಆರೋಗ್ಯ ಗುರುತಿನ ಚೀಟಿ ಪಡೆಯುತ್ತಾನೆ. ಆ ಚೀಟಿಯಲ್ಲಿ ರೋಗಿಯ ವೈದ್ಯಕೀಯ ಪರೀಕ್ಷೆಗಳು, ರೋಗದ ವಿಧ, ವೈದ್ಯರು ನೀಡಿದ ಪ್ರಿಸ್ಕ್ರಿಪ್ಷನ್, ಔಷಧಗಳು, ಚಿಕಿತ್ಸೆಗಳು ಮತ್ತು ತೆಗೆದುಕೊಂಡ ರೋಗನಿರ್ಣಯದ ವಿವರಗಳು ಹಾಗೂ ಎಲ್ಲ ರೀತಿಯ ವೈದ್ಯಕೀಯ ದಾಖಲೆಗಳಂತಹ ಮಾಹಿತಿಯನ್ನು ಒಳಗೊಂಡಿರುತ್ತದೆ.

ಆರೋಗ್ಯ ಗುರುತಿನ ಸಂಖ್ಯೆ(ಹೆಲ್ತ್ ಐಡಿ) ಎನ್ನುವುದು 14 ಅಂಕಿಯ ಸಂಖ್ಯೆಯಾಗಿದೆ. ವ್ಯಕ್ತಿಗಳನ್ನು ವಿಶಿಷ್ಟವಾಗಿ ಗುರುತಿಸುವ, ದೃಢೀಕರಿಸುವ ಹಾಗೂ ಆರೋಗ್ಯ ದಾಖಲೆಗಳನ್ನು(ಅವರ ಒಪ್ಪಿಗೆಯೊಂದಿಗೆ) ಸಂಬಂಧಿಸಿದ ವ್ಯವಸ್ಥೆಗಳ ಜೊತೆಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಬಳಸಬಹುದಾಗಿದೆ. ಈ ಗುರುತಿನ ಸಂಖ್ಯೆಯನ್ನು ಆ ವ್ಯಕ್ತಿಯ ಆಧಾರ್ ಅಥವಾ ಮೊಬೈಲ್ ಸಂಖ್ಯೆಯೊಂದಿಗೆ ಲಿಂಕ್ ಮಾಡಬಹುದು. ವೈದ್ಯರು ಮತ್ತು ಆರೋಗ್ಯ ಸೇವಾ ಪೂರೈಕೆದಾರರಿಗೆ ಈ ಐಡಿ ನೀಡಿದರೆ, ಮುಂದೆ ವ್ಯಕ್ತಿಯು ತನ್ನ ಲ್ಯಾಬ್ ವರದಿಗಳು, ವೈದ್ಯರ ಚೀಟಿಗಳು ಮತ್ತು ರೋಗನಿರ್ಣಯ ವರದಿಗಳನ್ನು ಡಿಜಿಟಲ್ ಮೂಲಕವೇ ಪಡೆಯಬಹುದು. ಸಮಾಲೋಚನೆಗಾಗಿ ಆಸ್ಪತ್ರೆಗೆ ಭೇಟಿ ನೀಡಿದಾಗ ವೈದ್ಯರಿಗೆ ರೋಗಿಯನ್ನು ಈ ಮೂಲಕ ಅರ್ಥೈಸಿಕೊಳ್ಳಲು ಸುಲಭವಾಗುತ್ತದೆ.

ಆರೋಗ್ಯ ಗುರುತಿನ ಚೀಟಿ ಉಚಿತವಾಗಿ ನೀಡಲಾಗುತ್ತಿದ್ದು, ಇದು ಆರೋಗ್ಯ ದತ್ತಾಂಶದ ವಿಶ್ಲೇಷಣೆಗೆ ಸಹಾಯ ಮಾಡುತ್ತದೆ. ಮಾತ್ರವಲ್ಲ, ಮುಂದಿನ ದಿನಗಳಲ್ಲಿ ಸರ್ಕಾರಕ್ಕೆ ಆರೋಗ್ಯ ಕಾರ್ಯಕ್ರಮಗಳನ್ನು ಇನ್ನಷ್ಟು ಉತ್ತಮವಾಗಿ ರೂಪಿಸಲು, ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಒತ್ತು ನೀಡಲು ಹಾಗೂ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ನೆರವಾಗುತ್ತದೆ.

EXAM DH ಪ್ರಜಾವಾಣಿ MASTERMIND™

ಮತ್ತಷ್ಟು ಮಾಹಿತಿಗೆ

ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್ ಕುರಿತ ಇನ್ನಷ್ಟು ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ವಿಡಿಯೊ ಸಹಿತ ಸರಳಗನ್ನಡದ ವಿವರಣೆಗಳಿಗಾಗಿ ಪ್ರಜಾವಾಣಿ-ಡೆಕ್ಕನ್‌ಹೆರಾಲ್ಡ್‌ನ 'ಮಾಸ್ಟರ್‌ಮೈಂಡ್'ಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

www.exammastermind.com

ಶ್ರೀ ಗುರು ರೇವಣಸಿದ್ದೇಶ್ವರ ಕುರುಬ ಸಮಾಜ (ರಿ.), ತರೀಕೆರೆ
ಶ್ರೀ ಗುರು ರೇವಣಸಿದ್ದೇಶ್ವರ ಗರಡಿ ಕುಸ್ತಿ ಸಂಘ (ರಿ.), ತರೀಕೆರೆ
ಪುರಸಭೆ, ತರೀಕೆರೆ ಹಾಗೂ
ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಚಿಕ್ಕಮಗಳೂರು
ಇವರ ಆಶ್ರಯದಲ್ಲಿ ಮಲೆನಾಡಿನ ಹೆಬ್ಬಾಗಿಲಿನ ತರೀಕೆರೆಯಲ್ಲಿ

ರಾಜ್ಯಮಟ್ಟದ ದಸರಾ ಬಯಲು ಜಂಗಿಕುಸ್ತಿ ಸ್ಪರ್ಧೆ
ದಿನಾಂಕ: 06, 07, 08 ಅಕ್ಟೋಬರ್ 2022
ಸ್ಥಳ: ಬಯಲು ರಂಗ ಮಂದಿರ, ತರೀಕೆರೆ
ಬಹುಮಾನ: ಬೆಳ್ಳಿ ಗದೆ, ಬಂಗಾರದ ಅಖಾಡ ಬಳೆ ಪದಕಗಳು
ಪ್ರಕಟಣೆ: ಹಾಲವಜ್ರಪ್ಪ, ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷರು

'ಎಸ್‌ಎಸ್‌ಸಿ' ಪರೀಕ್ಷೆಯಲ್ಲಿ ಕನ್ನಡಿಗರು ಹೆಚ್ಚಲಿ

ಇದೇ ಮೊದಲ ಬಾರಿಗೆ ಎಸ್‌ಎಸ್‌ಸಿ 20 ಸಾವಿರ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ. ಕೇಂದ್ರ ಸರ್ಕಾರದ ಹುದ್ದೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರಲು ಕನ್ನಡಿಗರಿಗೊಂದು ಸುವರ್ಣಾವಕಾಶ.

ಶ್ರೀನಿವಾಸ್. ಪಿ ಸಿ

ಸಿಬ್ಬಂದಿ ನೇಮಕಾತಿ ಆಯೋಗ(ಸ್ಟಾಫ್ ಸೆಲೆಕ್ಷನ್ ಕಮಿಷನ್) ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಕೇಂದ್ರ ಸರ್ಕಾರದ ಸಚಿವಾಲಯ ಸೇರಿದಂತೆ, ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಬಹುದು. ಮಾತ್ರವಲ್ಲ, ಉನ್ನತ ಹುದ್ದೆಗಳವರೆಗೂ ತಲುಪಬಹುದು. ಇಂಥದ್ದೊಂದು ಅಪೂರ್ವ ಅವಕಾಶವಿದ್ದರೂ, ಕರ್ನಾಟಕದಿಂದ ಎಸ್‌ಎಸ್‌ಸಿ ಪರೀಕ್ಷೆ ಬರೆಯುವವರ ಸಂಖ್ಯೆ ಶೇ 1ಕ್ಕಿಂತ ಕಡಿಮೆ ಇದೆ !

ಯಾಕೆ ಹೀಗೆ ?

ಇದಕ್ಕೆ ಕಾರಣಗಳು ಹಲವು. ಮೊದಲನೆಯದಾಗಿ ಭಾಷೆಯ ತೊಡಕು(ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶವಿಲ್ಲದ್ದೂ ಸೇರಿದಂತೆ). ಬೇರೆ ರಾಜ್ಯಗಳಲ್ಲಿ ಕಾರ್ಯನಿರ್ವಹಣೆ ಕಷ್ಟ ಎಂಬುದು ಮತ್ತೊಂದು ಕಾರಣ. ಜೊತೆಗೆ, ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆದು ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಯಾಗುತ್ತೇನೆಂದು ವರ್ಷಗಟ್ಟಲೆ ಕಾಯುವುದು. ಎಂಜಿನಿಯರ್, ವೈದ್ಯರೇ ಆಗಬೇಕೆಂದು ಸಂಬಂಧಿಸಿದ ಪದವಿಗಳನ್ನು ಓದಿ ಕೆಲಸವನ್ನು ಅರಸುವುದು.

ನೋಡಿ, ಈ ಹೊಸ ತಲೆಮಾರಿನವರಿಗೆ ಬೇರೆ ಭಾಷೆಗಳನ್ನು ಕಲಿಯುವುದು ಕಷ್ಟವೇನಲ್ಲ. ಅಷ್ಟರಮಟ್ಟಿಗೆ ಅವರಲ್ಲಿ ಬುದ್ಧಿವಂತಿಕೆ, ತಂತ್ರಜ್ಞಾನದ ಜ್ಞಾನ ಮತ್ತು ಚಾತುರ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ, ಭಾಷೆ ತೊಡಕು, ಕಾರ್ಯನಿರ್ವಹಣೆ ಬಗ್ಗೆ ಅಷ್ಟಾಗಿ ಯೋಚಿಸುವ ಅಗತ್ಯವೇ ಇಲ್ಲ.

ಉದ್ಯೋಗದ ಪ್ರಮಾಣ ಎಷ್ಟು?

ಒಮ್ಮೆ ಯೋಚಿಸಿ ನೋಡಿ. ನಮ್ಮಲ್ಲಿ ಪದವಿ ಪಡೆದ ವಿದ್ಯಾರ್ಥಿಗಳಲ್ಲಿ ಎಷ್ಟು ಮಂದಿ ಉದ್ಯೋಗ ಪಡೆದಿದ್ದಾರೆ. ಉದಾಹರಣೆಗೆ; ಎಂಜಿನಿಯರಿಂಗ್ ಪದವಿ ಪಡೆದವರಲ್ಲಿ ಶೇ 25 ರಿಂದ 30 ಮಂದಿಗೆ ಕ್ಯಾಂಪಸ್ ಸೆಲೆಕ್ಷನ್ ಆಗಬಹುದು. ಇನ್ನೂ ಕೆಲವರಿಗೆ ಬೇರೆ ಬೇರೆ ಕಡೆಗಳಲ್ಲಿ ಉದ್ಯೋಗವೂ ಸಿಗಬಹುದು. ಆದರೂ ನಿರುದ್ಯೋಗಿಗಳ ಸಂಖ್ಯೆ ಕಡಿಮೆಯಾಗಿದೆಯೇ? ಇಲ್ಲ ಅಲ್ಲವೇ ? ಈ ಹಿನ್ನೆಲೆಯಲ್ಲಿ ಯೋಚಿಸುವುದಾದರೆ, ಯಾವುದೇ ಪದವಿ ಪ್ರಮಾಣ ಪತ್ರಗಳಿಂದ ಉನ್ನತ ಹುದ್ದೆಗಳು ದೊರೆಯುವುದಿಲ್ಲ. ಆದರೆ, ಎಸ್‌ಎಸ್‌ಸಿ ಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಉತ್ತೀರ್ಣರಾಗುವುದರಿಂದ ಉನ್ನತ ಹುದ್ದೆಗಳು ಲಭಿಸುತ್ತವೆ. ಇದು ಮಕ್ಕಳಿಗೆ ಮತ್ತು ಪೋಷಕರಿಗೆ ಸ್ಪಷ್ಟವಾಗಿ ಮನವರಿಕೆಯಾಗಬೇಕಿದೆ.

ಮತ್ತೊಂದು ವಿಷಯ ತಿಳಿದಿರಲಿ; ಉತ್ತರ ಭಾರತದ ರಾಜ್ಯಗಳಲ್ಲಿ ಪಿಯುಸಿ ಮುಗಿಸಿದ ಮೇಲೆ ಪದವಿ ಓದುತ್ತಿರುವಾಗಲೇ ವಿದ್ಯಾರ್ಥಿಗಳು ಇಂಥ ಹುದ್ದೆಗಳನ್ನು ಪಡೆಯಲು ತರಬೇತಿ ತೆಗೆದುಕೊಳ್ಳುತ್ತಾರೆ. ಪದವಿಗಿಂತ ಹೆಚ್ಚಾಗಿ, ಉದ್ಯೋಗ ನೀಡುವ ವಿಷಯಗಳ ತರಬೇತಿಗೆ ಹೆಚ್ಚು ಮಹತ್ವ ನೀಡುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ಇದಕ್ಕೆ ತದ್ವಿರುದ್ಧ ವಾತಾವರಣವಿದೆ. ಹೀಗಾಗಿ ನಮ್ಮ ವಿದ್ಯಾರ್ಥಿಗಳು ಕೇಂದ್ರ ಸರ್ಕಾರದ ಹುದ್ದೆಗಳಿಗೆ ತರಬೇತಿ ಪಡೆಯುವುದರಲ್ಲಿ ಹಾಗೂ ಉದ್ಯೋಗಗಳಿಸುವುದರಲ್ಲಿ ಹಿಂದೆ ಬೀಳಲು ಇದೂ ಒಂದು ಕಾರಣ..

ಹಾಗಾಗಿಯೇ, ಆದಾಯ ತೆರಿಗೆ ಇಲಾಖೆ, ಸಿ ಬಿ ಐ, ವಿದೇಶಾಂಗ ಇಲಾಖೆ, ಪಾಸ್ ಪೋರ್ಟ್ ಸೇವಾ ಕೇಂದ್ರ, ರಾಷ್ಟ್ರೀಯ ಬ್ಯಾಂಕ್‌ಗಳು, ಕೇಂದ್ರದ ಹಣಕಾಸು ಸಚಿವಾಲಯ ಇಸ್ರೊ ಸೇರಿದಂತೆ ಹತ್ತು ಹಲವು ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಬೇರೆ ರಾಜ್ಯದವರು ಹೆಚ್ಚಿರುತ್ತಾರೆ.

ಇನ್ನು, ಐಎಎಸ್/ ಐಪಿಎಸ್ ಹುದ್ದೆಗಾಗಿಯೇ 5-6 ವರ್ಷಗಳಿಂದ ಅಭ್ಯಾಸ ನಡೆಸುವವರ ಸಂಖ್ಯೆಯೂ ಹೆಚ್ಚಿದೆ. ಇದರಲ್ಲಿ ಈ ಹುದ್ದೆಗಳು ಲಭಿಸದೆ ಹತಾಶರಾದವರು ಅನೇಕರಿದ್ದಾರೆ. ಪ್ರತಿ ವರ್ಷ 10 ಲಕ್ಷ ಮಂದಿ ಯುಪಿಎಸ್‌ಸಿ / ಕೆಪಿಎಸ್‌ಸಿ ಪರೀಕ್ಷೆಬರೆಯುತ್ತಾರೆ. ಆಯ್ಕೆಯಾಗುವವರ ಸಂಖ್ಯೆ ಶೇ 0.01ರಷ್ಟು ಇದೆ. ಈ ಪರಿಸ್ಥಿತಿ ಮುಂದುವರಿದರೆ ಭವಿಷ್ಯದಲ್ಲಿ ಎಲ್ಲ ರೀತಿಯಿಂದಲೂ ಕನ್ನಡದ ಧ್ವನಿ ಕ್ಷೀಣಿಸುವ ಅಪಾಯವಿದೆ.

ಈಗ ಏನು ಮಾಡಬಹುದು ?

- ವಿದ್ಯಾಭ್ಯಾಸ ಮತ್ತು ಉದ್ಯೋಗದ ವಿಚಾರದಲ್ಲಿ ರಾಜ್ಯದ ವಿದ್ಯಾರ್ಥಿಗಳು, ಪೋಷಕರು ತಮಗಿರುವ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕು.
- ಸ್ಪರ್ಧಾತ್ಮಕ ಜಗತ್ತಿನಲ್ಲಿ ಹೊಸ ಸಂಸ್ಕೃತಿ ಮತ್ತು ಪರಂಪರೆಯನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು.
- ಯುಪಿಎಸ್‌ಸಿ ಪರೀಕ್ಷೆಗೆ ಪ್ರಯತ್ನಿಸುತ್ತಿರುವವರು (ಈಗಾಗಲೇ ಹಲವು ಬಾರಿ ಪ್ರಯತ್ನಿಸಿರುವವರು), ಇಲ್ಲಿವರೆಗೂ ಪಡೆದಿರುವ ಜ್ಞಾನವನ್ನೇ ಎಸ್‌ಎಸ್‌ಸಿ / ಬ್ಯಾಂಕ್ ಪರೀಕ್ಷೆ ಬರೆಯಲು ಉಪಯೋಗಿಸಿದರೆ, ಯಶಸ್ವಿಯಾಗುವ ಸಾಧ್ಯತೆ ಹೆಚ್ಚು.
- ಯಾವುದೇ ಪದವಿ ಓದಿರುವವರು, ಬೇರೆ ಉದ್ಯೋಗಗಳನ್ನು ಅರಸುವ ಜೊತೆ ಜೊತೆಗೆ ಇಂಥ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು.

ಒಂದೊಮ್ಮೆ, ನಮ್ಮ ರಾಜ್ಯದಲ್ಲಿರುವ ಎಂಜಿನಿಯರ್ / ಬಿಬಿಎ /ಬಿ.ಎಸ್‌ಸಿ ಪದವಿ ಪಡೆದ ವಿದ್ಯಾರ್ಥಿಗಳು ಈ ವರ್ಷವೇ ಗಂಭೀರ ಅಭ್ಯಾಸದೊಂದಿಗೆ ಎಸ್‌ಎಸ್‌ಸಿ ಪರೀಕ್ಷೆ ಬರೆದರೆ, 20 ಸಾವಿರ ಹುದ್ದೆಗಳಲ್ಲಿ ಕಾಲು ಭಾಗದಷ್ಟು ಹುದ್ದೆಗಳನ್ನು ಕನ್ನಡಿಗರೇ ಪಡೆದುಕೊಳ್ಳಬಹುದು.

ಇಷ್ಟೆಲ್ಲ ತಿಳಿದ ಮೇಲೆ ಅನೇಕರಲ್ಲಿ ಈ ವರ್ಷ ಎಸ್‌ಎಸ್‌ಸಿ ಪರೀಕ್ಷೆ ಬರೆಯುವ ಆಸಕ್ತಿ ಬಂದಿರಬೇಕಲ್ಲವಾ ? ಹಾಗಿದ್ದರೆ, ಇನ್ನೇಕೆ ತಡ. ಈಗಲೇ ಅರ್ಜಿ ಸಲ್ಲಿಸಿ, ಪರೀಕ್ಷೆ ಬರೆಯಲು ಸಿದ್ಧರಾಗಿ. ವಿವರಗಳಿಗಾಗಿ ಬಾಕ್ಸ್‌ನಲ್ಲಿರುವ ಮಾಹಿತಿ ನೋಡಿ.

(ಲೇಖಕರು : ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ, ಇಂಡಿಯಾ ಫಾರ್ ಐಎಎಸ್ ಅಕಾಡೆಮಿ, ಬೆಂಗಳೂರು)
ceo@india4ias.com

ಈ ಸಾಲಿನ ಪರೀಕ್ಷೆ ವಿವರ

ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಎಸ್‌ಎಸ್‌ಸಿ 20 ಸಾವಿರ ಹುದ್ದೆಗಳ ಭರ್ತಿಗೆ ಮುಂದಾಗಿದೆ. ಈಗಾಗಲೇ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಅಕ್ಟೋಬರ್ 8, 2022 ಕೊನೆ ದಿನ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ https://ssc.nic.in/SSCFileServer/PortalManagement/UploadedFiles/notice_CGLE_17092022.pdf ಈ ಜಾಲ ತಾಣಕ್ಕೆ ಭೇಟಿ ನೀಡಿ.

ವಿದ್ಯಾರ್ಹತೆ: ವಿಶ್ವವಿದ್ಯಾಲಯಗಳಿಂದ ಪದವಿ ಪಡೆದಿರುವ ಹಾಗೂ ಅಂತಿಮ ಪದವಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳೆಲ್ಲ ಪರೀಕ್ಷೆ ಬರೆಯಬಹುದು.

ತಯಾರಿ ಹೇಗೆ?: ಇದು ಅಖಿಲ ಭಾರತ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆ. ಆ ಕಾರಣ, ತುಸು ಹೆಚ್ಚಾಗಿ ತರಬೇತಿ ನಡೆಸಬೇಕು. ಜೊತೆಗೆ, ಪುನಾವರ್ತಿತ ಅಭ್ಯಾಸದ ಅವಶ್ಯಕತೆಯೂ ಇದೆ. ಈ ಬಾರಿ ಡಿಸೆಂಬರ್ ತಿಂಗಳಲ್ಲಿ ಪರೀಕ್ಷೆ ನಿಗದಿಯಾಗಬಹುದು. ಸಮಯ ಕಡಿಮೆ ಇದೆ. ಪರೀಕ್ಷಾರ್ಥಿಗಳು ಕನಿಷ್ಠ 60 ದಿನಗಳ ಕಾಲ ಕರಾರುವಕ್ಕಾಗಿ ಸತತ ಅಭ್ಯಾಸ ಮಾಡಬೇಕು.

ತರಬೇತಿ-ಮಾರ್ಗದರ್ಶನ

- ಅಭ್ಯರ್ಥಿಗಳು ಕಡಿಮೆ ಅವಧಿಯಲ್ಲಿ ಹೆಚ್ಚು ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು.
- ಬಹುತೇಕ ಪ್ರಶ್ನೆಗಳಿಗೆ ಉತ್ತರಗಳು ಗೊತ್ತಿರುತ್ತವೆ. ಆದರೆ ವೇಗವಾಗಿ ಹೇಗೆ ಉತ್ತರಿಸಬೇಕು ಎಂಬುದನ್ನು ಕಲಿಯಲು ತರಬೇತಿ ಹಾಗೂ ಸತತ ಅಭ್ಯಾಸದ ಅವಶ್ಯಕತೆ ಇದೆ.
- ಎಸ್‌ಎಸ್‌ಸಿ/ ಬ್ಯಾಂಕಿಂಗ್ ನೇಮಕಾತಿ ಈ ಎರಡು ಪರೀಕ್ಷೆಗಳಿಗೂ ಬಹುತೇಕ ಒಂದೇ ರೀತಿಯ ಅಧ್ಯಯನ ವಿಷಯ ವಸ್ತುಗಳು ಇರುತ್ತವೆ.

ಇನ್ನಷ್ಟು ಪ್ರತಿಭೆಗಳಿಗೆ ಉತ್ತೇಜನ

ಈಗ ಎಸ್‌ಎಸ್‌ಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿರುತ್ತವೆ. ಅಭ್ಯರ್ಥಿಗಳು ಆ ಎರಡು ಭಾಷೆಗಳಲ್ಲೇ ಉತ್ತರಿಸಬೇಕು. ಪ್ರಶ್ನೆಗಳು ಕನ್ನಡದಲ್ಲಿದ್ದು, ಕನ್ನಡದಲ್ಲೇ ಉತ್ತರ ಬರೆಯಲು ಅವಕಾಶವಿದ್ದರೆ, ರಾಜ್ಯದಲ್ಲಿ ಪರೀಕ್ಷೆ ಬರೆಯುವವರ ಸಂಖ್ಯೆಯೂ ಹೆಚ್ಚಾಗುತ್ತದೆ. ವಿಶೇಷವಾಗಿ ಗ್ರಾಮೀಣ ಭಾಗದವರಿಗೆ ಇದರಿಂದ ಸಾಕಷ್ಟು ಅನುಕೂಲವಾಗುತ್ತದೆ. ಸರ್ಕಾರ ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಟ್ಟರೆ ರಾಜ್ಯದ ಇನ್ನಷ್ಟು ಪ್ರತಿಭೆಗಳಿಗೆ ಉತ್ತೇಜನ ನೀಡಿದಂತಾಗುತ್ತದೆ

ಧಾರ್ಮಿಕ ಜನಸಂಖ್ಯೆ ಅಸಮತೋಲನ ಕುರಿತು ಮೋಹನ್ ಭಾಗವತ್ ಆತಂಕ

‘ಹೊಸ ಪ್ರದೇಶಗಳ ಸೃಷ್ಟಿಗೆ ಕಾರಣ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಆರ್‌ಎಸ್‌ಎಸ್ ವಿಜಯದಶಮಿ ಕಾರ್ಯಕ್ರಮದಲ್ಲಿ ಮಹಿಳಾ ಮುಖ್ಯ ಅತಿಥಿ
- ಕಾರ್ಯಕ್ರಮದಲ್ಲಿ ಮಹಿಳಾ ಪರ್ವತಾರೋಹಿ ಸಂತೋಷ್ ಯಾದವ್ ಭಾಗಿ

ಇಂತಹ ಅಸಮತೋಲನದಿಂದ ಒಂದಿಡೀ ಧಾರ್ಮಿಕ ಸಮುದಾಯವನ್ನೇ ನಾಮಾವಶೇಷ ಮಾಡಿರುವ ಉದಾಹರಣೆಗಳು ಸಾಕಷ್ಟಿವೆ

ಮೋಹನ್ ಭಾಗವತ್, ಆರ್‌ಎಸ್‌ಎಸ್ ಮುಖ್ಯಸ್ಥ

ನಾಗಪುರ/ಬೆಂಗಳೂರು: ಧಾರ್ಮಿಕ ಸಮುದಾಯಗಳ ಜನಸಂಖ್ಯೆಯಲ್ಲಿ ಸಮತೋಲನ ಇಲ್ಲದೇ ಇದ್ದರೆ, ಹೊಸ ಭೌಗೋಳಿಕ ಪ್ರದೇಶಗಳು ಸೃಷ್ಟಿಯಾಗುವ ಅಪಾಯವಿದೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಆತಂಕ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಧಾರ್ಮಿಕ ಸಮುದಾಯಗಳ ಜನಸಂಖ್ಯೆಯ ನಡುವಣ ಅಸಮತೋಲನವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಅವರು ಕರೆ ನೀಡಿದ್ದಾರೆ.

ನಾಗಪುರದಲ್ಲಿ ನಡೆದ ಆರ್‌ಎಸ್‌ಎಸ್‌ನ ವಿಜಯದಶಮಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಭಾರತವು 75 ವರ್ಷಗಳ ಹಿಂದೆ ಇದನ್ನು ಅನುಭವಿಸಿದೆ’ ಎಂದು ಹೇಳಿದ್ದಾರೆ.

‘ಜನಸಂಖ್ಯೆಯ ಏರಿಕೆಯ ಜತೆಗೆ ಇಂದು ಇನ್ನೊಂದು ಸಮಸ್ಯೆ ಉದ್ಭವವಾಗಿದೆ. ಈಗ ಧಾರ್ಮಿಕ ಸಮುದಾಯಗಳ ಜನಸಂಖ್ಯೆಯ ಮಧ್ಯೆ ಸಮತೋಲನ ಇರಬೇಕು ಎಂಬುದು ಮಹತ್ವ ಪಡೆದುಕೊಂಡಿದೆ. ಎಲ್ಲಾ ಧಾರ್ಮಿಕ ಸಮುದಾಯಗಳ ಜನಸಂಖ್ಯೆಯ ಮಧ್ಯೆ ಸಮತೋಲನ ಇಲ್ಲದೇ ಇರುವುದರಿಂದ ಹೊಸ ಭೌಗೋಳಿಕ ಪ್ರದೇಶಗಳು ಹುಟ್ಟಿಕೊಳ್ಳುತ್ತವೆ. ಇಂಡೊನೇಷ್ಯಾ, ಸುಡಾನ್ ಮತ್ತು ಸರ್ಬಿಯಾದಲ್ಲಿ ಈ ರೀತಿಯ ಸಮತೋಲನ ಇರಲಿಲ್ಲ. ಆ ಕಾರಣದಿಂದಲೇ ಇಂಡೊನೇಷ್ಯಾದಿಂದ ಪೂರ್ವ ಟೈಮೋರ್, ಸುಡಾನ್‌ನಿಂದ ದಕ್ಷಿಣ ಸುಡಾನ್ ಮತ್ತು ಸರ್ಬಿಯಾದಿಂದ ಕೊಸೊವೊ ಬೇರೆಯಾದವು’ ಎಂದು ಅವರು ಹೇಳಿದ್ದಾರೆ.

ನಾಗಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಸ್ವಯಂಸೇವಕರು ಪಥಸಂಚಲನ ನಡೆಸಿದರು —ಪಿಟಿಐ ಚಿತ್ರ

ಬೇರೆ ಬೇರೆ ಧಾರ್ಮಿಕ ಸಮುದಾಯಗಳ ಫಲವಂತಿಕೆ ಮತ್ತು ಜನನ ದರದಲ್ಲಿ ಅಂತರವಿರಬಾರದು. ಅಂತರವಿದ್ದರೆ ಅದು ಪ್ರತಿಕೂಲವಾಗಿ ಪರಿಣಮಿಸುತ್ತದೆ. ಒತ್ತಾಯ, ಆಮಿಷ ಮತ್ತು ನುಸುಳುವಿಕೆಯ ಪರಿಣಾಮವಾಗಿ ದೇಶದ ಧಾರ್ಮಿಕ ಸಮುದಾಯಗಳ ಜನಸಂಖ್ಯೆ ನಡುವಣ ಅಸಮತೋಲನ ತಪ್ಪುತ್ತದೆ. ಇವೆಲ್ಲವನ್ನೂ ಹತ್ತಿಕ್ಕಬೇಕು. ಇದಕ್ಕಾಗಿ ಧಾರ್ಮಿಕ ಸಮುದಾಯಗಳ ಜನಸಂಖ್ಯೆಯ ನಡುವಣ ಅಸಮತೋಲನವನ್ನು ಹಗುರವಾಗಿ ಪರಿಗಣಿಸಬಾರದು ಎಂದು ಅವರು ಕರೆ ನೀಡಿದ್ದಾರೆ.

ನಾವು ನೋಡಲು ಭಿನ್ನವಾಗಿದ್ದೇವೆ. ನಾವೇ ಬೇರೆ, ನಾವು ಪ್ರತ್ಯೇಕವಾಗಿರಬೇಕು ಎಂಬ ಸುಳ್ಳನ್ನು ಹರಡಲಾಗಿತ್ತು. ಇದರಿಂದಲೇ ಸೋದರರು ಬೇರೆಯಾದರು, ದೇಶ ಒಡೆಯಿತು, ದೇವಾಲಯಗಳು ಧ್ವಂಸವಾದವು. ಇವೆಲ್ಲಾ ಆಗಬಾರದಿತ್ತು. ಹೀಗಾಗಿ ನಾವೆಲ್ಲರೂ ಸೋದರಭಾವದಿಂದ ಇರಬೇಕು ಎಂದು ಅವರು ಕರೆ ನೀಡಿದ್ದಾರೆ.

‘ಸ್ವಯಂರಕ್ಷಣೆ ಅತ್ಯಗತ್ಯ’

‘ಹಿಂದೂಗಳು ಒಂದಾಗುವುದರಿಂದ ದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಿಗೆ ಅಪಾಯ ಎದುರಾಗಿದೆ ಎಂದು ಹುಸಿ ಭಯವನ್ನು ಹುಟ್ಟುಹಾಕಲಾಗುತ್ತಿದೆ. ಆದರೆ ಅಂತಹ ಪರಿಸ್ಥಿತಿ ಇಲ್ಲ. ಈ ಹಿಂದೆ ಈ ರೀತಿ ಆಗಿಲ್ಲ. ಮುಂದೆಯೂ ಆಗುವುದಿಲ್ಲ’ ಎಂದು ಮೋಹನ್ ಭಾಗವತ್ ಹೇಳಿದ್ದಾರೆ.

‘ದೌರ್ಜನ್ಯ ನಡೆಸುವವರು, ದ್ವೇಷ ಹರಡುವವರು ಮತ್ತು ಅನ್ಯಾಯ ಎಸಗುವವರಿಂದ ನಮ್ಮನ್ನು ಮತ್ತು ನಮ್ಮವರನ್ನು ರಕ್ಷಿಸಿಕೊಳ್ಳಬೇಕಾದುದು ನಮ್ಮ ಆದ್ಯ ಕರ್ತವ್ಯ. ಇದು ಯಾರದೋ ವಿರುದ್ಧದ ಹೋರಾಟವಲ್ಲ’ ಎಂದು ಅವರು ಹೇಳಿದ್ದಾರೆ.

ಶಸ್ತ್ರಗಳನ್ನು ಬಳಸುವುದನ್ನೂ ಕಲಿಯಿರಿ: ಗೋಪಾಲ್

ಪ್ರಜಾವಾಣಿ ವಾರ್ತೆ

ಗೋಪಾಲ್ ನಾಗರಕಟ್ಟೆ

ಬೆಳಗಾವಿ: ‘ಹಿಂದೂಗಳು ಶಸ್ತ್ರಗಳನ್ನು ಪೂಜೆ ಮಾಡುವುದು ಮಾತ್ರವಲ್ಲ; ಬಳಸುವುದನ್ನೂ ಕಲಿಯಬೇಕು. ಸೈನಿಕರು, ಪೊಲೀಸರಿಂದ ಮಾತ್ರ ಹಿಂದೂ ಧರ್ಮ ಹಾಗೂ ಹಿಂದೂಗಳ ರಕ್ಷಣೆ ಸಾಧ್ಯವಿಲ್ಲ. ಪರಾಕ್ರಮದಿಂದ ನಮ್ಮ ರಕ್ಷಣೆಗೆ ನಾವೇ ಸನ್ನದ್ಧಗೊಳ್ಳಬೇಕು’ ಎಂದು ವಿಶ್ವ ಹಿಂದೂ ಪರಿಷತ್ ಕೇಂದ್ರೀಯ ಸಹ ಕಾರ್ಯದರ್ಶಿ, ಅಯೋಧ್ಯೆಯ ರಾಮ ಮಂದಿರ ನವನಿರ್ಮಾಣದ ಉಸ್ತುವಾರಿಯಲ್ಲಿ ಒಬ್ಬರಾದ ಗೋಪಾಲ್ ನಾಗರಕಟ್ಟೆ ಹೇಳಿದರು.

ಇಲ್ಲಿನ ಶಾಸ್ತ್ರಿ ನಗರದಲ್ಲಿರುವ ವಿಶ್ವ ಹಿಂದೂ ಪರಿಷತ್ ಕಚೇರಿಯಲ್ಲಿ ಬುಧವಾರ ಆಯುಧ ಪೂಜೆ ಕಾರ್ಯಕ್ರಮದಲ್ಲಿ ಅವರು ಪ್ರಧಾನ ಭಾಷಣ ಮಾಡಿದರು.

‘ಚಾಕು, ಕತ್ತರಿಯಂಥ ಚಿಕ್ಕ ಮನೆಬಳಕೆ ವಸ್ತುಗಳನ್ನು ಪೂಜಿಸುವುದಲ್ಲ. ಹೋರಾಟಕ್ಕೆ, ಹೊಡೆದಾಟಕ್ಕೆ ಬಳಸುವಂಥ ಅಸ್ತ್ರಗಳನ್ನು ಪೂಜಿಸಿ. ಅಸ್ತ್ರಗಳನ್ನು ರಾವಣ, ಸದ್ದಾಂ ಹುಸೇನ್‌ನಂಥವರೂ ಬಳಸಿದ್ದಾರೆ. ನೀವು ಅವರಂತೆ ಆಗದೇ ಶ್ರೀರಾಮ, ಶಿವಾಜಿಯಂತೆ ನ್ಯಾಯಕ್ಕಾಗಿ ಬಳಸಬೇಕು’ ಎಂದು ಹೇಳಿದರು.

‘ಈ ಹಿಂದೆ ಸಾಕಷ್ಟು ಹಿಂದೂ ಕಾರ್ಯಕರ್ತರ ಕೊಲೆಯಾಗಿದೆ. ಈಗ ಪ್ರತ್ಯುತ್ತರ ನೀಡುವ ಕೆಲಸಗಳೂ ನಡೆಯುತ್ತಿವೆ. ಹಿಂದೂಗಳಲ್ಲಿ ಪರಾಕ್ರಮ ಜಾಗೃತವಾಗುತ್ತಿದೆ ಎನ್ನುವುದಕ್ಕೆ ಇದು ಉದಾಹರಣೆ’ ಎಂದರು.

‘ಈ ಮುಂಚೆಯೇ ನಾವು ಪರಾಕ್ರಮ ತೋರಿದ್ದರೆ ಪರಿಸ್ಥಿತಿ ಬೇರೆ ಇರುತ್ತಿತ್ತು. ನೂಪುರ್ ಶರ್ಮಾ ವಿರುದ್ಧ ಪ್ರತಿಭಟನೆಗಳು ನಡೆದಾಗ ಬಜರಂಗ ದಳದ ಯುವಕರು ಸುಮ್ಮನಾಗಿದ್ದು ದುರ್ದೈವ. ಬಿಸಿರಕ್ತ ಇದ್ದವರು ನೂಪುರ್ ಶರ್ಮಾ ಅವರೊಂದಿಗೆ ನಿಂತು ಧ್ವನಿ ಎತ್ತಬೇಕಿತ್ತು. ಹಿಂದೂ ಕಾರ್ಯಕರ್ತರು ಪೊಲೀಸ್ ಪ್ರಕರಣಗಳಿಗೆ ಹೆದರಬಾರದು’ ಎಂದು ಹೇಳಿದರು.

ಪಿಸ್ತೂಲು, ಕತ್ತಿಗೆ ಮುತಾಲಿಕ್ ಪೂಜೆ

ಉಡುಪಿ: ಶ್ರೀರಾಮಸೇನೆ ಪ್ರಾಂತ್ಯ ಅಧ್ಯಕ್ಷರ ಮನೆಯಲ್ಲಿ ನಡೆದ ಆಯುಧ ಪೂಜೆಯಲ್ಲಿ ಪಾಲ್ಗೊಂಡ ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಪಿಸ್ತೂಲು, ಕತ್ತಿಗಳಿಗೆ ಪೂಜೆ ಸಲ್ಲಿಸಿದ್ದಾರೆ.

‘ಹಿಂದುತ್ವ ಹಾಗೂ ದೇಶದ ಉಳಿವಿಗಾಗಿ ದುರ್ಗಾ ಪೂಜೆಯಲ್ಲಿ ಭಾಗವಹಿಸಿದ್ದು, ಎಲ್ಲರೂ ಆಯುಧ ಪೂಜೆ ಮಾಡಬೇಕು. ದೇಶದ ಉಳಿವಿಗೆ ಕ್ಷಾತ್ರ ಗುಣಗಳನ್ನು ಬೆಳೆಸಿಕೊಳ್ಳಬೇಕು’ ಎಂದು ಮುತಾಲಿಕ್ ಕರೆ ನೀಡಿದರು.

ಶ್ರೀರಾಮ ಸೇನೆ ಜಿಲ್ಲಾ ಘಟಕದ ಅಧ್ಯಕ್ಷ ಜಯರಾಮ ಅಂಬೆಕಲ್ಲು ಭಾಗವಹಿಸಿದ್ದರು.

ಉಡುಪಿಯಲ್ಲಿ ಶ್ರೀರಾಮಸೇನೆ ಪ್ರಾಂತ್ಯ ಆಧ್ಯಕ್ಷರ ಮನೆಯಲ್ಲಿ ನಡೆದ ಆಯುಧ ಪೂಜೆಯಲ್ಲಿ ಪಾಲ್ಗೊಂಡ ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಪಿಸ್ತೂಲು, ಕತ್ತಿಗಳಿಗೆ ಪೂಜೆ ಸಲ್ಲಿಸಿದ್ದಾರೆ

‘ಸುಪ್ರೀಂ’ಗೆ ನ್ಯಾಯಮೂರ್ತಿಗಳ ನೇಮಕಕ್ಕೆ ಶಿಫಾರಸು: ಸಿಜೆಐ ಕ್ರಮಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್‌ನಲ್ಲಿ ಖಾಲಿ ಇರುವ ನಾಲ್ಕು ಹುದ್ದೆಗಳ ಭರ್ತಿಗೆ ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಅವರು ಹೆಸರನ್ನು ಶಿಫಾರಸು ಮಾಡಿದ್ದಾರೆ. ಆದರೆ, ಕೊಲಿಜಿಯಂನಲ್ಲಿ ಚರ್ಚೆ ನಡೆಸದೆಯೇ ಹೆಸರುಗಳನ್ನು ಶಿಫಾರಸು ಮಾಡಿರುವುದಕ್ಕೆ ಇಬ್ಬರು ನ್ಯಾಯಮೂರ್ತಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನ್ಯಾಯಮೂರ್ತಿಗಳ ನೇಮಕಕ್ಕೆ ಒಪ್ಪಿಗೆ ನೀಡಲು ಇರುವ ಐವರು ನ್ಯಾಯಮೂರ್ತಿಗಳ ಕೊಲಿಜಿಯಂನಲ್ಲಿ ಇಬ್ಬರು ನ್ಯಾಯಮೂರ್ತಿಗಳು ಲಲಿತ್ ಅವರ ಈ ಕ್ರಮಕ್ಕೆ ಬೇಸರಿಸಿದ್ದಾರೆ. ‘ನ್ಯಾಯಮೂರ್ತಿಗಳ ಹೆಸರನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವ ಮೊದಲು ಕೊಲಿಜಿಯಂ ಸಭೆ ಸೇರಬೇಕು. ಅಲ್ಲಿ ಚರ್ಚೆ ನಡೆಸಿದ ನಂತರವೇ ನ್ಯಾಯಮೂರ್ತಿಗಳ ಹೆಸರನ್ನು ಶಿಫಾರಸು ಮಾಡುವುದು ಸಂಪ್ರದಾಯ. ಆದರೆ, ಈ ಬಾರಿ ಈ ರೀತಿ ಆಗಿಲ್ಲ’ ಎಂದು ಇಬ್ಬರು ನ್ಯಾಯಮೂರ್ತಿಗಳು ಹೇಳಿದ್ದಾರೆ.

ನವರಾತ್ರಿ ರಜೆಗೂ ಮುನ್ನ ಸೆ.30ಕ್ಕೆ ಕೊಲೆಜಿಯಂ ಸಭೆ ನಡೆಬೇಕಿತ್ತು. ಅದೇ ದಿನ ಕೊಲಿಜಿಯಂನ ಸದಸ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ರಾತ್ರಿ 9ರ ವರೆಗೂ ವಿಚಾರಣೆ ನಡೆಸಿದ್ದರಿಂದ ಸಭೆ ನಡೆಯಲಿಲ್ಲ.

ದಸರಾ ರಜೆ ಕಳೆದು ಅ.10ಕ್ಕೆ ನ್ಯಾಯಾಲಯ ಆರಂಭವಾಗಲಿದೆ. ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಅವರು ನ.8ಕ್ಕೆ ನಿವೃತ್ತರಾಗಲಿದ್ದಾರೆ. ಅಂದರೆ ಅ.10ಕ್ಕೆ ಲಲಿತ್ ಅವರು ನಿವೃತ್ತಿ ಹೊಂದಲು 28 ದಿನ ಬಾಕಿ ಇರುತ್ತದೆ. ನಿವೃತ್ತಿಗೆ ಒಂದು ತಿಂಗಳಿಗೂ ಕಡಿಮೆ ಅವಧಿ ಇರುವ ಮುಖ್ಯ ನ್ಯಾಯಮೂರ್ತಿಯು ಕೊಲಿಜಿಯಂನ ಸಭೆ ಕರೆದು ನ್ಯಾಯಮೂರ್ತಿಗಳ ನೇಮಕಕ್ಕೆ ಶಿಫಾರಸು ಮಾಡುವಂತಿಲ್ಲ.

ಸೆ.30ಕ್ಕೆ ಸಭೆ ನಡೆಯದೇ ಇದ್ದ ಕಾರಣ ಕೊಲಿಜಿಯಂನ ಸದಸ್ಯ ನ್ಯಾಯಮೂರ್ತಿಗಳಿಗೆ ಮೂರು ನ್ಯಾಯಮೂರ್ತಿಗಳ ಹಾಗೂ ಒಬ್ಬರು ಹಿರಿಯ ವಕೀಲರ ಹೆಸರನ್ನು ಶಿಫಾರಸು ಮಾಡುವಂತೆ ಕೋರಿ ಪತ್ರ ಕಳುಹಿಸಲಾಗುತ್ತದೆ. ಈ ಕ್ರಮವನ್ನು ಇಬ್ಬರು ನ್ಯಾಯಮೂರ್ತಿಗಳು ವಿರೋಧಿಸಿದ್ದಾರೆ. ಇದಕ್ಕೂ ಮೊದಲು ನಡೆದ ಕೊಲಿಜಿಯಂ ಸಭೆಯಲ್ಲಿ ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿ ದತ್ತ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯನ್ನಾಗಿ ನೇಮಿಸಲು ಒಪ್ಪಿಗೆ ನೀಡಿತ್ತು.

ಗುಂಡು ಹಾರಿಸಿದ ಶಾಸಕ: ವಿಡಿಯೊ ವೈರಲ್

ಪ್ರಜಾವಾಣಿ ವಾರ್ತೆ

ರಾಯಚೂರು: ದೇವದುರ್ಗದ ಶಾಸಕ ಶಿವನಗೌಡ ನಾಯಕ ಅವರು ಸ್ವಗ್ರಾಮ ಅರಕೇರಾದ ತಮ್ಮ ಮನೆಯ ಮುಂದೆ ಗಾಳಿಯಲ್ಲಿ ಗುಂಡು ಹಾರಿಸಿರುವ ವಿಡಿಯೊ ಬುಧವಾರ ವೈರಲ್ ಆಗಿದೆ.

‘ಬಂದೂಕಿನ ಪರವಾನಗಿ ಹೊಂದಿದವರು ವಿನಾಕಾರಣ ಗುಂಡು ಹಾರಿಸಿದರೆ, ಪೊಲೀಸರು ಕಾನೂನು ಕ್ರಮ ಕೈಗೊಳ್ಳುತ್ತಾರೆ. ಸ್ವತಃ ಶಾಸಕರೇ ಕಾನೂನು ಪಾಲಿಸದೆ ಗುಂಡು ಹಾರಿಸಿದ್ದಾರೆ. ಪೊಲೀಸರು ಏಕೆ ಕ್ರಮಕ್ಕೆ ಮುಂದಾಗಿಲ್ಲ’ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಜನರು ಪ್ರಶ್ನಿಸಿದ್ದಾರೆ.

‘ಕಾನೂನು ಪಾಲಿಸುವವರೇ ಅದನ್ನು ಉಲ್ಲಂಘಿಸಿದ್ದಾರೆ. ಯಾರನ್ನು ಹೆದರಿಸಲು ಅವರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿದ್ದಾರೆ? ಈ ವರ್ತನೆಯಿಂದ ಶಾಸಕರ ಮನೆಗೆ ಹೋಗಲು ಮತ್ತು ಸಮಸ್ಯೆಗಳನ್ನು ಹೇಳಿಕೊಳ್ಳಲು ಜನರು ಹೆದರುತ್ತಿದ್ದಾರೆ’ ಎಂದು ದೇವದುರ್ಗದ ಜೆಡಿಎಸ್ ನಾಯಕಿ ಕರೆಮ್ಮ ತಿಳಿಸಿದ್ದಾರೆ.

ದೇವದುರ್ಗ ಶಾಸಕ ಶಿವನಗೌಡ ನಾಯಕ ಅವರು ಗಾಳಿಯಲ್ಲಿ ಗುಂಡು ಹಾರಿಸಿದರು

‘ಬಹುಶಃ 2017ರಲ್ಲಿ ಗುಂಡು ಹಾರಿಸಿದ ವಿಡಿಯೊ ಈಗ ಯಾರೋ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ. ಗ್ರಾಮೀಣ ಸಂಪ್ರದಾಯದಲ್ಲಿ ಇದು ಮೊದಲು ಇತ್ತು. ಈಗ ಗುಂಡು ಹಾರಿಸುವುದು ಬಿಟ್ಟಿದ್ದೇವೆ’ ಎಂದು ಶಿವನಗೌಡ ನಾಯಕ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಂಡರಗಿ ತಾಲ್ಲೂಕಿನ ಡೋಣಿ–ಗದಗ ಮಧ್ಯೆ ಸಂಚಾರ

ರಾಜ್ಯ ಬಸ್ ಟಿಕೆಟ್‌ನಲ್ಲಿ ‘ಜೈ ಮಹಾರಾಷ್ಟ್ರ’!

ಪ್ರಜಾವಾಣಿ ವಾರ್ತೆ

ಗದಗ: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಯಡವಟ್ಟಿನಿಂದಾಗಿ ಡಂಬಳ ಮಾರ್ಗವಾಗಿ ಸಂಚರಿಸುವ ರಾಜ್ಯ ರಸ್ತೆ ಸಾರಿಗೆ ಬಸ್‌ನಲ್ಲಿ ‘ಜೈ ಮಹಾರಾಷ್ಟ್ರ’, ‘ಮಹಾರಾಷ್ಟ್ರ ರಾಜ್ಯ ಪರಿವಾಹನ್’ ಎಂಬ ಲಾಂಛನ ಇರುವ ಟಿಕೆಟ್ ಬುಧವಾರ ಹಂಚಿಕೆಯಾಗಿದೆ. ಇದಕ್ಕೆ ಪ್ರಯಾಣಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುಂಡರಗಿ ತಾಲ್ಲೂಕಿನ ಡೋಣಿ ಗ್ರಾಮದಿಂದ ಗದಗ ನಗರಕ್ಕೆ ಬರುವ ಬಸ್ ಟಿಕೆಟ್ ಮೇಲೆ ವಾ.ಕ.ರ.ಸಾ. ಸಂಸ್ಥೆ ಗದಗ ಘಟಕ ಎಂದು ಮುದ್ರಿಸಲಾಗಿದೆ. ಆದರೆ, ಆ ಟಿಕೆಟ್ ಮಧ್ಯಭಾಗದಲ್ಲಿ ‘ಜೈ ಮಹಾರಾಷ್ಟ್ರ’ ಎಂದು ಮುದ್ರಿಸಲಾಗಿದೆ. ಮಹಾರಾಷ್ಟ್ರ ರಾಜ್ಯ ಸಾರಿಗೆ ಮೊಹರಿನ ಟಿಕೆಟ್ ನೋಡಿದ ಪ್ರಯಾಣಿಕರು ‘ಇದೇನು ಮಹಾರಾಷ್ಟ್ರವೋ, ಕರ್ನಾಟಕವೋ?’ ಎಂದು ಆಕ್ರೋಶ ಹೊರ ಹಾಕಿದ್ದಾರೆ.



ರಾಜ್ಯ ಸಾರಿಗೆ ಸಂಸ್ಥೆ ಬಸ್ ಟಿಕೆಟ್‌ನಲ್ಲಿ ‘ಜೈ ಮಹಾರಾಷ್ಟ್ರ’ ಮೊಹರು

‘ಮಹಾರಾಷ್ಟ್ರ ರಸ್ತೆ ಸಾರಿಗೆ ಸಂಸ್ಥೆಯವರಿಗೆ ಇಟಿಎಂ ರೋಲ್ ಸರಬರಾಜು ಮಾಡುವವರೇ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೂ ಒದಗಿಸುತ್ತಾರೆ. ಆಕಸ್ಮಿಕವಾಗಿ ಮಹಾರಾಷ್ಟ್ರ ರಸ್ತೆ ಸಾರಿಗೆ ಸಂಸ್ಥೆಯ ಎರಡು ಬಾಕ್ಸ್ ಗದಗ ವಿಭಾಗಕ್ಕೆ ಬಂದಿವೆ.ರೋಲ್‌ಗಳನ್ನು ಹಿಂಪಡೆಯುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಕರ್ತವ್ಯ ಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು’ಎಂದು ಗದಗ ವಿಭಾಗೀಯ ನಿಯಂತ್ರಣಾಧಿಕಾರಿ ಜಿ.ಸೀನಯ್ಯ ‘ಪ್ರಜಾವಾಣಿ’ಗೆ ಸ್ಪಷ್ಟನೆ ನೀಡಿದ್ದಾರೆ.

ಸುಭಾಷಿತ

ಜೀವನದಲ್ಲಿ ಭಯಪಡುವಂತಹದ್ದು ಏನೂ ಇಲ್ಲ. ಹೆಚ್ಚು ತಿಳಿದುಕೊಂಡಷ್ಟೂ ಭಯ ಕಡಿಮೆಯಾಗುತ್ತದೆ.

-ಮೇಡಂ ಕ್ಯೂರಿ

ಭೂತಾನ್ ಅಡಿಕೆ ಭಾರತಕ್ಕೆ ನಮ್ಮ ರೈತರ ಹಿತಾಸಕ್ತಿಗೆ ಆದೀತು ಧಕ್ಕೆ

ಅಡಿಕೆ ಬೆಳೆಗಾರರನ್ನು ಕಂಗಾಲು ಮಾಡುವಂಥ ಒಂದಲ್ಲ ಒಂದು ತುಮುಲ ಆಗಾಗ ಏಳುತ್ತಿರುತ್ತದೆ. ಒಂದೆಡೆ ಅಡಿಕೆಗೆ ಹಳದಿ ರೋಗ, ಕೊಳೆರೋಗದಂಥ ಹಳೇ ಕಾಯಿಲೆಗಳ ಸಾಲಿಗೆ ಎಲೆಚುಕ್ಕಿ ರೋಗವೆಂಬ ಹೊಸ ಹಾವಳಿ. ಇನ್ನೊಂದೆಡೆ ಅತಿವೃಷ್ಟಿ, ಅನಾವೃಷ್ಟಿಯಂಥ ಹವಾಗುಣದ ಅಟಾಟೋಪ. ಮತ್ತೊಂದೆಡೆ ನಿರಂತರ ಏರುತ್ತಿರುವ ಕೂಲಿ ವೆಚ್ಚ ಮತ್ತು ಕೂಲಿಯಾಳುಗಳ ಅಭಾವವನ್ನು ನೀಗಬಲ್ಲ ಕೃಷಿ ತಾಂತ್ರಿಕ ಸಲಕರಣೆಗಳ ಅಭಾವ. ಅವೆಲ್ಲವುಗಳೊಂದಿಗೆ ಹೇಗೋ ಏಗುತ್ತಿರುವ ಬೆಳೆಗಾರರ ಎದುರು ಕೇಂದ್ರ ಸರ್ಕಾರವು ಈಗ ಅಡಿಕೆ ಆಮದಿನ ಗುಮ್ಮನನ್ನು ಛೂ ಬಿಟ್ಟಿದೆ. ಪ್ರತಿವರ್ಷ 17 ಸಾವಿರ ಟನ್ ಹಸಿರು ಅಡಿಕೆಯನ್ನು ಭೂತಾನ್‌ದಿಂದ ಆಮದು ಮಾಡಿಕೊಳ್ಳಲು ಅನುಮತಿ ನೀಡಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಧೀನದ ವಿದೇಶಿ ವ್ಯಾಪಾರ ಮಹಾನಿರ್ದೇಶನಾಲಯವು ಸೆಪ್ಟೆಂಬರ್ 28ರಂದು ಆದೇಶ ಹೊರಡಿಸಿದೆ. ಪಶ್ಚಿಮ ಬಂಗಾಳದ ಜೈಗಾಂವ್ ಬಂದರಿನ ಮೂಲಕವೇ ಆಮದು ಮಾಡಬೇಕು ಎಂಬ ಷರತ್ತು ವಿಧಿಸಲಾಗಿದೆ. ಹಿಂದೆಲ್ಲ ಅಡಿಕೆಯನ್ನು ಆಮದು ಮಾಡಿಕೊಳ್ಳಬೇಕಾದರೆ ಅದಕ್ಕೆ ಪ್ರತೀ ಕಿಲೊಗ್ರಾಂಗೆ ಕನಿಷ್ಠ ₹ 251 ಬೆಲೆ ಇಟ್ಟಿರಬೇಕು ಮತ್ತು ವರ್ತಕರು ಸರ್ಕಾರಕ್ಕೆ ಆಮದು ಸುಂಕದ ರೂಪದಲ್ಲಿ ₹ 108 ಕಟ್ಟಬೇಕು ಎಂಬ ಕಟ್ಟುಪಾಡು ಇದ್ದವು. ಈಗಿನ ಧೋರಣೆಯ ಪ್ರಕಾರ ಆಮದು ಅಡಿಕೆಗೆ ಕನಿಷ್ಠ ದರವನ್ನೇ ನಿಗದಿ ಮಾಡಿಲ್ಲವಾದ್ದರಿಂದ ಅತಿ ಕಡಿಮೆ ಬೆಲೆಯಲ್ಲಿ ದಲ್ಲಾಳಿಗಳು ಭೂತಾನ್‌ನ ಅಡಿಕೆಯನ್ನು ಭಾರತದ ಮಾರುಕಟ್ಟೆಗೆ ತಂದು ಸುರಿಯಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಸಹಜವಾಗಿ ನಮ್ಮ ರೈತರ ಅಡಿಕೆ ಬೆಲೆ ಕುಸಿಯುವ ಸಾಧ್ಯತೆ ಇದೆ. ಹಾಗೇನಾದರೂ ಆದರೆ ಅದರ ಹೊಡೆತ ರೈತನಿಗಷ್ಟೇ ಅಲ್ಲ, ಅಡಿಕೆ ಬೆಳೆಯುವ ಪ್ರದೇಶದ ಭೂರಹಿತ ಕಾರ್ಮಿಕರಿಗೂ ಗ್ರಾಮೀಣ ಕುಶಲಕರ್ಮಿಗಳಿಗೂ ಪಟ್ಟಣದ ತರಾವರಿ ಅಂಗಡಿಕಾರರಿಗೂ ಸರಣಿ ರೂಪದಲ್ಲಿ ಬೀಳುತ್ತದೆ. ಹೀಗಿದ್ದರೂ ಕೇಂದ್ರ ಸರ್ಕಾರದ ಧೋರಣೆ ಮಾತ್ರ ಯಾವ ತರ್ಕಕ್ಕೂ ಸಿಗದಂತಾಗಿದೆ. ಈಚೆಗೆ, ರಾಜ್ಯದ ಅಡಿಕೆ ಬೆಳೆಗಾರರ ಸಂಘಟನೆಗಳ ಪದಾಧಿಕಾರಿಗಳು ಮಂಗಳೂರಿನ 'ಕ್ಯಾಂಪ್ಕೊ'ದ ನೇತೃತ್ವದಲ್ಲಿ ದೆಹಲಿಗೆ ಹೋಗಿ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಅವರನ್ನು ಭೇಟಿಯಾಗಿದ್ದರು. ಅಡಿಕೆಯ ಆಮದು ಬೆಲೆಯ ಕನಿಷ್ಠ ಮಿತಿಯು ಏಳು ವರ್ಷಗಳಿಂದ ₹ 251ರಲ್ಲೇ ಸ್ಥಿರವಾಗಿದ್ದು ಅದನ್ನು ಪ್ರತೀ ಕಿಲೊಗ್ರಾಂಗೆ ₹ 360 ಅಥವಾ ಅದಕ್ಕಿಂತ ಹೆಚ್ಚಿಗೆ ಏರಿಸಿದರೆ ಮಾತ್ರ ದೇಶಿ ಮಾರುಕಟ್ಟೆಯಲ್ಲಿ ಬೆಲೆ ಸ್ಥಿರತೆಯನ್ನು ಕಾಯ್ದುಕೊಳ್ಳಲು ಸಾಧ್ಯ ಎಂದು ವಿವರಿಸಿ ಬಂದಿದ್ದರು. ಮ್ಯಾನ್ಮಾರ್ ದೇಶದಿಂದ ಮಣಿಪುರ, ಅಸ್ಸಾಂ, ಪಶ್ಚಿಮ ಬಂಗಾಳಕ್ಕೆ ಮತ್ತು ಬಾಂಗ್ಲಾದೇಶದಿಂದ ಕಳ್ಳಸಾಗಣೆಯ ಮೂಲಕ, ಅಷ್ಟೇ ಅಲ್ಲ, ಅಡಿಕೆಯನ್ನೇ ಬೆಳೆಯದ ದುಬೈ ಮೂಲಕವೂ ಮುಂಬೈ ಬಂದರಿಗೆ ಅಡಿಕೆ ಬಂದಿಳಿಯುತ್ತಿರುವ ವಿದ್ಯಮಾನಗಳತ್ತ ಸಚಿವರ ಗಮನ ಸೆಳೆದಿದ್ದರು. ಈಗ ನೋಡಿದರೆ, ಆಮದು ಬೆಲೆಯನ್ನು ಹೆಚ್ಚಿಸುವುದು ಹಾಗಿರಲಿ, ಕನಿಷ್ಠ ಮಿತಿಯ ನಿರ್ಬಂಧವನ್ನೂ ಕಳಚಿ ಹಾಕಿ, ಭೂತಾನ್‌ದಿಂದ ಅನಿರ್ದಿಷ್ಟ ಅವಧಿಯವರೆಗೆ ಅಡಿಕೆಯನ್ನು ಆಮದು ಮಾಡಿಕೊಳ್ಳಲು ವ್ಯಾಪಾರಿಗಳಿಗೆ ಕೇಂದ್ರ ಸರ್ಕಾರವು ಅನುವು ಮಾಡಿಕೊಟ್ಟಿದೆ. ಯಾರನ್ನು ಮೆಚ್ಚಿಸಲೋಸುಗವೊ?

ಅಡಿಕೆಯನ್ನು ಬೆಳೆಯುವುದೆಂದರೆ ಒಂದು ರೀತಿಯ ಹುಲಿ ಸವಾರಿ ಎಂತಲೇ ಹೇಳಬೇಕು. ಮೊದಲ ಫಸಲನ್ನು ಪಡೆಯಲು ಏಳೆಂಟು ವರ್ಷಗಳ ದುಡಿಮೆಯನ್ನು ಬೇಡುವ ಇದು ರೋಗರುಜಿನ, ಪ್ರಕೃತಿ ವಿಕೋಪ ಅಥವಾ ಬೆಲೆ ಕುಸಿತದಂಥ ಕಾರಣದಿಂದಾಗಿ ರೈತನನ್ನು ಬೀಳಿಸಿದರೆ ಆತ ಇದರ ಬದಲಿಗೆ ಬೇರೇನನ್ನೂ ಬೆಳೆಯಲಾರ. ಇಳುವರಿಯಾಗಲೀ ಅದರ ವೆಚ್ಚವಾಗಲೀ ಮತ್ತು ಬೆಲೆಯಾಗಲೀ ಯಾವುದೂ ರೈತನ ನಿಯಂತ್ರಣದಲ್ಲಿ ಇಲ್ಲ. ಆದರೂ ಜಗತ್ತಿನಲ್ಲೇ ಅತಿ ಹೆಚ್ಚು ಅಡಿಕೆ ಬೆಳೆಯುವ ರಾಷ್ಟ್ರವೆನಿಸಿದ ನಮ್ಮ ದೇಶದಲ್ಲಿ ಕರ್ನಾಟಕದಲ್ಲೇ ಅತಿ ಹೆಚ್ಚು ಫಸಲು ಬೆಳೆಯುತ್ತಿದೆ. ಸುಮಾರು ಹನ್ನೆರಡು ಜಿಲ್ಲೆಗಳಲ್ಲಿ ಅಡಿಕೆಯನ್ನು ಬೆಳೆಯಲಾಗುತ್ತಿದ್ದು, ನಮ್ಮ ರಾಜ್ಯದ ಅಂದಾಜು ಎರಡು ಕೋಟಿ ಜನರ ಆರ್ಥಿಕತೆ ಇದೊಂದು ಫಸಲಿನ ಮೇಲೆಯೇ ನಿಂತಿದೆ. ಅಷ್ಟೇ ಮುಖ್ಯ ಸಂಗತಿ ಏನೆಂದರೆ, ರಾಜ್ಯದಲ್ಲಿ ಅರ್ಧದಷ್ಟು (ದೇಶದಾದ್ಯಂತ ಐವತ್ತಕ್ಕೂ ಹೆಚ್ಚು) ಸಂಸದರು ಅಡಿಕೆ ಬೆಳೆಯುವ ಕ್ಷೇತ್ರಗಳ ವ್ಯಾಪ್ತಿಗೆ ಒಳಪಡುತ್ತಾರೆ. ಅವರೆಲ್ಲರ ಗಮನಕ್ಕೇ ಬಾರದೆ ಅಡಿಕೆಗೆ ಸಂಬಂಧಿಸಿದ ಆಮದು ನೀತಿಯ ಪರಿಷ್ಕರಣೆ ಆಗುತ್ತಿದೆಯೇ? ಬೆಳೆಗಾರರನ್ನು ಕಡೆಗಣಿಸಿ ಕೇಂದ್ರ ಸರ್ಕಾರವು ಕೆಲವು ವ್ಯಾಪಾರಿಗಳ ಹಿತಾಸಕ್ತಿಗೇ ಆದ್ಯತೆ ನೀಡುತ್ತಿದ್ದರೆ ಈ ಜನಪ್ರತಿನಿಧಿಗಳು ಮೌನವಾಗಿರುವುದು ಸರ್ವಥಾ ಸರಿಯಲ್ಲ. ನಮ್ಮ ರೈತರು ಪದೇ ಪದೇ ಅಡಕತ್ತರಿಯಲ್ಲಿ ಸಿಲುಕುತ್ತಿರುವಾಗ ಬೇರೊಂದು ದೇಶವನ್ನು 'ಆತ್ಮನಿರ್ಭರ' ಮಾಡಲು ಹೊರಟಿರುವ ಸರ್ಕಾರದ ನೀತಿಯೂ ಸಮರ್ಥನೀಯವಲ್ಲ.

ಭೂತಾನ್‌ದಿಂದ ಹಸಿರು ಅಡಿಕೆ ಬರಲಿ, ಕೆಂಪಡಿಕೆ ಬರಲಿ, ನಮ್ಮ ಬೆಳೆಗಾರರಿಗೆ ಅದು ಕೆಂಪು ನಿಶಾನೆಯಾಗಿಯೇ ಕಾಡುತ್ತದೆ

ದಿನದ ಟ್ವೀಟ್

ದುಬಾರಿ ಯಾಕೆಂದರೆ...

ಕಹಿ ಸತ್ಯವನ್ನು ಎದುರಿಸೋಣ. ಮುಂಬೈನಲ್ಲಿ ಮೂಲಸೌಕರ್ಯ ಕಳಪೆಯಾಗಿರುವ ಕಾರಣದಿಂದ (ಹಿಂದೆ ಇದು ಅತ್ಯುತ್ತಮವಾಗಿತ್ತು) ಮನೆಯ ಬೆಲೆ ದುಬಾರಿಯಾಗಿದೆ. ಮುಂಬೈ ಕಳಪೆ ಮೂಲಸೌಕರ್ಯ ಹೊಂದಿರುವುದು ಯಾಕೆಂದರೆ, ಅಲ್ಲಿನ ರಾಜಕೀಯವು ಶೋಚನೀಯ ಎನ್ನುವಷ್ಟು ಅಧೋಗತಿಗೆ ಇಳಿದಿದೆ, ದಿವಾಳಿಯಾಗಿದೆ, ವಿಭಜನಕಾರಿಯಾಗಿದೆ ಮತ್ತು ದೂರದೃಷ್ಟಿ ರಹಿತವಾಗಿದೆ.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ

ಕಿಡಿನುಡಿ



ರಾಷ್ಟ್ರ ರಾಜಕಾರಣದಲ್ಲಿ ಪರ್ಯಾಯ ರಾಜಕೀಯ ಶಕ್ತಿಯ ಅಗತ್ಯವಿತ್ತು. ಕೆಲ ಪಕ್ಷಗಳ 'ರಾಜಕೀಯ ಏಕಸ್ವಾಮ್ಯತೆ' ದೇಶಕ್ಕೆ ಮಾರಕ. ಇದಕ್ಕೆ ಅಂತ್ಯ ಹಾಡುವ ನಿಟ್ಟಿನಲ್ಲಿ ಹೊಸ ರಾಜಕೀಯ ಶಕ್ತಿ ಬೇಕಿತ್ತು. ಬಿಆರ್‌ಎಸ್ ಒಂದು 'ಪ್ರಬಲ ಪರ್ಯಾಯ' ಎನ್ನುವುದು ನನ್ನ ಭಾವನೆ. ಬಿಆರ್‌ಎಸ್ ಸ್ಥಾಪನೆಯನ್ನು ನಾವು ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತೇವೆ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 6-10-1997

• 'ಮೃಗಾಲಯದಲ್ಲಿ ನೌಕರನ ರಕ್ಷಣೆಗೆ ಗುಂಡಿಟ್ಟು ಹುಲಿಯ ಹತ್ಯೆ'

ಮೈಸೂರು, ಅ. 5– ಹುಲಿಯ ಬಾಯಿಂದ ನೌಕರನೊಬ್ಬನನ್ನು ಪಾರು ಮಾಡುವ ಪ್ರಯತ್ನದಲ್ಲಿ ಇಲ್ಲಿನ ಜಯಚಾಮರಾಜೇಂದ್ರ ಮೃಗಾಲಯದಲ್ಲಿ ಭಾನುವಾರ ಮಧ್ಯಾಹ್ನ ಎರಡು ವರ್ಷದ ಹುಲಿಯೊಂದನ್ನು ಗುಂಡಿಟ್ಟು ಕೊಲ್ಲಲಾಯಿತು.

ಆಕಸ್ಮಿಕ ಘಟನೆಯಲ್ಲಿ ಹುಲಿಯ ಹಿಡಿತಕ್ಕೆ ಸಿಕ್ಕ ಮೃಗಾಲಯದ ನೌಕರ ಊಟಿ ಕೃಷ್ಣ ತೀವ್ರವಾಗಿ ಗಾಯಗೊಂಡಿದ್ದರೂ ಪ್ರಾಣಾಪಾಯದಿಂದ ಪಾರಾಗಿದ್ದಾನೆಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಈತನ ಕಾಲನ್ನು ಹುಲಿ ಗಾಯಗೊಳಿಸಿದೆ.

• ಇನ್ಸಾಟ್– 2ಡಿ ಉಪಗ್ರಹ ಪೂರ್ಣ ಸ್ಥಗಿತ

ಬೆಂಗಳೂರು, ಅ. 5– ವಿದ್ಯುತ್ ಕೋಶದ ತೊಂದರೆಯಿಂದ ನಿನ್ನೆ ರಾತ್ರಿ ಎರಡನೇ ಬಾರಿ ಭೂ ನಿಯಂತ್ರಣ ಕೇಂದ್ರದ ಸಂಪರ್ಕ ಕಳೆದುಕೊಂಡ ಇನ್ಸಾಟ್– 2ಡಿ ಉಪಗ್ರಹದ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ.

ವಿದ್ಯುತ್ತಿನ ವ್ಯತ್ಯಯದಲ್ಲಿ ಉಂಟಾದ ತೊಂದರೆಯಿಂದಾಗಿ ಶಕ್ತಿಯ ಹಂಚಿಕೆಯ ಹಾಗೂ ಮುನ್ನುಗ್ಗುವ ಶಕ್ತಿಯನ್ನು ಕಳೆದುಕೊಂಡು ತಾನು ನಿರ್ವಹಿಸುತ್ತಿದ್ದ ಕಾರ್ಯಗಳನ್ನು ನಿರ್ವಹಿಸಲು ಉಪಗ್ರಹ ಅಸಮರ್ಥವಾಗಿರುವುದರಿಂದ ಅದರ ಸೇವೆಯನ್ನು ಕೈಬಿಡಲಾಗಿದೆ ಎಂದು ಇಸ್ರೊ ಪ್ರಕಟಿಸಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 6-10-1972

• ಹೊಸಕೋಟೆ ಬಳಿ ಮೆಗಾಲಿಥಿಕ್ ಸಂಸ್ಕೃತಿಯ ಅವಶೇಷಗಳ ಪತ್ತೆ

ಬೆಂಗಳೂರು, ಅ. 5– ಹೊಸಕೋಟೆ ಬಳಿಯಿರುವ ಅಟ್ಟೂರು ಎನ್ನುವ ಗ್ರಾಮದ ಹತ್ತಿರ (ಬೆಂಗಳೂರಿನಿಂದ ಇಪ್ಪತ್ತೊಂದು ಮೈಲಿಗಳ ದೂರದಲ್ಲಿದೆ) ಮೆಗಾಲಿಥಿಕ್ ಸಂಸ್ಕೃತಿಗೆ ಸೇರಿದ ಮಡಿಕೆಯ ಚೂರುಗಳು, ಹಳೆಯ ಮೂಳೆಗಳು, ಕಲ್ಲಿನ ಆಯುಧಗಳು ಮತ್ತು ಕಬ್ಬಿಣದ ಗಂಟುಗಳನ್ನು ಪತ್ತೆಹಚ್ಚಲಾಗಿದೆ.

ನೆಲದ ಮೇಲೆ ಎತ್ತರವಾಗಿ ದೊಡ್ಡ ಕಲ್ಲುಗಳಿಂದ ನಿರ್ಮಿಸಿದ ಸಮಾಧಿಗಳು ಮೆಗಾಲಿಥಿಕ್ ಸಂಸ್ಕೃತಿಯ ಸೂಚಕ. ಈ ಬಗೆಯ ಸಂಸ್ಕೃತಿ ಕ್ರಿ.ಪೂ. ಮೂರನೇ ಶತಮಾನದಿಂದ ಕ್ರಿ.ಶ. ಒಂದನೇ ಶತಮಾನದವರೆಗೆ ಇತ್ತೆಂದು ತಜ್ಞರು ಊಹಿಸಿದ್ದಾರೆ.

• ಆರ್ಥಿಕ ಸಹಕಾರ: ಜಪಾನ್ ಪ್ರಧಾನಿ ಜತೆ ಚವಾಣ್ ಮಾತುಕತೆ

ಟೋಕಿಯೋ, ಅ. 5– ಭಾರತಕ್ಕೆ ಜಪಾನ್ ಆರ್ಥಿಕ ನೆರವು ಬಗ್ಗೆ ಪ್ರಧಾನಿ ತನಾಕಾ ಮತ್ತು ಇಲ್ಲಿಗೆ ಭೇಟಿ ನೀಡಿರುವ ಭಾರತದ ಹಣಕಾಸು ಸಚಿವ ವೈ.ಬಿ. ಚವಾಣ್ ಅವರ ನಡುವೆ ಮಾತುಕತೆಯಲ್ಲಿ ಪ್ರಸ್ತಾಪವಾಯಿತು.

ಯೆನ್ ಸಾಲದ ವಿಸ್ತರಣೆಯೂ ಸೇರಿದಂತೆ ಭಾರತದ ಜತೆ ಆರ್ಥಿಕ ಸಹಕಾರ ವೃದ್ಧಿಗೆ ಮಾರ್ಗಗಳನ್ನು ತಮ್ಮ ಸರ್ಕಾರ ಅಧ್ಯಯನ ನಡೆಸುತ್ತಿದೆ ಎಂದು ತನಾಕಾ ಅವರು ಚವಾಣ್ ಅವರಿಗೆ ತಿಳಿಸಿದರು.

ಚವಾಣ್ ಅವರು ಅಂತರರಾಷ್ಟ್ರೀಯ ಆರ್ಥಿಕ ನಿಧಿ ಮತ್ತು ವಿಶ್ವಬ್ಯಾಂಕ್ ವಾರ್ಷಿಕ ಸಭೆ ಮುಗಿಸಿಕೊಂಡು ಹಿಂತಿರುಗುವ ಹಾದಿಯಲ್ಲಿ ಇಲ್ಲಿಗೆ ಆಗಮಿಸಿದರು.

ಹೊಸ ಕ್ರಾಂತಿಯ ಫಲವಾದ ತಂತ್ರಜ್ಞಾನಗಳು ನಮಗೆ ವರವೋ? ಶಾಪವೋ?

ಇದೋ... ನಾಲ್ಕನೇ ಕೈಗಾರಿಕಾ ಕ್ರಾಂತಿ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಮೈಸೂರು ದಸರಾ ಉದ್ಘಾಟಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು 'ಜಗತ್ತು ಬದಲಾವಣೆಯ ಹಾದಿಯಲ್ಲಿದೆ, ನಾಲ್ಕನೇ ಕೈಗಾರಿಕಾ ಕ್ರಾಂತಿಗೆ ಸಾಕ್ಷಿಯಾಗುತ್ತಿದೆ, ಅದರ ಬೆಳಕಿನಲ್ಲಿ ನಾಡಿನ ಸಂಸ್ಕೃತಿ ಮತ್ತಷ್ಟು ವಿಸ್ತಾರಗೊಳ್ಳಬೇಕಿದೆ ಮತ್ತು ನಾವೆಲ್ಲ ಒಟ್ಟಾಗಿ ಸಾಗಬೇಕಿದೆ' ಎಂದಿದ್ದರು. ವರ್ಷದ ಬಜೆಟ್ ಭಾಷಣದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 'ಕೈಗಾರಿಕಾ ಕ್ರಾಂತಿ- ಐಆರ್4' ಕುರಿತು ಪ್ರಸ್ತಾಪ ಮಾಡಿ, ನವೋದ್ಯಮಗಳಿಗೆ ಮುಕ್ತ ಆಹ್ವಾನ ನೀಡಿದ್ದರು. ಅದಕ್ಕೆ ಕಾರಣ, ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಆಗುತ್ತಿರುವ ತೀವ್ರತರದ ಬದಲಾವಣೆಗಳು.

ಉದ್ದೇಶಿತ ಕೆಲಸ ಮುಗಿದ ನಂತರ ದೇಹದಲ್ಲೇ ಕರಗಬಲ್ಲ ಹೃದಯದ ಪೇಸ್ ಮೇಕರ್ ಅನ್ನು ಅಮೆರಿಕದ ಸಂಶೋಧಕರು ಈ ವರ್ಷದ ಮೇ ತಿಂಗಳಿನಲ್ಲಿ ಜಗತ್ತಿಗೆ ಪರಿಚಯಿಸಿದ್ದರು. ದೇಹದ ಉಷ್ಣತೆ, ಆಮ್ಲಜನಕದ ಪ್ರಮಾಣ ಮತ್ತು ಹೃದಯದ ವಿದ್ಯುದೀಯ ಚಟುವಟಿಕೆಯನ್ನು (ಇಸಿಜಿ) ಪತ್ತೆ ಹಚ್ಚುವ ಮೂರು ಸಂವೇದಕಗಳು ಅದರಲ್ಲಿದ್ದವು. ಮೂರೂ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಹೃದಯದ ಬಡಿತವನ್ನು ಅಗತ್ಯಕ್ಕೆ ತಕ್ಕಂತೆ ಹೆಚ್ಚಿಸುವ ಮತ್ತು ಕಡಿಮೆಗೊಳಿಸುವ ಮತ್ತೊಂದು ಸೆನ್ಸರ್ ಕೂಡಾ ಅದರಲ್ಲಿತ್ತು. ಈ ಚಟುವಟಿಕೆಯ ಇಡೀ ಚಿತ್ರಣವನ್ನು ರಿಮೋಟ್ ವಿಧಾನದಲ್ಲಿ ತಮ್ಮ ಮೊಬೈಲ್ ಇಲ್ಲವೆ ಕಂಪ್ಯೂಟರ್ ತೆರೆಯ ಮೇಲೆ ನೋಡಬಲ್ಲ ಸೌಲಭ್ಯ ವೈದ್ಯರಿಗಿತ್ತು.

ಇದಕ್ಕೂ ಆರು ತಿಂಗಳ ಮೊದಲು ವಿಜ್ಞಾನಿಗಳ ತಂಡವೊಂದು ಸ್ವಯಂ ಪುನರುತ್ಪತ್ತಿ ಮಾಡಬಲ್ಲ ಚಿಕ್ಕದೊಂದು ಸಂಸ್ಕರಿತ ಝೆನೊಬಾಟ್ ಒಂದನ್ನು ಸೃಷ್ಟಿಸಿ ಅಚ್ಚರಿ ಮೂಡಿಸಿತ್ತು. ಒಂದು ಮಿಲಿಮೀಟರ್‌ಗಿಂತಲೂ ಕಡಿಮೆ ಉದ್ದವಿದ್ದ ಝೆನೊಬಾಟನ್ನು ಆಫ್ರಿಕಾದ ಪಂಜಗಳಿರುವ ಕಪ್ಪೆಯ ಆಕರ ಕೋಶಗಳಿಂದ (ಸ್ಟೆಮ್ ಸೆಲ್) ತಯಾರಿಸಲಾಗಿತ್ತು. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ಅವುಗಳಲ್ಲಿ ಪುನರುತ್ಪತ್ತಿ ಕ್ರಿಯೆ ಜರುಗುವಂತೆ ಮಾಡುವ ಸವಲತ್ತು ಇತ್ತು. ಕಪ್ಪೆಯ ಅಂಗಾಂಶದ ಈ ಝೆನೊಬಾಟ್‌ಗಳನ್ನು ಪೆಟ್ರಿಡಿಶ್‌ನಲ್ಲಿ ಹಾಕಿದಾಗ, ಅವು ಸಾವಿರಾರು ಚಿಕ್ಕ ಕೋಶಗಳನ್ನು ಬಾಯಿಯಿಂದ ನುಂಗಿ, ಒಂದು ವಾರದ ನಂತರ ಅಷ್ಟೇ ಸಂಖ್ಯೆಯ ಹೊಸ ಕೋಶಗಳನ್ನು ಉತ್ಪತ್ತಿ ಮಾಡಿದ್ದುದು ಕಂಡುಬಂತು.

ಇದನ್ನು ನೋಡಿ ನಿಬ್ಬೆರಗಾದ ವಿಜ್ಞಾನಿಗಳು, ಇದು ಯಶಸ್ವಿಯಾದಲ್ಲಿ, ಜಗತ್ತನ್ನು ಮಾರಿಯಂತೆ ಕಾಡುತ್ತಿರುವ ಮೈಕ್ರೊ ಪ್ಲಾಸ್ಟಿಕ್ ಅನ್ನು ನುಂಗಿ ನೊಣೆಯಲು ಮತ್ತು ಮನುಷ್ಯ- ಪ್ರಾಣಿ ದೇಹದೊಳಗಿನ ಸತ್ತ ಜೀವಕೋಶಗಳನ್ನು ರಿಪ್ಲೇಸ್ ಮಾಡಲು ಈ ತಂತ್ರಜ್ಞಾನವನ್ನು ಮುಕ್ತವಾಗಿ ಬಳಸಬಹುದು ಎಂದರು. ಈ ತಂತ್ರಜ್ಞಾನವು ನಾಲ್ಕನೆಯ ಕೈಗಾರಿಕಾ ಕ್ರಾಂತಿಯ ಆಗಮನದ ಮೊದಲ ಅಲೆ ಎಂಬುದು ಕೆಲವರ ಅಂಬೋಣ. ಇದು ಕ್ಲೌಡ್‌ಕಂಪ್ಯೂಟಿಂಗ್, ಬಿಗ್‌ಡೇಟಾ, ಆಗ್‌ಮೆಂಟೆಡ್ ರಿಯಾಲಿಟಿ, ಸಿಸ್ಟಂ ಇಂಟಿಗ್ರೇಶನ್, ಅಟಾನಮಸ್ ರೊಬೋಟಿಕ್ಸ್, ಸೈಬರ್ ಸೆಕ್ಯುರಿಟಿ, ಸಿಮ್ಯುಲೇಷನ್, ಆ್ಯಡಿಟಿವ್ ಮ್ಯಾನುಫ್ಯಾಕ್ಚರಿಂಗ್ (3D ತಂತ್ರಜ್ಞಾನ) ಮತ್ತು ಇಂಟರ್‌ನೆಟ್ ಆಫ್ ಥಿಂಗ್ಸ್ ಅನ್ನು ಒಳಗೊಂಡಿರುತ್ತದೆ.

ಹೊಸ ಕ್ರಾಂತಿಯ ಫಲವಾಗಿ ಜೈವಿಕ ವಿಜ್ಞಾನ, ಡಿಜಿಟಲ್ ತಂತ್ರಜ್ಞಾನ ಮತ್ತು ಭೌತ ಜಗತ್ತುಗಳ ಗಡಿಗಳು ಕರಗುತ್ತಿವೆ. ಕೃಷಿ, ಉತ್ಪಾದನೆ, ಆಟೊಮೊಬೈಲ್, ಸಗಟು ವ್ಯಾಪಾರ ಹಾಗೂ ಸೇವಾಕ್ಷೇತ್ರಗಳೆಲ್ಲ ಬಹುದೊಡ್ಡ ತಾಂತ್ರಿಕ ಸ್ಥಿತ್ಯಂತರಕ್ಕೆ ತೆರೆದುಕೊಳ್ಳುತ್ತಿವೆ. ವೈಜ್ಞಾನಿಕ ಕಥೆಗಳಲ್ಲಿ ಕಂಡುಬರುತ್ತಿದ್ದ ಉಪಕರಣ, ಪಾತ್ರ, ಸನ್ನಿವೇಶಗಳೆಲ್ಲ ನೈಜರೂಪಕ್ಕಿಳಿದು ನಿಂತಿವೆ. ಹಿಂದಿನ ಶತಮಾನದ ಅಂತ್ಯದಲ್ಲಿ ಆವಿರ್ಭವಿಸಿದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಕ್ರಾಂತಿ, ಈಗ ಡೇಟಾದ (ದತ್ತಾಂಶ) ಬಲದಿಂದ ಪ್ರಚ್ಛನ್ನ ವೇಗ ಗಳಿಸಿಕೊಂಡು ನಾಗಾಲೋಟದಲ್ಲಿ ಓಡುತ್ತಿದೆ. ಹೊಸ ಕ್ರಾಂತಿಯ ಕೇಂದ್ರ ಸ್ಥಾನದಲ್ಲಿರುವ 'ಡೇಟಾ' ನಾವು ಮಾಡುವ ಕೆಲಸಗಳನ್ನು ಬದಲಾಯಿಸುವುದಿಲ್ಲ, ಬದಲಿಗೆ ನಮ್ಮನ್ನೇ ಬದಲಾಯಿಸುತ್ತದೆ, ಅದಕ್ಕೆ ಸಿದ್ಧರಾಗಲೇಬೇಕು.

ಇನ್ನು ಹತ್ತೇ ವರ್ಷಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಗಳು ಮನುಷ್ಯನ ಸ್ವಾಭಾವಿಕ ಬುದ್ಧಿಮತ್ತೆಯನ್ನು ಮೀರಿಸಲಿವೆ ಎನ್ನುವ ಗೂಗಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ರೇ ಕುರ್ಜ್‌ವೆಲ್, ಆ ವೇಳೆಗೆ ನಮ್ಮ ಬುದ್ಧಿವಂತಿಕೆಯನ್ನು ಕೃತಕ ಬುದ್ಧಿಯ ಜೊತೆ ಸಂಯೋಗಗೊಳಿಸಬೇಕಾದ ಅನಿವಾರ್ಯ ಎದುರಾಗುತ್ತದೆ ಎಂದಿದ್ದಾರೆ. ಇದನ್ನೊಪ್ಪದ ದಕ್ಷಿಣ ಆಫ್ರಿಕಾದ ವಿಟ್‌ವಾಟರ್‌ಸ್ಯಾಂಡ್ ವಿಶ್ವವಿದ್ಯಾಲಯದ ತಜ್ಞ ಇಯಾನ್ ಮೊಲ್, ಹಿಂದಿನ ಕೈಗಾರಿಕಾ ಕ್ರಾಂತಿಯಿಂದ ಉದ್ಭವಿಸಿರುವ ಆರ್ಥಿಕ ಅಸಮಾನತೆಯನ್ನು ಸರಿಪಡಿಸುತ್ತೇವೆ ಎಂದು ಕೆಲವು ಜಾಗತಿಕ ಉದ್ಯಮ ಸಂಸ್ಥೆಗಳು ಮಾಡುತ್ತಿರುವ ನಾಟಕದ ಹೆಸರೇ ಐಆರ್4, ಇದು ಹಲವರ ಕೆಲಸ ಕಳೆಯುವುದರಿಂದ ದೊಡ್ಡ ಮಟ್ಟದ ಸಾಮಾಜಿಕ ಕ್ಷೋಭೆ, ಅಸಮಾನತೆಗೆ ಎಡೆಮಾಡಿಕೊಡುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.



ನಾವು ಐಆರ್4 ಅನ್ನು ಮುಕ್ತವಾಗಿ ಸ್ವಾಗತಿಸಿದ್ದೇವೆ. ಕೃತಕ ಬುದ್ಧಿಮತ್ತೆ, ಐಒಟಿ ಮತ್ತು ಬ್ಲಾಕ್‌ಚೈನ್ ತಂತ್ರಜ್ಞಾನಗಳತ್ತ ಕಣ್ಣು ನೆಟ್ಟು ಕೂತಿರುವ ನಾವು, ಬಂಡವಾಳ ಕ್ರೋಡೀಕರಣ, ಕೌಶಲ ಕಲಿಕೆ ಮತ್ತು ನೀತಿ ನಿರೂಪಣೆ ಮಾಡುತ್ತಿದ್ದೇವೆ. ಮುಂಬೈನಲ್ಲಿ 2020ರಲ್ಲೇ ಕೇಂದ್ರ ಕಚೇರಿ ಪ್ರಾರಂಭಗೊಂಡಿದೆ. ಕೇಂದ್ರ ಸರ್ಕಾರದ 'ಸಮರ್ಥ್' ಯೋಜನೆ (SAMARTH- ಸ್ಮಾರ್ಟ್ ಅಡ್ವಾನ್ಸ್ಡ್ ಮ್ಯಾನ್ಯುಫ್ಯಾಕ್ಚರಿಂಗ್ ಆ್ಯಂಡ್ ಟ್ರಾನ್ಸ್‌ಫರ್ಮೇಷನ್ ಹಬ್) ಉತ್ಪಾದಕ, ಮಾರಾಟಗಾರ ಮತ್ತು ಗ್ರಾಹಕ ಮೂವರನ್ನೂ ಒಂದೇ ವೇದಿಕೆಗೆ ತಂದು ಅವರೆಲ್ಲರಿಗೂ ಐಆರ್4ನ ಬಗ್ಗೆ ಖಚಿತ ತಿಳಿವಳಿಕೆ ಮೂಡಿಸುತ್ತಿದೆ.

ತಂತ್ರಜ್ಞಾನ ಬಳಕೆಗೆ ಕರ್ನಾಟಕ ಮತ್ತು ತೆಲಂಗಾಣದೊಂದಿಗೆ ಒಪ್ಪಂದ ಮಾಡಿಕೊಂಡಿರುವ ಕೇಂದ್ರ ಸರ್ಕಾರವು ಮೇಘಾಲಯದಲ್ಲಿ ಈಗಾಗಲೇ ಟಾಸ್ಕ್‌ಫೋರ್ಸ್ ರಚಿಸಿದೆ. ಮಹಾರಾಷ್ಟ್ರ ಮತ್ತು ತಮಿಳು ನಾಡಿನಲ್ಲಿ ಸಮಸ್ಯೆ ಆಧಾರಿತ ಕ್ಷೇತ್ರಗಳ ಕುರಿತ ಕೆಲಸ ಜಾರಿಯಲ್ಲಿದೆ. ಸಂಪನ್ಮೂಲ ಕೊರತೆಯಿಂದ ನರಳುತ್ತಿರುವ ಕೃಷಿ ಕ್ಷೇತ್ರಕ್ಕೆ ನವಚೈತನ್ಯ ನೀಡಲು ಐಆರ್4 ತಂತ್ರಜ್ಞಾನ ಬಳಕೆಯಾಗಲಿದೆ. ನಮ್ಮಲ್ಲಿ ಪ್ರಾರಂಭವಾಗಿರುವ 'ಇಂಟರ್‌ನೆಟ್ ಎಥಿಕಲ್ ಸೆಂಟರ್' (IEC) ಐಆರ್4 ತಂತ್ರಜ್ಞಾನಗಳ ಬಗ್ಗೆ ಏಳುವ ನೈತಿಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಕೇಂದ್ರವಾಗಲಿದೆ.

ನೂರು 'ಸ್ಮಾರ್ಟ್ ಸಿಟಿ'ಗಳಲ್ಲಿ ಐಒಟಿ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಆಧಾರಿತ ಡ್ರೈವರ್‌ಗಳಿಲ್ಲದ ಕಾರು ಓಡಾಟದ ವ್ಯವಸ್ಥೆ ಇರಲಿದೆ. ದೇಶದ ಶೇ 20ರಷ್ಟು ಕಾನೂನು ಸೇವೆಗಳು ಇನ್ನು ಮೂರರಿಂದ ಐದು ವರ್ಷಗಳ ಅವಧಿಯಲ್ಲಿ ಕೃತಕ ಬುದ್ಧಿಮತ್ತೆಯಿಂದಲೇ ನಡೆಯಲಿವೆ. ಇದರಿಂದ ದೊಡ್ಡ ಪ್ರಮಾಣದ ಉದ್ಯೋಗ ನಷ್ಟವಾಗಲಿದೆ ಎಂದಿರುವ ಸಮಾಜವಿಜ್ಞಾನಿಗಳು, ಈ ತರಾತುರಿಯ ತಂತ್ರಜ್ಞಾನ ಒಳ್ಳೆಯದಲ್ಲ, ಈಗಾಗಲೇ ನಿರುದ್ಯೋಗ ಸಮಸ್ಯೆ ದೊಡ್ಡದಾಗಿದೆ, ಉತ್ಪಾದನಾ ವಲಯದಲ್ಲಿ ಕೆಲಸಗಳಿಲ್ಲ, ಸೇವಾಕ್ಷೇತ್ರ ಗಟ್ಟಿಮುಟ್ಟಾಗಿದೆ ಎಂಬ ಕಾರಣ ನೀಡಿ ಹೊಸ ತಂತ್ರಜ್ಞಾನವನ್ನು ಕಣ್ಣುಮುಚ್ಚಿಕೊಂಡು ಸ್ವಾಗತಿಸುವುದರಲ್ಲಿ ಅರ್ಥವಿಲ್ಲ ಎಂದು ಕಿಡಿಕಾರಿದ್ದಾರೆ. ಐಆರ್4ರ ಕೆಲಸಗಳಿಗೆ ನಿರಂತರತೆ ಇರುವುದಿಲ್ಲ ಎಂದಿದ್ದಾರೆ.

ಗುತ್ತಿಗೆ ಇಲ್ಲವೆ ತಾತ್ಕಾಲಿಕ ಉದ್ಯೋಗಗಳ ಪ್ರಮಾಣ ಈಗಾಗಲೇ ಜಾಸ್ತಿಯಾಗಿದ್ದು ಕಾಯಂ ಉದ್ಯೋಗಗಳಿಗೆ ಶಾಶ್ವತವಾಗಿ ತೆರೆ ಬೀಳಲಿದೆ. ರೈಲು ಪ್ರಯಾಣಿಕರ ಟಿಕೆಟ್ ಮಾರಾಟ ಮತ್ತು ಹಳಿಗಳ ಉಸ್ತುವಾರಿಯು ಯಂತ್ರಗಳ ಸಾರಥ್ಯದಲ್ಲಿ ನಡೆಯುತ್ತಿದೆ. ನಮ್ಮ ರೈಲ್ವೆಯ ಬಹುಪಾಲು ಕೆಲಸಗಾರರು ಇದನ್ನು ಬಹಿರಂಗವಾಗಿ ವಿರೋಧಿಸಿದ್ದಾರೆ.

ಒಮ್ಮೆ ತಂತ್ರಜ್ಞಾನ ಪರಿಪಕ್ವವಾದಂತೆ ಅಲ್ಲಿಯೂ ಕೆಲಸಗಳು ಕಡಿಮೆಯಾಗುತ್ತವೆ. ಇದನ್ನು ಒಪ್ಪದ ಐಆರ್4ರ ಪ್ರತಿಪಾದಕರು ಮೂರನೆಯ ಔದ್ಯೋಗಿಕ ಕ್ರಾಂತಿಯ ಸಮಯದಲ್ಲಿ ಉತ್ಪಾದನಾ ಕ್ಷೇತ್ರಕ್ಕೆ ಯಂತ್ರಗಳು ಕಾಲಿಟ್ಟಾಗ ಭಾರಿ ಉದ್ಯೋಗ ನಷ್ಟವೇನೋ ಆಯಿತು, ಆದರೆ ಸೇವಾಕ್ಷೇತ್ರ ಜೀವತಳೆದು ಅಲ್ಲೆಲ್ಲ ಉತ್ಪಾದನಾ ಕ್ಷೇತ್ರಕ್ಕಿಂತ ಹೆಚ್ಚಿನ ಕೆಲಸಗಳು ಸೃಷ್ಟಿಯಾಗಲಿಲ್ಲವೆ, ಹಾಗೆಯೇ ಇಲ್ಲೂ ಹೊಸ ಪರಿಸ್ಥಿತಿ ಮತ್ತು ಬೇಡಿಕೆ ಆಧಾರಿತ ಉದ್ಯೋಗಗಳು ಸೃಷ್ಟಿಯಾಗಬಹುದು ಎನ್ನುತ್ತಾರೆ. ಇದನ್ನು ನಂಬುವುದು ಹೇಗೆ?

ಲೇಖಕ: ಪ್ರಾಚಾರ್ಯ, ವಿದ್ಯಾ ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜು, ಬೆಂಗಳೂರು

ಚುರುಮುರಿ



ಖರ್ಗೆ ಗೆಲ್ಗೆ

• ಮಣ್ಣೆ ರಾಜು

'ಬಳ್ಳಾರಿ ಯಾತ್ರೆ ಮಾಡಿ ರಾಜ್ಯದಲ್ಲಿ ಅಧಿಕಾರ ಹಿಡಿದ ಕಾಂಗ್ರೆಸ್, ಈಗ ಭಾರತ್ ಜೋಡೊ ಯಾತ್ರೆ ಮಾಡಿ ದೇಶದ ಆಡಳಿತ ಪಡೆಯಬಹುದಾ?' ಸುಮಿ ಕೇಳಿದಳು.

'ರಾಹುಲ್ ಗಾಂಧಿ ಬಂದು ಹೋಗುವ ಕಡೆ ಕಮಲ ಅರಳುತ್ತದೆ ಅಂತ ಬಿಜೆಪಿಯವರು ಕಾಲೆಳೆಯುತ್ತಿದ್ದಾರೆ' ಅಂದ ಶಂಕ್ರಿ.

'ಯಾತ್ರೆಯಿಂದ ಕಾಂಗ್ರೆಸ್ಸಿನ ಎಲೆಕ್ಷನ್ ಮೈಲೇಜ್ ಜಾಸ್ತಿಯಾಗುತ್ತಿದೆ ಎಂಬ ಭಯವಂತೆ ಬಿಜೆಪಿಯವರಿಗೆ'.

'ಬಿಜೆಪಿಯವರು ಜಾಸ್ತಿ ಕಿರಿಕ್ ಮಾಡಿದ್ರೆ ಪಾದಯಾತ್ರಿಗಳಿಗೆ ಪೇಸಿಎಂ ಟೀ-ಷರ್ಟ್ ವಿತರಿಸಿಬಿಡ್ತೀವಿ ಅಂತ ಕಾಂಗ್ರೆಸ್‌ನವರು ಹೆದರಿಸಿದ್ದಾರೆ'.

'ಮಳೆಯಲ್ಲೇ ಭಾಷಣ ಮಾಡಿದ ರಾಹುಲ್ ಗಾಂಧಿಗೆ ಶೀತ, ನೆಗಡಿ ಆಗೋದಿಲ್ವಾ?'

'ಇಲ್ಲವಂತೆ. ನಾವು ಮಳೆಯಲ್ಲಿ ನೆನೆದರೆ ಬಿಜೆಪಿಯವರು ಒದ್ದೆಯಾಗುತ್ತಾರೆ, ನಾವು ಬಿಸಿಲಲ್ಲಿ ಬೆಂದರೆ ಅವರು ಬೆವರುತ್ತಾರೆ, ನಮಗೆ ಚಳಿಯಾದರೆ ಅವರಿಗೆ ನಡುಕ ಶುರುವಾಗುತ್ತದೆ ಎಂದು ರಾಹುಲ್‌ಜೀ ಪಾದಯಾತ್ರಿಗಳಿಗೆ ಆರೋಗ್ಯ ಸಲಹೆ ಕೊಟ್ಟಿರಬಹುದು'.

'ಭಾರತ್ ಜೋಡೊಗೂ ಮೊದಲು ನಿಮ್ಮ ಪಕ್ಷದ ನಾಯಕರನ್ನು ಜೋಡಿಸಿ ಅಂತ ಬಿಜೆಪಿ ನಾಯಕರು ಕೆಣಕುತ್ತಿದ್ದಾರೆ'.

'ಆಡಿಕೊಳ್ಳುವವರ ಮುಂದೆ ಜಾರಿ ಬೀಳಬಾರದು, ಕೂಡಿ ಬಾಳಿದರೆ ಸ್ವರ್ಗ ಸುಖ, ಎರಡು ಕೈ ಸೇರಿದರೆ ಚಪ್ಪಾಳೆ, ಕೈ ಕೊಟ್ಟರೆ ತಿಪ್ಪಾಳೆ ಎಂದು ರಾಹುಲ್‌ಜೀ ಕಿವಿಮಾತು ಹೇಳಿದ್ದಾರೆ. ಬಣ ವ್ಯಾಜ್ಯ ಬಗೆಹರಿಸಿ, ಪಕ್ಷವನ್ನು ಅಧಿಕಾರಪೀಠಕ್ಕೆ ಏರಿಸಲು ಮುನಿಸ್ತಾಪದ ಎರಡೂ ಕೈ ಹಿಡಿದು ನಗಾರಿ ಬಾರಿಸಿ ಬಾಂಧವ್ಯದ ಬೆಸುಗೆ ಹಾಕಿದ್ದಾರೆ'.

'ಅಧ್ಯಕ್ಷ ಪದವಿಗಾಗಿ ಮೇಲ್ಮನೆಯ ವಿರೋಧ ಪಕ್ಷದ ನಾಯಕ ಸ್ಥಾನ ತ್ಯಜಿಸಿರುವ ಖರ್ಗೆಗೆ ಪ್ರಧಾನಿ ಪಟ್ಟದ ಯೋಗ ಇದೆಯೇನೋ...'

'ಇರಬಹುದು. ಮತದಾರರು 'ಕೈ' ಹಿಡಿದರೆ, ಪಕ್ಷದ ಸರದಾರರು ಕೈ-ಕೈ ಹಿಡಿದರೆ, ಕಾಂಗ್ರೆಸ್ ದೇವರು ಕಣ್ತೆರೆದರೆ ಮತ್ತೊಬ್ಬ ಕನ್ನಡಿಗನಿಗೆ ಕೆಂಪುಕೋಟೆ ಮೇಲೆ ಬಾವುಟ ಹಾರಿಸುವ ಭಾಗ್ಯ ಬರಬಹುದು... ಖರ್ಗೆ ಗೆಲ್ಗೆ...' ಎಂದ ಶಂಕ್ರಿ.

ಸಂಗತ

ನಳಪಾಕಕ್ಕಿರಲಿ ನಿಂಬೆ, ಕುಂಬಳ

ಹಾಗೂ ಹೀಗೂ ಕೈಗೂಡಿದ ಫಸಲು ಗುಲಗಂಜಿಯಷ್ಟೂ ಪೋಲಾಗದೆ ಸದ್ಬಳಕೆಯಾದರೆ ಮಾತ್ರ ಬೆಳೆಗಾರನ ದುಡಿಮೆಯ ಸಾರ್ಥಕ್ಯ

• ಬಿ.ಎಸ್.ಭಗವಾನ್

ಹಾದಿ-ಬೀದಿಗಳಲ್ಲಿ ಕಾಲಿಗೆ ಸಿಗುವ ನಿಂಬೆ, ಬೂದುಗುಂಬಳ ಹೋಳುಗಳು. ನಿಗಾ ತಪ್ಪಿದರೆ ಕಾಯಿ ಚೂರುಗಳು ಚುಚ್ಚಿಕೊಳ್ಳುವ ಸಾಧ್ಯತೆ. ಇದು ನಿವಾಳಿಕೆಯ ಫಲವೆಂದು ಬೇರೆ ಹೇಳಬೇಕಿಲ್ಲ! ಸಂಭ್ರಮ, ಸಡಗರ ಯಾವುದರ ನಿಮಿತ್ತವೇ ಇರಲಿ ಆಡಂಬರ ಮೆರೆದು ಸಾಂಕೇತಿಕತೆ ಸೊರಗಬಾರದು ಅಲ್ಲವೇ?

ಬೂದುಗುಂಬಳ ಬಹು ಪುಷ್ಟಿದಾಯಕ ಕಾಯಿಪಲ್ಲೆ. ಅದು ನಮ್ಮ ಆಹಾರಕ್ರಮದಲ್ಲಿದ್ದರೆ ಆರೋಗ್ಯದ ದೃಷ್ಟಿಯಿಂದ ಪ್ರಯೋಜನಗಳು ಬಹುಮುಖಿ. ಬೂದುಗುಂಬಳದಿಂದ ಬಗೆ ಬಗೆ ಸಾರು, ಸಾಂಬಾರು ಒಳಗೊಂಡಂತೆ ಸಲಾಡ್, ಕೆಚಪ್, ದಂರೋಟ್ ಸಿದ್ಧಗೊಳ್ಳುತ್ತವೆ. ಅದರ ಹೋಳುಗಳನ್ನು ಬೇಯಿಸಿ ಸೇವಿಸುವುದೇ ಆಹ್ಲಾದಕರ. ಕಡಿಮೆ ಕ್ಯಾಲೊರಿ ಮತ್ತು ಹೆಚ್ಚು ನೀರಿನಾಂಶವುಳ್ಳ ಬೂದುಗುಂಬಳಕಾಯಿ ದೇಹದ ತೂಕ ಇಳಿಸಬಲ್ಲದು.

ಇನ್ನು ನಿಂಬೆಹಣ್ಣು ಯಾವುದೇ ಮೇಲೋಗರದ ತಯಾರಿಕೆಗೆ ಅನಿವಾರ್ಯ. ನಿಂಬೆ, ಬೂದುಗುಂಬಳ ಒಂದೊಂದರಿಂದಲೂ ಪಾನಕ ಸಿದ್ಧಪಡಿಸಬಹುದು ಎನ್ನುವುದು ಸರ್ವವೇದ್ಯ ಸಂಗತಿ. ನಿಂಬೆಹಣ್ಣು ಸಾಮಾನ್ಯವಾಗಿ ಕಾಡುವ ನಾನಾ ವ್ಯಾಧಿಗಳಿಗೆ ಮನೆಮದ್ದು. ಅದು ವ್ರಣ, ರಕ್ತಸ್ರಾವ, ಕೀಲೂತಗಳ ನಿವಾರಕ. ಅಮೂಲ್ಯವಾದ ಬೂದುಗುಂಬಳ, ನಿಂಬೆ ಜರ್ಜರಿತವಾಗಿ ಬೀದಿಯಲ್ಲಿ ಬಿದ್ದಿರುವುದನ್ನು ಕಂಡಾಗ ಇವುಗಳ ಮಹತ್ವದ ಬಗ್ಗೆ ಮೆಲುಕು ಹಾಕುವ ಮನಸ್ಸಾಯಿತು.

ಪ್ರೀತಿ ಮತ್ತು ಭಕ್ತಿಯಿಂದ ಯಾರೇ ಒಂದು ಎಲೆ, ಒಂದು ಹೂವು, ಒಂದು ಹಣ್ಣು ಅಥವಾ ಹನಿ ನೀರು ನೀಡಿದರೂ ಸಂತೋಷದಿಂದ ಸ್ವೀಕರಿಸುತ್ತೇನೆಂದು ಶ್ರೀ ಕೃಷ್ಣನೇ ಭಗವದ್ಗೀತೆಯಲ್ಲಿ ಹೇಳುತ್ತಾನೆ. ಆರಾಧನೆಯ ಪ್ರಧಾನ ಭಾಗ ಹೃದಯವೇ ವಿನಾ ಅದ್ದೂರಿತನ ಅಲ್ಲ ಎನ್ನುವುದು ಆತನ ಪಾಠ. ಮತ್ತೂ ಗಮನಾರ್ಹವೆಂದರೆ, 'ನಾನು ಹೇಳಬೇಕಾದ್ದನ್ನೆಲ್ಲ ಹೇಳಿದ್ದೇನೆ. ನೀನು ಯುಕ್ತಾಯುಕ್ತ ವಿವೇಚಿಸಿ ಕೈಗೊಳ್ಳುವ ತೀರ್ಮಾನವೇ ಆಖೈರು' ಎಂಬ ಅವನ ನುಡಿ. ಯಾವುದೇ ಧರ್ಮವು ಭವ್ಯತೆ, ದೊಡ್ಡಸ್ತಿಕೆಯನ್ನು ಮಾನ್ಯ ಮಾಡುವುದಿಲ್ಲ. ಅಪೌಷ್ಟಿಕತೆಯಿರಲಿ, ಅದೆಷ್ಟೋ ಮಂದಿಗೆ ದಿನಕ್ಕೆ ಒಂದೇ ಹೊತ್ತು ಮಾತ್ರ ಆಹಾರ ಲಭಿಸುತ್ತಿದೆ.

ಸುಮಾರು ನಲವತ್ತು ವರ್ಷಗಳ ಹಿಂದಿನ ಮಾತು. ಆಗ ತೆಂಗಿನಕಾಯಿ ಲಗ್ಷುರಿ. ಚಿಲ್ಲರೆ ಅಂಗಡಿಗಳಲ್ಲಿ ಕಾಯಿ ಬದಲು ಕಾಯಿ ಚೂರು ಮಾರಾಟ. ಅಂಗಡಿಯವ ಕಲಾತ್ಮಕವಾಗಿ ತೆಂಗಿನಕಾಯಿ ಭೇದಿಸಿ ತಿರುಳನ್ನು ಅಂದವಾಗಿ ಸಮ ಸಮ ಚೂರುಗಳನ್ನಾಗಿಸಿ ನೀರಿನಲ್ಲಿ ಮುಳುಗಿಸಿಡುತ್ತಿದ್ದ. ನಿಂಬೆ, ಕುಂಬಳ, ತೆಂಗಿನಕಾಯಿ ಅಡುಗೆಗೆ ವಿನಿಯೋಗವಾಗಲಿ. ಆ ಮೂಲಕ ಹಣ್ಣು, ಕಾಯಿ ಹಸಿದವರ ಉದರ ಸೇರಲಿ. ತ್ಯಾಜ್ಯದ ರಾಶಿಯೂ ಕಡಿಮೆಯಾಗಿ ಅಷ್ಟರಮಟ್ಟಿಗೆ 'ಶೂನ್ಯ ತ್ಯಾಜ್ಯ' ಗುರಿಯತ್ತ ಒಂದು ಪುಟ್ಟ ಹೆಜ್ಜೆಯೂ ಆದೀತು.

ಪರಂಪರೆಯಲ್ಲಿ ಸಾಗಿ ಬಂದ ಎಲ್ಲ ನಂಬಿಕೆಗಳು, ನಡಾವಳಿಗಳು ಹುಸಿಯೆಂಬ ನಿರ್ಣಯ ಸರಿಯಲ್ಲ. ಯಾವುದು ಸರಿ, ಯಾವುದು ಅಲ್ಲ ಎಂದು ವಿವೇಚಿಸುವುದು ಪ್ರಬುದ್ಧತೆ. ಮೌಢ್ಯಗಳಿಂದ ಮುಕ್ತಗೊಳ್ಳುವ ಹಾದಿ ಸುಗಮವಾಗಲು ಆಚಾರ, ವಿಚಾರಗಳನ್ನು ಜೊತೆ ಜೊತೆಗೇ ಕರೆದೊಯ್ಯುವುದು ಪೂರಕವೆ.

ಅಮೆರಿಕದ ಖ್ಯಾತ ಹಾಸ್ಯಪಟು ಮತ್ತು ಕಿರುತೆರೆ, ಸಿನಿಮಾ ನಿರ್ದೇಶಕರಾಗಿದ್ದ ಗ್ರೌಚೊ ಮಾರ್ಕ್ಸ್ ಅವರನ್ನು ಸಂದರ್ಶನವೊಂದರಲ್ಲಿ 'ನಿಮ್ಮ ದಾರಿಯಲ್ಲಿ ಬೆಕ್ಕು ಅಡ್ಡ ಬಂದರೆ ಏನು ಮಾಡುವಿರಿ' ಎಂದು ಕೇಳಲಾಯಿತಂತೆ. ಅದಕ್ಕವರು 'ಅದು ಎಲ್ಲಿಗೋ ಹೊರಟಿದೆ ಎಂದು ಭಾವಿಸುತ್ತೇನೆ' ಎಂದರಂತೆ! ಕಾಲ ಎಲ್ಲದರ ಪರಿಷ್ಕರಣೆ ಬಯಸುತ್ತದೆ.

ಕೃಷಿಭೂಮಿ ಕಡಿಮೆಯಾಗುತ್ತಿದೆ. ಜನಸಂಖ್ಯೆ ಏರುತ್ತಿದೆ. ಆಹಾರ ಪದಾರ್ಥಗಳ ಅಭಾವ ಜಾಗತಿಕ ಸಮಸ್ಯೆಯೇ ಆಗಿದೆ. ಹೀಗಿರುವಾಗ, ಹಿಂದಿನಿಂದ ಬಂದ ಆಚರಣೆಗಳನ್ನು ಕೈಬಿಡಲಾದೀತೆ ಎನ್ನುವುದು ಒಣ ತರ್ಕ.

'ಕಲ್ಲು ನಾಗರಕ್ಕೆ ಹಾಲು ಬೇಡ, ಮಕ್ಕಳಿಗೆ ಹಾಲು ನೀಡಿ' ಎಂಬ ಅಭಿಯಾನಕ್ಕೆ ಕೆಲ ವರ್ಷಗಳಿಂದ ಚಾಲನೆ ದೊರೆತಿರುವುದು ಶ್ಲಾಘನೀಯ. ಯಂತ್ರ, ವಾಹನ, ಪರಿಕರಗಳಿಗೆ ಪೂಜೆಯೆಂದರೆ ಅವನ್ನು ಪರಿಸರಸ್ನೇಹಿಯಾಗಿರುವಂತೆ ನಿರ್ವಹಿಸಲು ಸಂಕಲ್ಪಿಸುವುದು.

ಎಲೆಯು ಸಸ್ಯದ ಆಹಾರ ಕಾರ್ಖಾನೆ. ಎಲೆಗಳನ್ನು ಕಿತ್ತರೆ ಫಲ ಬರುವುದು ಹೇಗೆ ತಾನೆ ಸಾಧ್ಯ? ತೋರಣ ಕೇವಲ ಸಾಂಕೇತಿಕವಾಗಿರಬೇಕು. ಇಲ್ಲವಾದರೆ ಅಪಾರ ಪ್ರಮಾಣದಲ್ಲಿ ಬಾಳೆಲೆ, ಮಾವಿನೆಲೆ ಕೀಳಲ್ಪಟ್ಟರೆ ಅಷ್ಟರಮಟ್ಟಿಗೆ ಬೆಳೆಯುವ ಹಂತದಲ್ಲೇ ಗಿಡ, ಮರ ಸೊರಗುತ್ತವೆ. ಇಳುವರಿಯೂ ಕ್ಷೀಣಿಸಿ ತ್ಯಾಜ್ಯಪರ್ವತದ ಎತ್ತರವೂ ಏರುತ್ತದೆ. ಭೂಮಿ ಹದಗೊಳಿಸಿ ಬೀಜ ಬಿತ್ತಿ, ಗೊಬ್ಬರ ಹಾಕಿ ಅನಾವೃಷ್ಟಿ, ಅತಿವೃಷ್ಟಿ ವೈಪರೀತ್ಯಗಳ ತೂಗುಗತ್ತಿಯನ್ನು ಎದುರಿಸುತ್ತಾರೆ ಶ್ರಮಜೀವಿಗಳಾದ ರೈತರು. ಹಾಗೂ ಹೀಗೂ ಕೈಗೂಡಿದ ಫಸಲು ಗುಲಗಂಜಿಯಷ್ಟೂ ಪೋಲಾಗದೆ ಸದ್ಬಳಕೆಯಾದರೆ ಮಾತ್ರ ಬೆಳೆಗಾರನ ದುಡಿಮೆಯ ಸಾರ್ಥಕ್ಯ.

ಬೂದುಗುಂಬಳವು ದಂರೋಟ್, ನಿಂಬೆಯು ಆಯಾಸ ಅಡಗಿಸುವ ಷರಬತ್ತು, ವ್ಯಂಜನವಾಗಿ ಊಟದ ಮೇಜಿಗೆ ಬರಬೇಕೆ ವಿನಾ ವ್ಯರ್ಥವಾಗ ಬಾರದು. ನಾವು ವೈಭವೀಕರಿಸಬೇಕಾದ್ದು ಆಚರಣೆಗಳ ಹಿಂದಿನ ಅರ್ಥ, ಅರುಹುಗಳನ್ನು.

ವಾಚಕರ ವಾಣಿ

ಪಿಎಂ– ಕೇರ್ಸ್: ಸಲ್ಲದ ಗೊಂದಲ

ಪಿಎಂ– ಕೇರ್ಸ್ ನಿಧಿಯು ಆರಂಭದಿಂದಲೂ ಗೊಂದಲದ ಗೂಡಾಗಿದೆ. ದೇಣಿಗೆ ನೀಡಿದವರ ವಿವರ ಬಹಿರಂಗಪಡಿಸದೇ ಇರುವುದರಿಂದ ಯಾರು ಎಷ್ಟು ದೇಣಿಗೆ ನೀಡಿದ್ದಾರೆ ಹಾಗೂ ಅವರ ಹಣದ ಮೂಲ ಏನು ಎಂಬುದನ್ನು ಮರೆಮಾಚಿದಂತಾಗುತ್ತದೆ. ಟ್ರಸ್ಟಿಗಳು ಹಾಗೂ ಸಲಹೆಗಾರರಾಗಿ ನೇಮಕಗೊಂಡವರು ಗಣ್ಯರು ಎಂದಮಾತ್ರಕ್ಕೆ ಈ ನಿಧಿಗೆ ವಿಶ್ವಾಸಾರ್ಹತೆ ಬರುವುದಿಲ್ಲ. ಈ ನಿಧಿಯ ಕುರಿತು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಮಾಹಿತಿ ನೀಡಲು ಮತ್ತು ಮಹಾಲೇಖಪಾಲರಿಂದ ಲೆಕ್ಕಪರಿಶೋಧನೆ ಮಾಡಿಸಲು ಸರ್ಕಾರ ನಿರಾಕರಿಸಿರುವುದು ನಿಧಿಯ ಕುರಿತು ಸಾರ್ವಜನಿಕ ವಲಯದಲ್ಲಿ ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ಸಾರ್ವಜನಿಕರೇ ನೀಡಿದ ಹಣದ ವಿವರವನ್ನು ಯಾವುದಕ್ಕೆ ಎಷ್ಟು ಖರ್ಚಾಗಿದೆ ಎಂದು ಕೇಳುವುದು ಮಾಹಿತಿ ಹಕ್ಕಿನ ವ್ಯಾಪ್ತಿಯ ಒಳಗೆ ಬರುತ್ತದೆ. ಇದನ್ನು ಸ್ಥಾಪಿಸಿರುವುದು ಖಾಸಗಿ ವ್ಯಕ್ತಿಗಳು ಅಲ್ಲ. ಪ್ರಧಾನಿಯವರೇ ಇದರ ಅಧ್ಯಕ್ಷರು. ಇದಕ್ಕೆ ಹಣ ನೀಡಿರುವುದು ಸಾರ್ವಜನಿಕರು. ಆದ್ದರಿಂದ ಈ ಕುರಿತು ಜನರಿಗೆ ಉತ್ತರದಾಯಿಯಾಗಿರುವುದು ಸರ್ಕಾರದ ಬಾಧ್ಯತೆ ಆಗಿರುತ್ತದೆ. ಈ ನಿಧಿಯ ಬಗ್ಗೆ ಎದ್ದಿರುವ ಪ್ರಶ್ನೆಗಳಿಗೆ ಪ್ರಧಾನಿ ಕಚೇರಿಯು ಸ್ಪಷ್ಟ ಉತ್ತರ ನೀಡುವ ಮೂಲಕ ನಿಧಿಯ ಕುರಿತ ಗೊಂದಲಗಳಿಗೆ ಪರದೆ ಎಳೆಯಬೇಕಾಗಿದೆ.

ನಿರಂಜನ್ ಮೂರ್ತಿ ಆರ್.ಕೆ., ಶಿವಮೊಗ್ಗ

ಸಾಹಿತ್ಯ ಸಮ್ಮೇಳನ: ನಿಗದಿಯಂತೆ ನಡೆಯಲಿ

ಹಾವೇರಿಯಲ್ಲಿ ನವೆಂಬರ್ 11ರಿಂದ ಮೂರು ದಿನಗಳ ಕಾಲ ನಡೆಯಬೇಕಿದ್ದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಈ ನಿಗದಿತ ದಿನಗಳಲ್ಲಿ ನಡೆಯುವ ಸಾಧ್ಯತೆ ಇಲ್ಲ ಎಂದು ವರದಿಯಾಗಿದೆ. ಇದು, ಬೇಸರದ ಸಂಗತಿ. ರಾಜ್ಯ ಸರ್ಕಾರ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಈ ಕುರಿತು ಸಕಾರಾತ್ಮಕವಾಗಿ ಚಿಂತನೆ ಮಾಡಬೇಕು. ಸಮ್ಮೇಳನಕ್ಕೆ ಅಗತ್ಯವಾದ ಹಣ ಕೂಡಲೇ ಒದಗಿಸುವ ಕೆಲಸ ಆಗಬೇಕು. ಸಮ್ಮೇಳನದ ಲಾಂಛನ ಬಿಡುಗಡೆ ಮಾಡುವಂತಹ ಪ್ರಕ್ರಿಯೆಗಳನ್ನು ಚುರುಕಾಗಿ ನಡೆಸಬೇಕು. ಈಗಾಗಲೇ ನಿಗದಿ ಆಗಿರುವ ದಿನಗಳಲ್ಲೇ ಸಮ್ಮೇಳನ ನಡೆಯುವಂತೆ ನೋಡಿಕೊಳ್ಳಬೇಕು.

ಎಚ್.ಪಿ.ಯಮನಪ್ಪ, ಬೆಂಗಳೂರು

5ಜಿ ಓಕೆ, ಸರ್ವರ್ ಸಮಸ್ಯೆ ಯಾಕೆ?

ಭಾರತದಲ್ಲಿ 5ಜಿ ಸೇವೆಗಳು ಪ್ರಾರಂಭವಾಗಿವೆ. ಈ ಮೂಲಕ ಭಾರತೀಯರು ವೇಗದ ಇಂಟರ್‌ನೆಟ್ ಸಂಪರ್ಕ ಪಡೆಯಲು ಸಾಧ್ಯ ಎಂಬುದು ಸಂತಸದ ವಿಚಾರ. ಆದರೆ, ದೇಶದ ಸರ್ಕಾರಿ ಕಚೇರಿಗಳಲ್ಲಿ ಸರ್ವರ್ ಸಮಸ್ಯೆ ಆಗದಂತೆ ಮಾಡಿ, ಸಾರ್ವಜನಿಕರಿಗೆ ಶೀಘ್ರವಾಗಿ ಸೇವೆಗಳು ದೊರಕುವಂತೆ ಮಾಡದಿರುವುದು ದುರದೃಷ್ಟಕರ.

ಸುನಿಲ್ ಟಿ.ಪಿ., ಮಂಡ್ಯ

ಇಂದೋರ್ ಕಾರ್ಯವೈಖರಿ ಮಾದರಿಯಾಗಲಿ

ಕೇಂದ್ರ ಸರ್ಕಾರ ಇತ್ತೀಚೆಗೆ ಬಿಡುಗಡೆ ಮಾಡಿದ 'ಸ್ವಚ್ಛ ಸರ್ವೇಕ್ಷಣಾ' ಶ್ರೇಯಾಂಕದಲ್ಲಿ 45 ನಗರಗಳ ಪಟ್ಟಿಯಲ್ಲಿ ಬೆಂಗಳೂರಿಗೆ 43ನೇ ಸ್ಥಾನ ಸಿಕ್ಕಿರುವುದು ವಿಷಾದದ ಸಂಗತಿ. ನಮ್ಮ ರಾಜಧಾನಿಯು ಕಡೇಪಕ್ಷ ಮೊದಲ 10 ಸ್ಥಾನಗಳಲ್ಲಾದರೂ ಇರಬೇಕಾಗಿತ್ತು. ಮುಂದಿನ ದಿನಗಳಲ್ಲಾದರೂ ನಮ್ಮ ಜನಪ್ರತಿನಿಧಿಗಳು, ನಾಗರಿಕರು ಸೇರಿ ನಗರವನ್ನು ಸ್ವಚ್ಛವಾಗಿ ಇರಿಸುವ ಸಂಕಲ್ಪವನ್ನು ಮಾಡೋಣ. ಈ ದಿಸೆಯಲ್ಲಿ ಜನಪ್ರತಿನಿಧಿಗಳು, ಅಧಿಕಾರಿ ವರ್ಗದವರು ಮತ್ತು ನಾಗರಿಕರು, ಈ ಶ್ರೇಯಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಇಂದೋರ್ ನಗರದ ಕಾರ್ಯವೈಖರಿಯನ್ನು ಅನುಕರಣೆ ಮಾಡಬಹುದು.

ವೈ.ಎನ್.ನಾಗರಾಜ, ಕೆಂಗೇರಿ

ಮುದ್ರಿತ ಪುಸ್ತಕ: ಅಪೇಕ್ಷಿತ ನಡೆ

ಮಕ್ಕಳ ಮೊಬೈಲ್ ಫೋನ್ ಹಂಬಲವು ಓದುವ ಅಭ್ಯಾಸವನ್ನೇ ಕಳೆದಿದೆ ಎಂಬ ರಾಜಕುಮಾರ ಕುಲಕರ್ಣಿ ಅವರ ಆತಂಕ (ಸಂಗತ, ಅ. 4) ಚಿಂತನಾರ್ಹ. ಮಕ್ಕಳಲ್ಲಿ ಅಷ್ಟೇ ಏಕೆ ದೊಡ್ಡವರಲ್ಲಿಯೂ ಅನಗತ್ಯವಾಗಿ ಮೊಬೈಲ್ ಬಳಸುವುದು ಹೆಚ್ಚಾಗಿದೆ. ಕೆಲವರಿಗೆ ಪುಸ್ತಕಗಳನ್ನು ಸಹ ಆನ್‌ಲೈನ್‌ನಲ್ಲಿಯೇ ಓದುವ ಅಭ್ಯಾಸವಿದೆ. ಆದರೆ, ಮುದ್ರಿತ ಪುಸ್ತಕದ ಓದುವಿಕೆಯು ಓದುಗ ಮತ್ತು ಪುಸ್ತಕದ ನಡುವೆ ಬಾಂಧವ್ಯ ಸೃಷ್ಟಿಸುತ್ತದೆ. ಹೆಚ್ಚು ಮೊಬೈಲ್ ಬಳಕೆ ಕಣ್ಣಿನ ಆರೋಗ್ಯ ಮತ್ತು ಮಾನಸಿಕ ಆರೋಗ್ಯಕ್ಕೆ ಒಳ್ಳೆಯದಲ್ಲ. ಆದ್ದರಿಂದ, ಆನ್‌ಲೈನ್ ಓದುವಿಕೆಯನ್ನು ಕಡಿಮೆ ಮಾಡುವುದು ಒಳ್ಳೆಯದು. ಎಲ್ಲ ಮಾಹಿತಿಯೂ ಮೊಬೈಲ್‌ನಲ್ಲಿಯೇ ಸಿಗುತ್ತದೆ ಎಂಬ ಭ್ರಮೆಯನ್ನು ಮಕ್ಕಳು ಮತ್ತು ಯುವಜನರು ಮೈಗೂಡಿಸಿಕೊಂಡಿರುವುದು ಸರಿಯಲ್ಲ.

ಡಾ. ಡಿ. ರಾಜಗೋಪಾಲ್, ಬೆಂಗಳೂರು

ಜನ ಯಾವಾಗ ಎಚ್ಚೆತ್ತುಕೊಳ್ಳುವುದು?

ದೇವರ ಗುಜ್ಜುಕೋಲು ಮುಟ್ಟಿದ್ದಕ್ಕೆ ದಲಿತ ಬಾಲಕನಿಗೆ ದಂಡ ವಿಧಿಸಿದ ವಿಷಯ ಜನಮಾನಸದಿಂದ ಇನ್ನೂ ಮರೆಯಾಗಿಲ್ಲ. ಆಗಲೇ ಕೊಪ್ಪಳದಲ್ಲಿ ತಂದೆಯ ಸಾಲ ತೀರಿಸಲು ನೆರವಾಗುತ್ತದೆ ಎಂದು ಹೇಳಿ ಮಗನಿಂದ ಬೆತ್ತಲೆ ಪೂಜೆ ಮಾಡಿಸಿದ ಅಮಾನವೀಯ ಘಟನೆ ವರದಿಯಾಗಿದೆ. ಉತ್ತರ ಕರ್ನಾಟಕದಲ್ಲಿ ಇಂತಹ ಪ್ರಕರಣಗಳು ಹೆಚ್ಚು ನಡೆಯುತ್ತಿವೆ. ಮೋಸ ಮಾಡುವವರು ಸಂತ್ರಸ್ತರ ಮನಸ್ಸಿನ ಇಂಗಿತವನ್ನು ಅರಿತು ಅವರನ್ನು ಬಲೆಯಲ್ಲಿ ಬೀಳಿಸಿಕೊಂಡು ಅಮಾನವೀಯ ಕೃತ್ಯಗಳನ್ನು ಮಾಡಿಸುತ್ತಾರೆ.

ಮುಗ್ಧ ಜನರ ಭಾವನೆಗಳ ಜೊತೆ ಚೆಲ್ಲಾಟ ಆಡುವುದನ್ನೇ ಕೆಲವರು ಜೀವನೋಪಾಯ ಮಾಡಿಕೊಂಡಿದ್ದಾರೆ. ಮೂಢನಂಬಿಕೆಗಳಿಗೆ ಬಲಿಯಾಗದೆ ನಮ್ಮ ಕೆಲಸಗಳಲ್ಲಿ ಶ್ರದ್ಧೆ, ಅಭಿಮಾನ ಇದ್ದರೆ ಮತ್ತು ಸತತ ಪ್ರಯತ್ನ ಇದ್ದರೆ ಗೆಲುವು ನಿಶ್ಚಿತ. ಜನರಿಗೆ ಈ ಸತ್ಯ ಅರಿವಾಗುವುದು ಯಾವಾಗ? ದೇಶವು ವೈಜ್ಞಾನಿಕವಾಗಿ ಮುಂದುವರಿಯಲು ಪ್ರತಿಯೊಬ್ಬರ ಸಹಕಾರವೂ ಬೇಕು.

ಮಲ್ಲತ್ತಹಳ್ಳಿ, ಡಾ. ಎಚ್. ತುಕಾರಾಂ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತೃತೀಯ ರಂಗ ಪ್ರಾದೇಶಿಕ ಪಕ್ಷಗಳ ರಾಷ್ಟ್ರರಾಜಕಾರಣದ ಕನಸು

ಪ್ರಜಾವಾಣಿ ವಾರ್ತೆ

ದೇಶದ ರಾಷ್ಟ್ರ ರಾಜಕಾರಣದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಅನ್ನು ಹೊರತುಪಡಿಸಿದ ತೃತೀಯ ರಂಗವನ್ನು ಸೃಷ್ಟಿಸುವ ಯತ್ನ ಈಚಿನ ವರ್ಷಗಳಲ್ಲಿ ಆರಂಭವಾಗಿದೆ. 2019ರ ಲೋಕಸಭಾ ಚುನಾವಣೆಗೂ ಮುನ್ನ ಇಂತಹ ಪ್ರಯತ್ನ ಆರಂಭವಾಗಿತ್ತು. ಆದರೆ ಆ ಯತ್ನಗಳೆಲ್ಲವೂ ರಾಷ್ಟ್ರೀಯ ಪಕ್ಷಗಳನ್ನು ಬದಿಗೊತ್ತಿ, ಪ್ರಾದೇಶಿಕ ಪಕ್ಷಗಳು ತಮ್ಮ ನೆಲೆಯನ್ನು ವಿಸ್ತರಿಸುವುದೇ ಆಗಿತ್ತು. ಆದರೆ ಅಂತಹ ರಂಗ ಅಸ್ತಿತ್ವಕ್ಕೆ ಬರುವ ಮುನ್ನವೇ ಈ ಪಕ್ಷಗಳ ನಡುವೆ ಪೈಪೋಟಿ ಹೆಚ್ಚಿ, ಯತ್ನವು ವಿಫಲವಾಗಿತ್ತು. ಈಗ 2024ರ ಲೋಕಸಭಾ ಚುನಾವಣೆಗೆ ತೃತೀಯ ರಂಗವನ್ನು ಕಟ್ಟುವ ಯತ್ನಕ್ಕೆ ಮತ್ತೆ ಚಾಲನೆ ದೊರೆತಿದೆ. ಈ ಬಾರಿ ಅಂತಹ ಯತ್ನಕ್ಕೆ ಮುನ್ನುಡಿ ಬರೆದಿರುವುದು ತೆಲಂಗಾಣ ಮುಖ್ಯಮಂತ್ರಿ ಮತ್ತು ತೆಲಂಗಾಣ ರಾಷ್ಟ್ರ ಸಮಿತಿ ಮುಖ್ಯಸ್ಥ ಕೆ.ಚಂದ್ರಶೇಖರ ರಾವ್.

2020, 2021 ಮತ್ತು 2022ರಲ್ಲಿ ಹಲವು ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ವಿರುದ್ಧ ತೃತೀಯ ರಂಗವನ್ನು ಕಟ್ಟುವ ಯತ್ನ ನಡೆದಿತ್ತು. ಆದರೆ, ಎಲ್ಲಿಯೂ ಅಂತಹ ಯತ್ನಗಳು ಸಫಲವಾಗಲಿಲ್ಲ. ಇದರ ಮಧ್ಯೆಯೇ ಆಯಾ ರಾಜ್ಯದಲ್ಲಿನ ಪ್ರಾದೇಶಿಕ ಪಕ್ಷಗಳಲ್ಲಿ ಕೆಲವು, ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಂಡು ಚುನಾವಣಾ ಕಣಕ್ಕೆ ಇಳಿದಿದ್ದವು. ಆ ತಂತ್ರಗಾರಿಕೆಯೂ ಸಫಲವಾಗಲಿಲ್ಲ. ಉತ್ತರ ಪ್ರದೇಶ, ಬಿಹಾರದಲ್ಲಿ ಸಮಾಜವಾದಿ ಪಕ್ಷ ಮತ್ತು ಆರ್‌ಜೆಡಿಗಳು ನಡೆಸಿದ ಆ ಯತ್ನಗಳು ಫಲ ನೀಡಲಿಲ್ಲ. ಆನಂತರ ತೃತೀಯ ರಂಗ ರಚಿಸುವ ಯತ್ನ ಮತ್ತೆ ಆರಂಭವಾಯಿತು.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮತ್ತು ಟಿಎಂಸಿ ಅಧ್ಯಕ್ಷೆ ಮಮತಾ ಬ್ಯಾನರ್ಜಿ ಇಂತಹ ಯತ್ನ ಆರಂಭಿಸಿದವರಲ್ಲಿ ಮೊದಲಿಗರು. ಅದರ ಭಾಗವಾಗಿ ಗೋವಾ ಮತ್ತು ತ್ರಿಪುರಾ ಚುನಾವಣೆಯಲ್ಲಿ ಟಿಎಂಸಿ ಸ್ಪರ್ಧಿಸಿ, ಹೀನಾಯವಾಗಿ ಸೋತಿತು. ಆ ನಂತರ, ಮಮತಾ ಅವರ ಈ ಯತ್ನದ ತೀವ್ರತೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಯಿತು.

ಆದರೆ ಕೆ.ಚಂದ್ರಶೇಖರ ರಾವ್ ಅವರು ತೃತೀಯ ರಂಗವನ್ನು ಕಟ್ಟುವ ಯತ್ನವನ್ನು ಮತ್ತೆ ಮತ್ತೆ ಮಾಡುತ್ತಲೇ ಇದ್ದಾರೆ. ಇದರ ಭಾಗವಾಗಿಯೇ ಅವರು ತಮ್ಮ ಪಕ್ಷ ತೆಲಂಗಾಣ ರಾಷ್ಟ್ರ ಸಮಿತಿಗೆ (ಟಿಆರ್‌ಎಸ್) ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಎಂದು ಬುಧವಾರವಷ್ಟೇ ಮರುನಾಮಕರಣ ಮಾಡಿದ್ದಾರೆ. ಈ ನಡೆಗೂ ಮುನ್ನ ಅವರು ದೇಶದ ಪ್ರಮುಖ ಪ್ರಾದೇಶಿಕ ಪಕ್ಷಗಳ ನಾಯಕರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದರು. ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಶಿವಸೇನಾದ ಉದ್ಧವ್ ಠಾಕ್ರೆ ಅವರನ್ನು ಮುಂಬೈನಲ್ಲಿ ಭೇಟಿ ಮಾಡಿದ್ದರು. ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನೂ ಭೇಟಿ ಮಾಡಿದ್ದರು. ಠಾಕ್ರೆ ಅವರನ್ನು ಹೈದರಾಬಾದ್‌ಗೆ ಆಹ್ವಾನಿಸಿದ್ದರು. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಅವರ ಜತೆಗೂ ಮಾತುಕತೆ ನಡೆಸಿದ್ದರು. ತಮಿಳುನಾಡಿನಲ್ಲಿ ಕಾಂಗ್ರೆಸ್‌ನ ಮಿತ್ರಪಕ್ಷವಾದ ಡಿಎಂಕೆಯ ಮುಖ್ಯಸ್ಥ ಮತ್ತು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಜತೆಗೂ ಮಾತುಕತೆ ನಡೆಸಿದ್ದರು. ಹೀಗೆ ದೇಶದ ಪ್ರಮುಖ ಪ್ರಾದೇಶಿಕ ಪಕ್ಷಗಳ ಮುಖ್ಯಸ್ಥರನ್ನು ಸ್ವತಃ ಭೇಟಿ ಮಾಡಿ, ತೃತೀಯ ರಂಗದ ಪ್ರಸ್ತಾವವನ್ನು ಕೆ.ಸಿ.ಆರ್ ಇಟ್ಟಿದ್ದರು.

ಆದರೆ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಜೆಡಿಎಸ್ ವರಿಷ್ಠರು ಮತ್ತು ಡಿಎಂಕೆಯ ಮಿತ್ರಪಕ್ಷವಾದ ವಿಕೆಸಿ ಪಕ್ಷದ ಪ್ರತಿನಿಧಿ ಮಾತ್ರ ಭಾಗಿಯಾಗಿದ್ದಾರೆ. ಬೇರೆ ಪ್ರಮುಖ ಪ್ರಾದೇಶಿಕ ಪಕ್ಷಗಳ ಪ್ರಮುಖರು ಮತ್ತು ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿಲ್ಲ. ಆದರೆ, ಕೆ.ಸಿ.ಆರ್ ಅವರಿಗೆ ರಾಷ್ಟ್ರಮಟ್ಟದಲ್ಲಿ ವರ್ಚಸ್ಸು ಇದೆ. ನಾವು ರಾಷ್ಟ್ರ ರಾಜಕಾರಣವನ್ನು ಪ್ರವೇಶಿಸುತ್ತೇವೆ ಎಂದು ನೂತನ ಬಿಆರ್‌ಎಸ್ ಪಕ್ಷ ಘೋಷಿಸಿದೆ.

ರಾಷ್ಟ್ರೀಯ ಪಕ್ಷವಾಗಬೇಕಾದರೆ

ಬಿಆರ್‌ಎಸ್ ರಾಷ್ಟ್ರೀಯ ಪಕ್ಷ ಎನಿಸಿಕೊಳ್ಳುವ ಹಾದಿ ಸುಲಭವಿಲ್ಲ. ಯಾವುದೇ ಪಕ್ಷವು ರಾಷ್ಟ್ರೀಯ ಪಕ್ಷ ಎನಿಸಿಕೊಳ್ಳಬೇಕಾದರೆ ಕೆಲವು ಷರತ್ತುಗಳನ್ನು ಪೂರೈಸಬೇಕಾಗುತ್ತದೆ. ಆ ಷರತ್ತುಗಳು ಈ ರೀತಿ ಇವೆ.

- ಯಾವುದೇ ನಾಲ್ಕು ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮತ್ತು ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ ಶೇ 6ರಷ್ಟು ಮತಗಳನ್ನು ಪಡೆದಿರಬೇಕು
- ಒಂದು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳು ಸೇರಿ ಒಟ್ಟು ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಲೋಕಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿರಬೇಕು
- ಒಟ್ಟು ಲೋಕಸಭಾ ಕ್ಷೇತ್ರಗಳ ಸಂಖ್ಯೆಯಲ್ಲಿ ಶೇ 2ರಷ್ಟು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿರಬೇಕು
- ಕನಿಷ್ಠ ನಾಲ್ಕು ರಾಜ್ಯಗಳಲ್ಲಿ ರಾಜ್ಯ ಪಕ್ಷದ ಸ್ಥಾನಮಾನವನ್ನು ಪಕ್ಷವು ಪಡೆದಿರಬೇಕು

ಬಿಆರ್‌ಎಸ್‌ನ ಪ್ರಧಾನ ನೆಲೆ ತೆಲಂಗಾಣ ಮಾತ್ರ. ಆಂಧ್ರಪ್ರದೇಶ ಮತ್ತು ಒಡಿಶಾದಲ್ಲಿ ನೆಲೆ ಕಂಡುಕೊಳ್ಳಲು ಪಕ್ಷವು ಯತ್ನ ನಡೆಸಿದೆಯಾದರೂ, ಅದು ನಿರೀಕ್ಷಿತ ಫಲ ನೀಡಿಲ್ಲ.

ಮಹತ್ವಾಕಾಂಕ್ಷಿ ಮಮತಾ



ಪಶ್ಚಿಮ ಬಂಗಾಳದಲ್ಲಿ ಸತತ ಮೂರು ಬಾರಿ ಅಧಿಕಾರದ ಚುಕ್ಕಾಣಿ ಹಿಡಿದ ಬಳಿಕ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮುಖ್ಯಸ್ಥೆ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ರಾಷ್ಟ್ರ ರಾಜಕಾರಣಕ್ಕೆ ಧುಮುಕುವ ಅಭಿಲಾಷೆ ಉತ್ಕಟವಾಗಿದೆ. 2021ರಲ್ಲಿ ಪಶ್ಚಿಮ ಬಂಗಾಳ ವಿಧಾನಸನಭೆಗೆ ನಡೆದ ಚುನಾವಣೆ ತೀವ್ರ ಜಿದ್ದಾಜಿದ್ದಿನಿಂದ ಕೂಡಿತ್ತು. ಅಧಿಕಾರಕ್ಕೆ ಬರಲೇಬೇಕು ಎಂದು ಹಟ ತೊಟ್ಟಿದ್ದ ಬಿಜೆಪಿ ವಿರುದ್ಧ ಮಮತಾ ಸ್ಪಷ್ಟ ಗೆಲುವು ದಾಖಲಿಸಿ ಬೀಗಿದ್ದರು. ಗಾಲಿಕುರ್ಚಿಯಲ್ಲೇ ಚುನಾವಣಾ ಪ್ರಚಾರ ನಡೆಸಿ, ಬಿಜೆಪಿಯ ಆಸೆಗೆ ತಣ್ಣೀರೆರಚಿದ್ದರು. ಬಿಜೆಪಿಗೆ ದೊಡ್ಡ ಮಟ್ಟದ ಹೊಡೆತ ನೀಡುವುದು ಸಾಧ್ಯವಾಗಿದ್ದರಿಂದ, ಟಿಎಂಸಿ ಪಾಳಯದಲ್ಲಿ ರಾಷ್ಟ್ರ ರಾಜಕಾರಣ ಮಹತ್ವಾಕಾಂಕ್ಷೆ ಪ್ರಬಲವಾಯಿತು.

ಆದರೆ, ಬಂಗಾಳದ ಗೆಲುವಿನ ಉತ್ಸಾಹದಲ್ಲಿ ಗೋವಾ ಹಾಗೂ ತ್ರಿಪುರಾ ವಿಧಾನಸಭಾ ಚುನಾವಣೆಗೆ ಧುಮುಕಿದ ಪಕ್ಷಕ್ಕೆ ಆಘಾತವಾಯಿತು. ಐದು ತಿಂಗಳ ಕಡಿಮೆ ಅವಧಿಯಲ್ಲಿ ಗೋವಾದಲ್ಲಿ ಬಿರುಸಿನ ಚಟುವಟಿಕೆಗಳನ್ನು ನಡೆಸಿತು. ಸ್ಥಳೀಯ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡು ಕಣಕ್ಕೆ ಇಳಿಯಿತು. ಆದರೆ, ಮಮತಾ ಅಂದುಕೊಂಡಂತೆ ಏನೂ ಮಾಡಲಾಗಲಿಲ್ಲ. ಒಂದೂ ಸ್ಥಾನ ಸಿಗದೇ ಟಿಎಂಸಿ ನಿರಾಸೆ ಅನುಭವಿಸಿತು. ಆದರೆ ಚಲಾವಣೆಯಾದ ಒಟ್ಟು ಮತಗಳಲ್ಲಿ ಶೇ 5ರಷ್ಟು ಮತಗಳನ್ನು ಗಳಿಸುವಲ್ಲಿ ಟಿಎಂಸಿ ಯಶಸ್ವಿಯಾಗಿತ್ತು. ಇದು ದೊಡ್ಡ ಹೆಜ್ಜೆ ಎಂದು ಟಿಎಂಸಿ ನಾಯಕರು ಕರೆದರು.

2023ರಲ್ಲಿ ನಡೆಯಲಿರುವ ಮೇಘಾಲಯ ಹಾಗೂ ತ್ರಿಪುರಾ ವಿಧಾನಸಭಾ ಚುನಾವಣೆಗಳ ಮೇಲೆ ಪಕ್ಷ ದೃಷ್ಟಿ ಹಾಯಿಸಿದೆ. ಈ ಎರಡೂ ರಾಜ್ಯಗಳಲ್ಲಿ ಪಕ್ಷದ ಚಟುವಟಿಕೆಗಳು ಬಿರುಸಿನಿಂದ ಸಾಗಿದ್ದು, ಶಾಸಕರು ಸೇರಿದಂತೆ ಹಲವು ಮುಖಂಡರು ಟಿಎಂಸಿ ಸೇರ್ಪಡೆಯಾಗಿದ್ದಾರೆ. ಗೋವಾದಲ್ಲಿ ಚುನಾವಣೆಗೆ ಸಿದ್ಧವಾಗಲು ಪಕ್ಷಕ್ಕೆ ಕಡಿಮೆ ಸಮಯಾವಕಾಶ ಸಿಕ್ಕಿತ್ತು. ಮೇಘಾಲಯ ಮತ್ತು ತ್ರಿಪುರಾದಲ್ಲಿ ಈ ರೀತಿ ಆಗದಂತೆ ಟಿಎಂಸಿ ನೋಡಿಕೊಂಡಿದ್ದು, ಈಗಾಗಲೇ ಚುನಾವಣಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡಿದೆ.

ಬಂಗಾಳದ ಆಚೆಗೂ ಪಕ್ಷದ ಅಸ್ತಿತ್ವವನ್ನು ಸ್ಥಾಪಿಸುವ ಟಿಎಂಸಿ ಮಹತ್ವಾಕಾಂಕ್ಷೆ ಹೊಸದಲ್ಲ. 2011ರಲ್ಲಿ ರಾಜ್ಯದಿಂದ ಎಡಪಕ್ಷಗಳ ಸರ್ಕಾರವನ್ನು ಕೆಳಗಿಳಿಸಿದ ಬಳಿಕ ಈ ಆಸೆ ಚಿಗುರೊಡೆದಿತ್ತು. 2012ರಲ್ಲಿ ಈಶಾನ್ಯಭಾಗದ ಹಲವು ರಾಜ್ಯಗಳಲ್ಲಿ ಟಿಎಂಸಿ ಘಟಕಗಳನ್ನು ಶುರು ಮಾಡಲಾಗಿತ್ತು. ಆದರೆ, ಕೆಲವೇ ವರ್ಷಗಳಲ್ಲಿ ರಾಜ್ಯ ಘಟಕಗಳ ಮುಖಂಡರು ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ವಲಸೆ ಹೋದರು. ಹೀಗಾಗಿ ಈ ಎಲ್ಲ ರಾಜ್ಯ ಘಟಕಗಳನ್ನು ಟಿಎಂಸಿ ಮುಚ್ಚಿತ್ತು.

ಟಿಎಂಸಿಯ ರಾಷ್ಟ್ರೀಯ ಅಭಿಲಾಷೆಗೆ ಅಡ್ಡಿಯಾಗಿರುವುದು ಬಂಗಾಳಿ ಅಸ್ಮಿತೆ. ಕಳೆದ ವರ್ಷದ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಟಿಎಂಸಿ ಬಂಗಾಳಿ ಅಸ್ತ್ರವನ್ನು ಬಳಸಿಯೇ ಮತ ಕೇಳಿತ್ತು. ಬಂಗಾಳಿ ಭಾಷೆ, ಸಂಸ್ಕೃತಿ, ಆಚಾರ ವಿಚಾರಗಳ ದೃಷ್ಟಿಕೋನದಲ್ಲೇ ಟಿಎಂಸಿಯನ್ನು ನೋಡಲಾಗುತ್ತಿದೆ. ಇದು ಬಂಗಾಳಿಗರ ಪಕ್ಷ ಎಂದೇ ಕರೆಯಲಾಗುತ್ತದೆ. ಬಹುಶಃ ಇದು, ಟಿಎಂಸಿಯ ರಾಷ್ಟ್ರೀಯ ರಾಜಕಾರಣದ ಆಕಾಂಕ್ಷೆಗೆ ಅಡ್ಡಿಯಾಗಬಹುದು ಎಂದು ವಿಶ್ಲೇಷಿಸಲಾಗಿದೆ.

ಗುಜರಾತ್, ಹಿಮಾಚಲದ ಮೇಲೆ ಎಎಪಿ ಕಣ್ಣು

ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಅವರ ಐತಿಹಾಸಿಕ ಸತ್ಯಾಗ್ರಹದ ಬಳಿಕ ಹುಟ್ಟಿಕೊಂಡ ಆಮ್ ಆದ್ಮಿ ಪಕ್ಷ (ಎಎಪಿ) ಕೆಲವೇ ವರ್ಷಗಳಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಛಾಪು ಮೂಡಿಸಿತು. 2013ರಲ್ಲಿ ದೆಹಲಿಯಿಂದ ಆರಂಭವಾದ ಎಎಪಿ ಜೈತ್ರಯಾತ್ರೆ, ಪಕ್ಕದ ಪಂಜಾಬ್‌ಗೂ ವಿಸ್ತರಿಸಿದೆ. ಮುಂದಿನ ವರ್ಷ ಗುಜರಾತ್ ವಿಧಾನಸಭೆಗೆ ನಡೆಯಲಿರುವ ಚುನಾವಣೆ ಮೇಲೆ ಎಎಪಿ ದೃಷ್ಟಿ ನೆಟ್ಟಿದ್ದು, ಆಡಳಿತಾರೂಢ ಬಿಜೆಪಿಗೆ ದೊಡ್ಡ ಮಟ್ಟದ ಪೈಪೋಟಿ ನೀಡಲು ಸಜ್ಜುಗೊಳ್ಳುತ್ತಿದೆ.

2013ರ ಚುನಾವಣೆಯಲ್ಲಿ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಎರಡನೇ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಕಾಂಗ್ರೆಸ್ ಬೆಂಬಲದೊಂದಿಗೆ ಅಧಿಕಾರವನ್ನೂ ಹಿಡಿಯಿತು. ಇದರ ಹುರುಪಿನಿಂದ, ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು ಪಕ್ಷವನ್ನು ದೇಶದಾದ್ಯಂತ ವಿಸ್ತರಿಸಲು ಮುಂದಾದರು. 2014ರ ಸಾರ್ವತ್ರಿಕ ಚುನಾವಣೆಯಲ್ಲಿ 434 ಲೋಕಸಭಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ದಿಟ್ಟತನ ತೋರಿದ್ದರು. ಆದರೆ, 414 ಅಭ್ಯರ್ಥಿಗಳು ಠೇವಣಿ ಕಳೆದುಕೊಂಡರು.

ದೇಶದಾದ್ಯಂತ ಪಕ್ಷದ ಹರವು ವಿಸ್ತರಿಸುವ ಅವರ ಯತ್ನಕ್ಕೆ ಇದರಿಂದ ಅಡ್ಡಿಯಾಗಲಿಲ್ಲ. ಇದಾದ ಬಳಿಕ ವಿಧಾನಸಭಾ ಚುನಾವಣೆಗಳು ನಡೆದ 6 ರಾಜ್ಯಗಳಲ್ಲಿ ಒಟ್ಟು 554 ಅಭ್ಯರ್ಥಿಗಳನ್ನು ಅವರು ಪಕ್ಷದಿಂದ ಕಣಕ್ಕಿಳಿಸಿದರು. ಯಾವ ಅಭ್ಯರ್ಥಿಯೂ ಗೆಲ್ಲಲಿಲ್ಲವಾದರೂ, ಶೇ 0.7ರಷ್ಟು ಮತ ಪ್ರಮಾಣವನ್ನು ಪಕ್ಷ ಗಳಿಸಿತ್ತು. 2017ರಲ್ಲಿ ನಡೆದ ಪಂಜಾಬ್ ವಿಧಾನಸಭಾ ಚುನಾವಣೆಗೆ ಎಎಪಿ ಮೊದಲ ಬಾರಿಗೆ ಧುಮುಕಿತು. ಒಟ್ಟು 117 ಸ್ಥಾನಗಳ ಪೈಕಿ 20 ಕಡೆಗಳಲ್ಲಿ ಎಎಪಿ ಶಾಸಕರು ಗೆದ್ದು ಬಂದರು. ಇದು ಎಎಪಿಗೆ ದೊಡ್ಡ ಬಲ ತಂದುಕೊಟ್ಟಿತು. ಇದೇ ವರ್ಷದ ಆರಂಭದಲ್ಲಿ ಪಂಜಾಬ್‌ನಲ್ಲಿ ಎಎಪಿ 92 ಕ್ಷೇತ್ರಗಳಲ್ಲಿ ಗೆದ್ದು ಅಧಿಕಾರಕ್ಕೆ ಬಂದಿತು. ಆದರೆ, ಇದೇ ಫೆಬ್ರುವರಿಯಲ್ಲಿ ನಡೆದ ಗೋವಾ ವಿಧಾನಸಭಾ ಫಲಿತಾಂಶ ಎಎಪಿಗೆ ಕಹಿಯಾಯಿತು.

ತಳಮಟ್ಟದಿಂದ ಪಕ್ಷವನ್ನು ಕಟ್ಟುವಲ್ಲಿ ಎಎಪಿ ಸೈ ಎನಿಸಿದ್ದರಿಂದ ದೆಹಲಿ ಹಾಗೂ ಪಂಜಾಬ್‌ನಲ್ಲಿ ಅಧಿಕಾರ ಹಿಡಿಯಲು ಸಾಧ್ಯವಾಗಿದೆ ಎನ್ನುತ್ತಾರೆ ವಿಶ್ಲೇಷಕರು. ಗುಜರಾತ್, ಮಧ್ಯಪ್ರದೇಶ, ಹರಿಯಾಣದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಎಎಪಿ ಗಮನಾರ್ಹ ಪ್ರಗತಿ ದಾಖಲಿಸಿದೆ. ಚಂಡೀಗಢ ಮಹಾನಗರ ಪಾಲಿಕೆಯಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಚುನಾವಣೆ ನಡೆಯಲಿರುವ ಗುಜರಾತ್, ಹಿಮಾಚಲ ಪ್ರದೇಶ, ರಾಜಸ್ಥಾನ, ಹರಿಯಾಣ, ಛತ್ತೀಸಗಡ, ಅಸ್ಸಾಂ, ತೆಲಂಗಾಣ ಮತ್ತು ಕೇರಳ ರಾಜ್ಯಗಳಿಗೆ ಪದಾಧಿಕಾರಿಗಳನ್ನು ನೇಮಿಸಿ ಪಕ್ಷದ ಚಟುವಟಿಕೆಯನ್ನು ಚುರುಕೊಗೊಳಿಸಿದ್ದು, ಹಂತ ಹಂತವಾಗಿ ದೇಶದಾದ್ಯಂತ ಪಕ್ಷವನ್ನು ವಿಸ್ತರಿಸಲು ಮುಂದಾಗಿದೆ.



ಆಧಾರ: ಪಿಟಿಐ, ರಾಯಿಟರ್ಸ್, ಚುನಾವಣಾ ಆಯೋಗ, ಚುನಾವಣಾ ಚಿಹ್ನೆ ಆದೇಶ:1968

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ರಾಜ್ಯ ಸರ್ಕಾರದ ಉದ್ದೇಶಿತ ಡಿಜಿಟಲ್ ಹೆಲ್ತ್ ಕಾರ್ಡ್‌ನಿಂದ ಖಾಸಗೀತನದ ಗೋಪ್ಯತೆಗೆ ಧಕ್ಕೆ ಆಗಬಹುದು ಎಂಬ ಆತಂಕ ಸಮರ್ಥನೀಯವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 242

ತವರಿನಲ್ಲಿ ಗಿರಿಜೆಗೆ ಭವ್ಯಸ್ವಾಗತ

ಶಿವನ ಒಲಿಸಿಕೊಂಡ ತನ್ನ ಜನ್ಮ ಸಾರ್ಥಕವಾಯಿತೆಂದು ಪಾರ್ವತಿ ಸಂತೋಷದಿಂದ ಸಖಿಯರೊಡನೆ ತಂದೆಯ ಮನೆಗೆ ತೆರಳುತ್ತಾಳೆ. ಮೇನಾದೇವಿ ಮತ್ತು ಹಿಮವಂತ ದಂಪತಿ ಮಗಳನ್ನು ಎದುರ್ಗೊಳ್ಳಲು ದಿವ್ಯರಥವನ್ನೇರಿ ಬರುತ್ತಾರೆ. ಪುರೋಹಿತರು, ಪಟ್ಟಣಿಗರು, ದಾಸದಾಸಿಯರು ಮತ್ತು ಸಂಬಂಧಿಗಳೆಲ್ಲರೂ ಪಾರ್ವತಿಯನ್ನು ಬರಮಾಡಿಕೊಳ್ಳಲು ಸಾಲಾಗಿ ನಿಂತರೆ, ಪಾರ್ವತಿಯ ಸಹೋದರರೂ ಹರ್ಷದಿಂದ ಜಯಧ್ವನಿಯನ್ನು ಮಾಡುತ್ತಾ, ತಮ್ಮ ಅಕ್ಕರೆಯ ಅಕ್ಕನನ್ನು ಅರಮನೆಗೆ ಕರೆತರಲು ಕಾತರರಾಗಿ ಕಾದಿರುತ್ತಾರೆ.

ಪಾರ್ವತಿ ಬರುವ ರಾಜಮಾರ್ಗವನ್ನು ತಳಿರುತೋರಣಗಳಿಂದ ಅಲಂಕರಿಸಲಾಗಿತ್ತು. ಸುತ್ತಲ ಪರಿಸರವನ್ನು ಚಂದನಧೂಪ ಕಸ್ತೂರೀ ಮುಂತಾದ ಸುಗಂಧದ್ರವ್ಯಗಳಿಂದ ಸುವಾಸಿತವಾಗಿಸಲಾಗಿತ್ತು. ಇಂತಹ ರಾಜಮಾರ್ಗದಲ್ಲಿ ಮಂಗಳವಾದ ಪೂರ್ಣಕಲಶವನ್ನು ಹಿಡಿದು ಸುಮಂಗಳೆಯರು ನಿಂತಿದ್ದರೆ, ಊರಿನ ಘನವಿದ್ವಾಂಸರು, ಪುರೋಹಿತರು, ಗಣ್ಯ ನಾಗರಿಕರು, ಬ್ರಹ್ಮವಿತ್ತುಗಳಾದ ಮುನಿಗಳೆಲ್ಲರೂ ಮಹಾತಪಸ್ವಿನಿ ಪಾರ್ವತಿಯನ್ನು ಸ್ವಾಗತಿಸಲು ಕಾಯುತ್ತಿದ್ದರು. ಅರಮನೆಯ ರಾಜನರ್ತಕಿಯರು, ಆಸ್ಥಾನ ಸಂಗೀತಗಾರರು, ಕಲಾವಿದರೆಲ್ಲರೂ ರಾಜಮಾರ್ಗದ ಉದ್ದಕ್ಕೂ ನಿಂತು ತಮ್ಮ ವೃತ್ತಿನೈಪುಣ್ಯವನ್ನು ತೋರಿಸುತ್ತಿದ್ದರು. ಎಲ್ಲಾ ವರ್ಗದ ಜನರು ಪಾರ್ವತಿಯ ಗುಣಗಾನ ಮಾಡುತ್ತಿದ್ದರು. ಅನೇಕ ಜನ ವಿಧವಿಧವಾದ ವಾದ್ಯಗಳಿಂದ ಮಂಗಳಧ್ವನಿಯನ್ನು ಮಾಡುತ್ತಿದ್ದರು. ಗಿರಿಜೆ ನಗರ ಸಮೀಪಿಸುತ್ತಿದ್ದಂತೆ ಶಂಖ-ಜಾಗಟೆಯ ಧ್ವನಿ ಕಿವಿಗಡಚಿಕ್ಕುವಂತೆ ಮೊಳಗಿದವು.

ಗಿರಿಜೆ ನಗರವನ್ನು ಪ್ರವೇಶಿಸುತ್ತಿದ್ದಂತೆ ಅವಳತ್ತ ಓಡಿ ಬಂದ ಮೇನಾದೇವಿ ಮತ್ತು ಹಿಮವಂತ ಮಗಳನ್ನು ಬಿಗಿದಪ್ಪಿಕೊಂಡು ಸಂತೋಷದಿಂದ ಬೀಗಿದರು. ತನ್ನ ಎದುರುಗೊಳ್ಳಲು ಕಾದಿದ್ದಲ್ಲದೆ, ಹರ್ಷದಿಂದ ಓಡೋಡಿ ಬಂದು ಆಲಂಗಿಸಿದ ತಂದೆತಾಯಿಗಳ ಔದಾರ್ಯ ನೋಡಿ ಗಿರಿಜೆ ಮನಸ್ಸು ಭಾವಪರವಶದಿಂದ ಉಬ್ಬಿ ಹೋಯಿತು. ಮೇನಾದೇವಿ-ಹಿಮವಂತ ಗಿರಿಜೆಯ ಶಿರವನ್ನು ನೇವರಿಸುತ್ತಾ ಆಶೀರ್ವಾದ ಮಾಡಿದರು.

ಗಿರಿಜೆಯ ಬಳಿ ಬಂದ ಸಹೋದರರು ಮತ್ತವರ ಪತ್ನಿ-ಮಕ್ಕಳು, ಇತರೆ ಬಂಧು-ಮಿತ್ರರು ಸಹ ಪ್ರೀತಿಯಿಂದ ಅವಳನ್ನು ಆಲಂಗಿಸಿಕೊಂಡು, ‘ಎಲೈ ಗಿರಿಜೆ, ನೀನು ಕುಲವನ್ನು ಉದ್ಧರಿಸುವಂತಹ ಮಹಾಕಾರ್ಯವನ್ನು ಸಾಧಿಸಿದೆ. ಈ ನಿನ್ನ ಸದಾಚಾರದಿಂದ ನಾವೆಲ್ಲರೂ ಪುನೀತರಾದೆವು’ ಎಂದು ಹೊಗಳಿ ನಮಸ್ಕರಿಸಿದರು. ಚಂದನ ಮತ್ತು ಸುಗಂಧಿತ ಹೂವುಗಳಿಂದ ಅವಳನ್ನು ಅಲಂಕರಿಸಿ ಪೂಜಿಸಿದರು. ಈ ಸಮಯದಲ್ಲಿ ದೇವತೆಗಳು ಆಕಾಶದಲ್ಲಿ ವಿಮಾನದಲ್ಲಿ ನಿಂತು, ಗಿರಿಜೆಯ ಮೇಲೆ ಹೂವಿನ ಮಳೆಯನ್ನು ಸುರಿಸಿ, ಸ್ತುತಿಸಿದರು.

ನಂತರ ಅವರೆಲ್ಲಾ ಗಿರಿಜೆಯನ್ನು ಸುಂದರವಾದ ರಥದಲ್ಲಿ ಕುಳ್ಳಿರಿಸಿಕೊಂಡು ನಗರವನ್ನು ಪ್ರವೇಶಿಸಿದರು. ಪುರದ ಪ್ರಮುಖರು, ಪುರೋಹಿತರು, ಸಖಿಯರು, ಮುತ್ತೈದೆಯರೆಲ್ಲರೂ ಸೇರಿ ಗಿರಿಜೆಯನ್ನು ಬಹುಮರ್ಯಾದೆಯಿಂದ ಬರಮಾಡಿಕೊಂಡು ಅವಳ ಮನೆಗೆ ಕರೆದೊಯ್ದರು. ಸ್ತ್ರೀಯರು ದೃಷ್ಟಿಯನ್ನು ತೆಗೆದು ಸಾಂಪ್ರದಾಯಿಕ ಆರತಿಯನ್ನು ಎತ್ತಿದರು. ಯಶಸ್ವಿ ತಪಸ್ವಿನಿಯಾಗಿ ಪಾರ್ವತಿ ಮನೆಗೆ ಬಂದಿದ್ದರಿಂದ ತನ್ನ ಗೃಹಸ್ಥಾಶ್ರಮ ಸಫಲವಾಯಿತೆಂದು ಹಿಮವಂತ ಹರ್ಷಿಸಿದ. ಮಗಳನ್ನು ತಪಸ್ಸು ಮಾಡಲು ಪ್ರೇರೇಪಿಸಿದ ನಾರದನ ಸಹಾಯವನ್ನು ಕೃತಜ್ಞತೆಯಿಂದ ಸ್ತುತಿಸಿದ.

ಪಾರ್ವತಿಯ ಸ್ವಾಗತಕಾರ್ಯಕ್ಕೆ ಬಂದಿದ್ದ ಗಣ್ಯರಿಗೆ, ಸ್ತುತಿಪಾಠಕರಿಗೆ ಹಿಮವಂತ ಧನವನ್ನು ಕೊಟ್ಟು ಸತ್ಕರಿಸಿದ. ವೇದಪಂಡಿತರಿಂದ ಮಂಗಳ ಘೋಷ ಮಾಡಿಸಿ, ಸ್ವಾಗತ ಮಹೋತ್ಸವ ಸಮಾಪ್ತಿಗೊಳಿಸಿದ. ಹೀಗೆ ಗಿರಿಜೆ ಆತ್ಮೀಯ ಸ್ವಾಗತದೊಂದಿಗೆ ಮನೆಯನ್ನು ಸೇರಿದಳು.

ಪಿವಿ ✓

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಯುವತಿಯೊಂದಿಗೆ ಮಾತುಕತೆಯಲ್ಲಿ ತೊಡಗಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ವೈರಲ್ ಆಗಿತ್ತು. ‘ಭಾರತ್ ಜೋಡೊ ಯಾತ್ರೆಯಲ್ಲಿ ತೊಡಗಿರುವ ರಾಹುಲ್ ಅವರು ಯುವತಿ ಜೊತೆ ಕಾಲಕಳೆಯುತ್ತಿದ್ದಾರೆ’ ಎಂಬುದಾಗಿ ಚರ್ಚೆಯಾಗುತ್ತಿದೆ. ಇನ್ನೂ ಕೆಲವು ಬಳಕೆದಾರರು ಕೆಟ್ಟ ಅರ್ಥದಲ್ಲಿ ಮಾತನಾಡಿದ್ದಾರೆ.

✓ ಚಿತ್ರದಲ್ಲಿ ರಾಹುಲ್ ಜೊತೆ ಇರುವ ಯುವತಿ ಹೆಸರು ಮಿರಾಯಾ ವಾದ್ರಾ. ರಾಹುಲ್ ಅವರ ಸಹೋದರಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಮಗಳು. ಚರ್ಚೆಯಾಗುತ್ತಿರುವಂತೆ, ರಾಹುಲ್ ಅವರು ಭಾರತ್ ಜೊಡೊ ಯಾತ್ರೆಯ ವೇಳೆ ತೆಗೆದ ಚಿತ್ರ ಇದಲ್ಲ. 2015ರ ಆಗಸ್ಟ್ 20ರಂದು ನಡೆದ ರಾಜೀವ್‌ಗಾಂಧಿ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಈ ಚಿತ್ರವನ್ನು ಸೆರೆಹಿಡಿಯಲಾಗಿದೆ. ಮೂಲ ಚಿತ್ರದಲ್ಲಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಮಿರಾಯಾ ಅವರ ತಂದೆ ರಾಬರ್ಟ್ ವಾದ್ರಾ ಹಾಗೂ ಇತರರು ಇದ್ದಾರೆ ಎಂದು ‘ದಿ ಕ್ವಿಂಟ್‌’ ತಾಣ ವರದಿ ಮಾಡಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಬಿಡುಗಡೆಯ ದಾರಿ

ಎರಡು ತೊಡರೆನಲೇಕೆ? ಬಿಡಿಸು ಮತಿಗಾದನಿತ |
ದುಡಿ ಕೈಯಿನಾದನಿತು, ಪಡು ಬಂದ ಪಾಡು ||
ಬಿಡು ಮಿಕ್ಕುದನು ವಿಧಿಗೆ, ಬಿಡದಿರುಪಶಾಂತಿಯನು|
ಬಿಡುಗಡೆಗೆ ದಾರಿಯದು – ಮಂಕುತಿಮ್ಮ || 729 ||

ಪದ-ಅರ್ಥ: ಎಡರು = ಕಷ್ಟಗಳು,ತೊಡರು = ಅಡ್ಡಿ, ಆತಂಕಗಳು, ಮತಿಗಾದನಿತ ಮತಿಗೆ(ಬುದ್ಧಿಗೆ) + ಆದ + ಅನಿತ(ಅಷ್ಟು), ಕೈಯಿನಾದನಿತು = ಕೈಯಿನ(ಕೈಯಿಂದ) + ಆದ + ಅನಿತು, ಬಿಡದಿರುಪಶಾಂತಿಯನು = ಬಿಡದಿರು + ಉಪಶಾಂತಿಯನು-(ಅಂತರಂಗದ ಶಾಂತಿಯನ್ನು).

ವಾಚ್ಯಾರ್ಥ: ಕಷ್ಟ, ಅಡ್ಡಿ ಎಂದೇಕೆ ಹೇಳುತ್ತೀ? ನಿನ್ನ ಬುದ್ಧಿಗೆ ತಿಳಿದಷ್ಟನ್ನು ಬಿಡಿಸು. ಕೈಯಿಂದಲಾದಷ್ಟು ದುಡಿ. ಬಂದ ಸುಖ, ದುಃಖಗಳನ್ನು ಎದುರಿಸು. ಉಳಿದದ್ದನ್ನು ವಿಧಿಗೆ ಬಿಡು. ಮನಸ್ಸಿನ ಶಾಂತಿಯನ್ನು ಕಳೆದುಕೊಳ್ಳಬೇಡ. ಇದೇ ಬಿಡುಗಡೆಯ ದಾರಿ.

ವಿವರಣೆ: ಬದುಕು ಎಂದರೆ ಹೂವಿನ ಹಾಸಿಗೆಯಲ್ಲ. ಕಷ್ಟಗಳು ಸಾಲುಸಾಲಾಗಿ ಬಂದಾವು. ಕಲ್ಲು ವಿಗ್ರಹವಾಗಲು ಉಳಿಪೆಟ್ಟು ಬೀಳದೆ ಆದೀತೇ? ಆದರೆ ಆ ಉಳಿಪೆಟ್ಟುಗಳಿಂದಲೇ ಅದು ವಿಗ್ರಹವಾದದ್ದು, ಪೂಜನೀಯವಾದದ್ದು. ನಮಗೆ ಕಷ್ಟ ಬಂದಿತು, ಅನೇಕ ಅಡ್ಡಿ ಆತಂಕಗಳು ಎದುರಾದವು ಎಂದು ಕಣ್ಣೀರು ಸುರಿಸುತ್ತ, ಎಲ್ಲರೊಂದಿಗೆ ದುಃಖವನ್ನು ಹಂಚಿಕೊಂಡು ಅವಲತ್ತುಕೊಳ್ಳುವುದು ಬದುಕಲ್ಲ. ಅದರಾಚೆಗೆ ಸುಂದರವಾದ ಬದುಕನ್ನು ಕಟ್ಟಿಕೊಳ್ಳಬಹುದು. ಅದಕ್ಕೆ ಏನು ಮಾಡಬೇಕು? ಕಗ್ಗ ಹೇಳುತ್ತದೆ, ಅಡ್ಡಿ, ಆತಂಕಗಳಿಗೆ, ಕಷ್ಟಗಳಿಗೆ ಹೆದರುವುದು ಬೇಡ. ಬೆಂಕಿಯಲ್ಲಿ ಬಂಗಾರ ಕರಗುತ್ತದೆ, ಮೊದಲಿನ ಆಕಾರ ಕಳೆದುಕೊಳ್ಳುತ್ತದೆ. ಆದರೆ ಬೆಂಕಿಯಿಂದ ಹೊರಬಂದಾಗ ಮತ್ತಷ್ಟು ಪರಿಶುದ್ಧವಾಗಿ, ಹೊಳಪನ್ನು ಹೆಚ್ಚಿಸಿಕೊಂಡು ಬರುತ್ತದೆ. ಅಂತೆಯೇ ನಮ್ಮನ್ನು ಬಾಧಿಸುವ ಕಷ್ಟ, ಕಾರ್ಪಣ್ಯಗಳು ನಮ್ಮನ್ನು ಪರಿಶುದ್ಧಿಗೊಳಿಸುವ ಸಾಧನಗಳು. ಪ್ರಪಂಚದ ಸಮಸ್ಯೆಗಳನ್ನೆಲ್ಲ ಪರಿಹರಿಸುವುದು ನಮ್ಮಿಂದ ಸಾಧ್ಯವಿಲ್ಲ. ಆದರೆ ನಮ್ಮ ಬುದ್ಧಿಗೆ ತಿಳಿದಷ್ಟು ಕಾರ್ಯವನ್ನು ಮಾಡಿ, ಅಲ್ಪ ಪ್ರಮಾಣದಲ್ಲಾದರೂ ಪರಿಹಾರವನ್ನು ಪಡೆಯಬಹುದು. ಅತಿಯಾದ ದುಡಿತಮನುಷ್ಯನನ್ನು ದಣಿಸುತ್ತದೆ, ಶಕ್ತಿಯನ್ನು ಹೀರಿಬಿಡುತ್ತದೆ. ಬೇಗ ಮುಪ್ಪು ತರುತ್ತದೆ. ಆದ್ದರಿಂದ ನಮ್ಮ ಶಕ್ತಿಯ ಮಿತಿಯಲ್ಲಿ ದುಡಿಯೋಣ. ಇಷ್ಟೆಲ್ಲ ಮಾಡಿದ ಮೇಲೂ, ಬಂದದ್ದನ್ನು ಎದುರಿಸೋಣ. ಸುಖ, ದು:ಖ ಯಾವುದು ಬಂದರೂ ಸರಿಯೆ, ಯಾವುದೂ ಶಾಶ್ವತವಲ್ಲ ಎಂಬ ನಂಬಿಕೆಯಿಂದ, ಶಾಂತಿಯಿಂದ, ಮುಂದುವರೆಯೋಣ. ಯಾವುದು ನಮ್ಮ ಕೈಯ್ಯಲ್ಲಿಲ್ಲವೊ, ಯಾವುದಕ್ಕೆ ವಿವರಣೆ ಅಸಾಧ್ಯವೊ, ಅದನ್ನು ವಿಧಿಯ ಉಡುಗೊರೆ ಎಂದು ಭಾವಿಸೋಣ. ಈ ಎಲ್ಲ ಧಾವಂತಗಳ ನಡುವೆ ಅತ್ಯಂತ ಮುಖ್ಯವಾದದ್ದೆಂದರೆ ಮನಸ್ಸಿನ ಶಾಂತಿ. ಅದೊಂದು ಇಲ್ಲದಿದ್ದರೆ ಪ್ರಪಂಚದಲ್ಲಿ ಏನಿದ್ದರೂ ಸಂತೋಷವಿಲ್ಲ. ನಮ್ಮೆಲ್ಲ ಕ್ರಿಯೆಗಳ ಗಮ್ಯವೇ ಸಂತೋಷ, ತೃಪ್ತಿ. ಅದಿಲ್ಲದಿದ್ದರೆ ಏನಿದ್ದರೇನು? ಪ್ರಪಂಚದಲ್ಲಿ ಅಧಿಕಾರ, ಹಣ, ಸಂಪರ್ಕ, ಬುದ್ಧಿಮತ್ತೆ ಇದ್ದವರು ಅನೇಕ. ಆದರೆ ಆಂತರಿಕ ಶಾಂತಿಯನ್ನು ಹೊಂದಿದವರು ಕೆಲವೇ ಕೆಲವರು. ಅವರು ಮಾತ್ರ ಬಿಡುಗಡೆಯ ದಾರಿಯನ್ನು ಪಡೆದವರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಅಕ್ಟೋಬರ್ 6, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಏಕಾದಶಿ ಗಂ. 09-41 ನಕ್ಷತ್ರ: ಧನಿಷ್ಠಾ ಗಂ. 19-42 ಯೋಗ: ಶೂಲ ಗಂ. 26-20, ಕರಣ: ವಿಷ್ಟಿ ಗಂ. 09-41, ಕನ್ಯಾ ಮಾಸದ 19 ನೇ ದಿನ. ರಾಹುಕಾಲ : ಮಧ್ಯಾಹ್ನ 01-30 – 03:00 ಸೂರ್ಯೋದಯ : 06-24 ಸೂರ್ಯಾಸ್ತ : 06-13 ಮುಸ್ಲಿಂ ದಿನಾಂಕ : 09 ರಬಿಉಲ್ಲಾವಲ್, ದಿನ ವಿಶೇಷ : ಭಾರತ್ ಮಿಲಾಪ್, ಪಾಪಂಕುಶ (ಪಾಶಾಂಕುಶ) ಏಕಾದಶಿ, ಪ್ರಾಯಶ್ಚಿತ್ತ ದಿನ (ಯೋಮ್ ಕಿಪ್ಪೂರ್) ಜ್ಯೂಯಿಷ್, ಶೃಂಗೇರಿ ಶಾರದಾಂಬಾ ರಥೋತ್ಸವ. ಅದೃಷ್ಟ ಸಂಖ್ಯೆ : 3, 9

ಮೇಷ: ಬಂಧುಗಳೊಡನೆ ವಿವಾದವನ್ನು ಮಾಡಬೇಡಿ. ಮಾನಸಿಕ ಸ್ಥಿತಿಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಕಷ್ಟವಾಗಲಿದೆ. ನಿಮ್ಮ ಸಣ್ಣಬುದ್ಧಿಯಿಂದಾಗಿ ಸಮಾಜದಲ್ಲಿ ಜನರ ಅಪಹಾಸ್ಯಕ್ಕೆ ಕಾರಣವಾಗುವ ಸಾಧ್ಯತೆಗಳಿದೆ.

ವೃಷಭ: ನವೋದ್ಯಮಿಗಳಿಗೆ ಅನ್ಯರ ಸಹಾಯ ಸಹಕಾರ ಪ್ರಾಪ್ತಿಯಾಗಿ ವೃತ್ತಿಪರ ಹುಮ್ಮಸ್ಸು ಇಮ್ಮಡಿಗೊಳ್ಳುವುದು. ಸಂಜೆಯ ಸಮಯದಲ್ಲಿ ಪ್ರೀತಿ ಪಾತ್ರರೊಡನೆ ಕಾಲ ಕಳೆಯುವಿರಿ. ಕೃಷಿ ಉತ್ಪನ್ನಗಳಿಂದ ಉತ್ತಮ ಆದಾಯವಿದೆ.

ಮಿಥುನ: ಇತರರಲ್ಲಿ ನಿಮ್ಮ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು ಸೂಕ್ತವಾದ ಸಮಯ. ಲೇವಾದೇವಿ ವ್ಯವಹಾರದಲ್ಲಿ ಹೆಚ್ಚಿನ ಅನುಕೂಲ ಆಗಲಿದೆ. ಕೆಲಸದಲ್ಲಿ ಬಹಳ ದಿನಗಳಿಂದ ಸಮಸ್ಯೆ ಬಗೆಹರಿಯುವುದು.

ಕರ್ಕಾಟಕ: ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು ಹಾಗೂ ಅಧ್ಯಯನಶೀಲರಿಗೆ ಉತ್ತಮ ಜ್ಞಾನಾರ್ಜನೆ ಆಗುವುದು. ಇಂದಿನ ಯೋಜಿತ ಕಾರ್ಯದಲ್ಲಿ ವ್ಯತ್ಯಾಸಗಳು ಉಂಟಾಗಲಿದೆ.

ಸಿಂಹ: ಹಣಕಾಸಿನ ವ್ಯಾಮೋಹ, ಬಯಕೆ ಹೆಚ್ಚಾಗುವ ಪರಿಣಾಮ ಪಶ್ಚಾತಾಪಕ್ಕೆ ಕಾರಣವಾಗದಂತೆ ನೋಡಿಕೊಳ್ಳಿ. ವೃತ್ತಿ ನೈಪುಣ್ಯತೆಯಿಂದ ಉನ್ನತಾಧಿಕಾರಿಗಳಿಗಾಗಿ ನೇಮಕಗೊಳ್ಳುವಿರಿ. ಔಷಧಿ ಮಾರಾಟಗಾರರು ಜಾಗ್ರತೆವಹಿಸಿ.

ಕನ್ಯಾ: ನಿಮಗೆ ಎದುರಾಗಿರುವ ಕೌಟುಂಬಿಕ ಸಂದಿಗ್ಧ ಪರಿಸ್ಥಿತಿ ಮಾರ್ಗದರ್ಶಕರ ಸಲಹೆ ಪಡೆದು ಎದುರಿಸುವುದು, ನಿಭಾಯಿಸುವುದು ಒಳ್ಳೆಯದು. ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಗೊಂದಲಗಳು ನಿವಾರಣೆಯಾಗುತ್ತದೆ.

ತುಲಾ: ಸ್ವಪ್ರಯತ್ನದಿಂದ ಕೆಲಸಗಳನ್ನು ಸಾಧಿಸಿ ಕೊಳ್ಳುವಿರಿ. ಅನಿರೀಕ್ಷಿತವಾಗಿ ನಿಮ್ಮ ಶತ್ರುಗಳ ಬಣ್ಣ ಬಯಲಾಗುವುದು ನಿಮ್ಮ ಸಂತೋಷಕ್ಕೆ ಕಾರಣವಾಗುತ್ತದೆ. ಸಾಧ್ಯವಾದರೆ ಆಪ್ತರ ಕಷ್ಟಗಳ ಕಡೆಗೆ ಗಮನಹರಿಸುವುದು ಒಳ್ಳೆಯದು.

ವೃಶ್ಚಿಕ: ನಿಮ್ಮಲ್ಲಿರುವ ಮಾತಿನ ಚತುರತೆಯಿಂದ ನಿಮ್ಮ ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರುವುದು. ಪದವೀಧರರಿಗೆ ಉನ್ನತ ಶಿಕ್ಷಣಕ್ಕಾಗಿ ಉತ್ತಮವಾದ ಸ್ಥಳ ಲಭಿಸಲಿದೆ.

ಧನು: ಈ ದಿನದ ನಿಮ್ಮ ಅಲೋಚನೆಯಲ್ಲಿ ಸಹ ಉದ್ಯೋಗಿಗಳ ಯಾವುದೇ ತರಹದ ಒತ್ತಡಕ್ಕೆ ಮಣಿಯದೆ ಕೆಲಸದಲ್ಲಿ ಮುನ್ನುಗ್ಗಿ. ಜಯ ನಿಮ್ಮದಾಗಲಿದೆ. ಬಂಧುಗಳೊಂದಿಗೆ ಸಂತೋಷ ಕೂಟದಲ್ಲಿ ಭಾಗವಹಿಸುವಿರಿ.

ಮಕರ: ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಸಂಪಾದಿಸಿಕೊಳ್ಳುವ ಪ್ರಯತ್ನ ಮಾಡಬಹುದು. ಕಬ್ಬಿಣ ಸಿಮೆಂಟ್ ವ್ಯಾಪಾರಿಗಳಿಗೆ ಸಾಧಾರಣ ಲಾಭವಿರಲಿದೆ. ತಂದೆಯ ಅಭಿಪ್ರಾಯಗಳಿಗೆ ಬೆಲೆ ಕೊಡಿ.

ಕುಂಭ: ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯವನ್ನು ಹೊಂದುವಿರಿ. ನೂತನವಾಗಿ ಆರಂಭಿಸಿದ ವ್ಯವಹಾರದಲ್ಲಿ ಅನುಭವದ ಕೊರತೆಯಿಂದಾಗಿ ನಷ್ಟ ಸಂಭವಿಸಬಹುದು.

ಮೀನ: ದೈನಂದಿನ ಚಟುವಟಿಕೆಗಳಲ್ಲಿನ ವ್ಯತ್ಯಾಸಗಳಾಗುವುದು. ಅಮೂಲ್ಯವಾದ ವಸ್ತು, ವಿಚಾರದ ನಷ್ಟವು ಮನಸ್ಸಿಗೆ ನೋವನ್ನು ಉಂಟುಮಾಡಲಿದೆ. ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ಹೆಚ್ಚಿನ ಅಧ್ಯಯನ ಅಗತ್ಯವಾಗುತ್ತದೆ.

ಪದಬಂಧ 5100

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ಒಂದು ಸಂಖ್ಯೆಯನ್ನು ಇನ್ನೊಂದರಿಂದ ಭಾಗಿಸುವುದು (4)
5.ಮಲಯದಲ್ಲಿರುವ ಶ್ರೀಗಂಧ (4)
6.ಯಮನಿದ್ದಾಗ ಕಾಣಿಸಿದ ಸೂತ್ರ (3)
9.ಜನರ ನಡುವಿರುವ ಆಳು (3)
10.ಇದು ಕುದುರೆ ಮುಖ (5)
11.ತಡಸಲು ಹತ್ತಿರವಿರುವ ಸಮುದ್ರ (3)
12.ಕರದಿಂದ ಶುರುವಾಗಿರುವ ಉತ್ಸವ(3)
14.ಕನ್ನ ಹಾಕಿ ಕದ್ದೊಯ್ದ ಚಾಳೀಸು (4)
15.ಕೆಂಪು ಬಣ್ಣದ ಗುಲಾಬಿ (4)

ಮೇಲಿಂದ ಕೆಳಕ್ಕೆ

1. ಆ ಬಾಗಿಲಿನ ಬಳಿಯಿರುವ ನಿರ್ಭಾಗ್ಯ ಹೆಂಗಸು (4)
2.ದುಸ್ತರದಲ್ಲೇ ಮಡಿಕೆಯನ್ನು ಹುಡುಕಿ! (2)
3.ಜಯವನ್ನು ಗಳಿಸಿದ ಒಡೆಯ (4)
7.ಮಹಡಿಯಿಂದ ಕಾಣಿಸಿದ ಭವ್ಯ ಸೌಧ (3)
8.ಕಳವಳಪಟ್ಟು ತಿಂದಿರುವ ತುತ್ತು (3)
9.ಜನರ ಹತ್ತಿರವಿರುವ ಸೀತೆಯ ತಂದೆ (3)
11.ಕರುವಿಗೆ ತೋರಿದ ದಯೆ (4)
13.ಗಡಿಯ ಹತ್ತಿರ ತೋರಿದ ಅವಸರ (4)
15.ಉರಿಯುತ್ತಿರುವ ಇದ್ದಿಲು (2)



5099ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಗಂತುಕ 3.ಪರಿಣಾಮ
5.ಸರತಿ 6.ಹವನ
8.ಲೋಲಕ 9.ಪವಿತ್ರ
10.ಚುಂಬನ 11.ಕಣಜ
12.ಕಡಿಮೆ 14.ಬಸದಿ
16.ಕಡಿವಾಣ 17.ನಟ್ಟಿರುಳು

ಮೇಲಿಂದ ಕೆಳಕ್ಕೆ:
1.ಆಗ್ರಹ 2.ಕಸ
3.ಪತಿ 4.ಮರುಕ
7.ನಕ್ಷತ್ರಪುಂಜ 8.ಲೋಹ ಚುಂಬಕ
11.ಕನಕ 13.ಮೆದುಳು
14.ಬಣ 15.ದಿನ

ಸುಡೊಕು 5486

	2			6	7	4		
3		4					7	2
	7			4	8		6	3
	4			3			8	5
8		9		7				
	5		8		4		9	7
2				9		7	3	
		3					1	
6			4			5		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5485 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹430
ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹432

ಮುಂಬೈ ಧಾರಣೆ

ಶೇಂಗಾ

5–10-2022

ಜಾವಾ 70/80(ಹೊಸ)	11100-11150
ಜಾವಾ 80/90(ಹೊಸ)	10800-10850
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1660)
ಒಂದು ವಾರದ ಡೆಲಿವರಿ	1665 (1645)
ಸೋಯಾ ಕಚ್ಚಾ	1120 (1080)
ಪಾಮ್ ವಾರದ ಡೆಲಿವರಿ	895 (863)
ಸೂರ್ಯಕಾಂತಿ ಎಣ್ಣೆ ಕಚ್ಚಾ	1230 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,050 (50,250)
ಬೆಳ್ಳಿ ಕೆ.ಜಿ 59,950 (57,500)

ಆವರಣದಲ್ಲಿ ಸೋಮವಾರದ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

VAIKUNTA SAMARADHANE

N.A. CHANDU
(Dhamodhar Reddy)
11.08.1959 - 24.09.2022
Vaikunta Samaradhane on Thursday 6th Oct 2022
from 12:00 noon at Doddanekkundi, Bangalore.
Deeply Mourned by: Family and Friends

ತುರ್ತು ಸಾಲ ಖಾತರಿ ಯೋಜನೆ ● ಗರಿಷ್ಠ ಮಿತಿ ₹1,500 ಕೋಟಿ: ಹಣಕಾಸು ಸಚಿವಾಲಯ

ವಿಮಾನ ವಲಯ: ಸಾಲ ಮಿತಿ ಹೆಚ್ಚಳ

ನವದೆಹಲಿ (ಪಿಟಿಐ): ದೇಶಿ ವಿಮಾನಯಾನ ಕಂಪನಿಗಳಿಗೆ ತುರ್ತು ಸಾಲ ಖಾತರಿ ಯೋಜನೆಯಡಿ (ಇಸಿಎಲ್‌ಜಿಎಸ್) ಸಾಲದ ಮಿತಿಯನ್ನು ₹ 400 ಕೋಟಿಯಿಂದ ₹ 1,500 ಕೋಟಿಗೆ ಹೆಚ್ಚಿಸಲಾಗಿದೆ.

ಕೋವಿಡ್ ಸಾಂಕ್ರಾಮಿಕದಿಂದ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಉದ್ಯಮಕ್ಕೆ ನ್ಯಾಯಸಮ್ಮತವಾದ ಬಡ್ಡಿದರದಲ್ಲಿ, ಅಡಮಾನ ರಹಿತವಾಗಿ ಸಾಲ ಸೌಲಭ್ಯ ನೀಡಲು ಕೇಂದ್ರ ಹಣಕಾಸು ಸಚಿವಾಲಯವು ಈ ನಿರ್ಧಾರ ತೆಗೆದುಕೊಂಡಿದೆ.

ದೇಶದ ಆರ್ಥಿಕ ಬೆಳವಣಿಗೆಗೆ ಬಲಿಷ್ಠ ಮತ್ತು ದಕ್ಷ ನಾಗರಿಕ ವಿಮಾನಯಾನ ವಲಯದ ಅಗತ್ಯ ಇದೆ ಎನ್ನುವುದನ್ನು ಗುರುತಿಸಿ, ಹಣಕಾಸು ಸೇವೆಗಳ ಇಲಾಖೆಯು (ಡಿಎಫ್‌ಎಸ್) ಯೋಜನೆಗೆ ತಿದ್ದುಪಡಿ ತಂದಿದೆ. ಆ ಮೂಲಕ ವಿಮಾನಯಾನ ವಲಯಕ್ಕೆ ಸಾಲದ ಗರಿಷ್ಠ ಮಿತಿಯನ್ನು ಹೆಚ್ಚಿಸಲಾಗಿದೆ ಎಂದು ಬುಧವಾರ ಹೊರಡಿಸಿರುವ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಸಿಎಲ್‌ಜಿಎಸ್ 3.0 ಪ್ರಕಾರ, ವಿಮಾನಯಾನ ಕಂಪನಿಯು ಬಾಕಿ ಉಳಿಸಿಕೊಂಡಿರುವ ಸಾಲದ ಶೇ 100ರಷ್ಟು ಅಥವಾ ₹1,500 ಕೋಟಿ ಮೊತ್ತವನ್ನು ಪಡೆಯಲು ಅರ್ಹವಾಗಿವೆ. ಕಂಪನಿಯ ಮಾಲೀಕರ ಈಕ್ವಿಟಿ ಕೊಡುಗೆಯ ಆಧಾರದ ಮೇಲೆ ಸಾಲದ ಮೊತ್ತವು ನಿರ್ಧಾರ ಆಗಲಿದೆ ಎಂದು ಹೇಳಿದೆ.

ಮುಖ್ಯಾಂಶಗಳು

- ಆರ್ಥಿಕ ಸಂಕಷ್ಟದಲ್ಲಿ ವಿಮಾನ ಕಂಪನಿಗಳು
- ಕಂಪನಿಗಳಿಗೆ ಅಡಮಾನ ರಹಿತವಾಗಿ ಸಾಲ ಸೌಲಭ್ಯ

ವಿಮಾನ ಇಂಧನ ದರದಲ್ಲಿ ಗರಿಷ್ಠ ಏರಿಕೆ ಮತ್ತು ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಆಗಿರುವುದರಿಂದ ವಿಮಾನಯಾನ ಕಂಪನಿಗಳ ಕಾರ್ಯಾಚರಣಾ ವೆಚ್ಚದಲ್ಲಿ ಭಾರಿ ಏರಿಕೆ ಆಗುತ್ತಿದೆ. ಇದರಿಂದಾಗಿ ಕಂಪನಿಗಳಿಗೆ ಆರ್ಥಿಕ ಬಿಕ್ಕಟ್ಟು ಎದುರಾಗಿದೆ.

ಕೇಂದ್ರ ಸರ್ಕಾರವು ಇದೇ ಮಾರ್ಚ್‌ನಲ್ಲಿ ಯೋಜನೆಯಲ್ಲಿ ಕೆಲವು ಬದಲಾವಣೆ ತರುವ ಮೂಲಕ ವಿಮಾನಯಾನ ಕಂಪನಿಗಳಿಗೆ ಅವುಗಳ ಬಾಕಿ ಉಳಿಸಿಕೊಂಡಿರುವ ಸಾಲದ ಮೊತ್ತದ ಶೇ 50ರವರೆಗೆ ಸಾಲವನ್ನು ಪಡೆಯಲು ಆದರೆ ಆ ಮೊತ್ತವು ₹400 ಕೋಟಿ ದಾಟದಂತೆ ಮಿತಿ ಹೇರಿತ್ತು. ಇದೀಗ ಮತ್ತೆ ಯೋಜನೆಯಲ್ಲಿ ಬದಲಾವಣೆ ತರಲಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

₹50 ಸಾವಿರ ಕೋಟಿ ಇದ್ದ ಯೋಜನೆಯ ಒಟ್ಟು ಮೊತ್ತವನ್ನು ₹ 5 ಲಕ್ಷ ಕೋಟಿಗೆ ಹೆಚ್ಚಿಸಲು ಆಗಸ್ಟ್ 17ರಂದು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಯೋಜನೆಯಡಿ 2022ರ ಆಗಸ್ಟ್ 5ರವರೆಗೆ ಒಟ್ಟು ₹3.67 ಲಕ್ಷ ಕೋಟಿ ಮೌಲ್ಯದ ಸಾಲ ಮಂಜೂರು ಮಾಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಟ್ವಿಟರ್ ಖರೀದಿ: ಪತ್ರ ಬರೆದ ಮಸ್ಕ್

ನ್ಯೂಯಾರ್ಕ್ (ಎಪಿ): ಟೆಸ್ಲಾ ಸಿಇಒ ಇಲಾನ್ ಮಸ್ಕ್ ಅವರು ಟ್ವಿಟರ್ ಖರೀದಿಸುವುದಾಗಿ ಆ ಕಂಪನಿಗೆ ಪತ್ರ ಬರೆದಿದ್ದಾರೆ ಎಂದು ವರದಿಯೊಂದು ಹೇಳಿದೆ.

ಕಂಪನಿಯನ್ನು ₹ 3.41 ಲಕ್ಷ ಕೋಟಿಗೆ (44 ಬಿಲಿಯನ್ ಡಾಲರ್) ಖರೀದಿಸುವುದಾಗಿ ಅವರು ಟ್ವಿಟರ್‌ಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಖರೀದಿ ಒಪ್ಪಂದದಿಂದ ಹಿಂದೆ ಸರಿದಿರುವ ಮಸ್ಕ್ ಅವರ ವಿರುದ್ಧದ ಟ್ವಿಟರ್ ನ್ಯಾಯಾಲಯದ ಮೆಟ್ಟಿಲೇರಿದ್ದು, ಇದೇ ತಿಂಗಳಿನಲ್ಲಿ ವಿಚಾರಣೆ ಆರಂಭವಾಗಲಿದೆ.

ಡಿ–ಮಾರ್ಟ್ ವರಮಾನ ಹೆಚ್ಚಳ

ನವದೆಹಲಿ (ಪಿಟಿಐ): ಡಿ–ಮಾರ್ಟ್ ಮಳಿಗೆಗಳನ್ನು ನಿಯಂತ್ರಿಸುತ್ತಿರುವ ಅವೆನ್ಯು ಸೂಪರ್‌ಮಾರ್ಕೆಟ್ಸ್ ಲಿಮಿಟೆಡ್‌ನ ಕಾರ್ಯಾಚರಣಾ ವರಮಾನವು ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ₹10,385 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಕಾರ್ಯಾಚರಣಾ ವರಮಾನ ₹7,650 ಕೋಟಿ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ವರಮಾನವು ಶೇ 35.75ರಷ್ಟು ಹೆಚ್ಚಾಗಿದೆ. ತ್ರೈಮಾಸಿಕದ ಅಂತ್ಯಕ್ಕೆ ಕಂಪನಿಯ ಒಟ್ಟು ಮಳಿಗೆಗಳ ಸಂಖ್ಯೆ 302ಕ್ಕೆ ತಲುಪಿದೆ.

ಭಾರತದಲ್ಲಿ ಏರ್‌ಪಾಡ್ಸ್ ತಯಾರಿಕೆ?

ಬೆಂಗಳೂರು (ರಾಯಿಟರ್ಸ್): ಭಾರತದಲ್ಲಿ ಏರ್‌ಪಾಡ್ಸ್ ಮತ್ತು ಬೀಟ್ಸ್ ಹೆಡ್‌ಫೋನ್ ತಯಾರಿಸುವಂತೆ ಆ್ಯಪಲ್ ಕಂಪನಿಯು ತನ್ನ ಪೂರೈಕೆದಾರರಿಗೆ ಹೇಳಿದೆ ಎಂದು ನಿಕೇಯ್ ಸಂಸ್ಥೆ ವರದಿ ಮಾಡಿದೆ.

ಫಾಕ್ಸ್‌ಕಾನ್ ಕಂಪನಿಯು ಬೀಟ್ಸ್ ಹೆಡ್‌ಫೋನ್ ತಯಾರಿಸುವ ಸಿದ್ಧತೆ ನಡೆಸುತ್ತಿದ್ದು, ಏರ್‌ಪಾಡ್ಸ್ ಅನ್ನೂ ತಯಾರಿಸುವ ಭರವಸೆ ಇದೆ ಎಂದು ಮೂಲಗಳನ್ನು ಉಲ್ಲೇಖಿಸಿ ನಿಕೇಯ್ ವರದಿ ಹೇಳಿದೆ.

ನವೆಂಬರ್‌ನಿಂದ ದಿನಕ್ಕೆ 20 ಲಕ್ಷ ಬ್ಯಾರಲ್ ತೈಲ ಉತ್ಪಾದನೆ ಕಡಿತ

ಒಂದನೇ ಪುಟದಿಂದ...

ರಷ್ಯಾವು ಉಕ್ರೇನ್ ಮೇಲೆ ಯುದ್ಧ ಆರಂಭಿಸಿದ ಬಳಿಕ ಫೆಬ್ರುವರಿಯಲ್ಲಿ ಒಂದು ಬ್ಯಾರಲ್‌ಗೆ 140 ಡಾಲರ್‌ಗೆ ತಲುಪಿದ್ದ ಕಚ್ಚಾ ತೈಲ ದರವು ಅಕ್ಟೋಬರ್ 2ರಂದು ಒಂದು ಬ್ಯಾರಲ್‌ಗೆ 88.83 ಡಾಲರ್‌ಗೆ ಇಳಿಕೆ ಆಗಿದೆ. ಜಾಗತಿಕ ಆರ್ಥಿಕ ಹಿಂಜರಿತದ ಭೀತಿ ಮತ್ತು ತೈಲ ಬೇಡಿಕೆ ಇಳಿಕೆ ಕಾಣುವ ಆತಂಕದಿಂದಾಗಿ ಬ್ರೆಂಟ್ ಕಚ್ಚಾ ತೈಲ ದರವು ಕೆಲವು ತಿಂಗಳುಗಳಿಂದ ಇಳಿಮುಖವಾಗಿದೆ.

ಐರೋಪ್ಯ ಒಕ್ಕೂಟವು ರಷ್ಯಾದ ತೈಲ ಆಮದು ಮೇಲೆ ನಿಷೇಧ ಹೇರುವ ಆಲೋಚನೆಯಲ್ಲಿ ತೊಡಗಿವೆ. ಹೀಗಾಗಿ ತೈಲ ಉತ್ಪಾದನೆ ಕಡಿತದಿಂದ ರಷ್ಯಾಗೆ ಹೆಚ್ಚಿನ ಪ್ರಯೋಜನ ಆಗುವ ನಿರೀಕ್ಷೆ ಇದೆ.

ರಷ್ಯಾದ ತೈಲ ಆಮದಿನ ಮೇಲೆ ಐರೋಪ್ಯ ಒಕ್ಕೂಟದ ನಿಷೇಧವು ಡಿಸೆಂಬರ್‌ನಿಂದ ಜಾರಿಗೆ ಬರಲಿದೆ. ಆ ಬಳಿಕ ಮಾರುಕಟ್ಟೆಗೆ ಪೂರೈಕೆ ಆಗಲಿರುವ ತೈಲದ ಪ್ರಮಾಣವು ಇನ್ನಷ್ಟು ಇಳಿಕೆ ಆಗಲಿದೆ.

ಐರೋಪ್ಯ ಒಕ್ಕೂಟವು ರಷ್ಯಾದ ಮೇಲೆ ಕೆಲವು ಹೊಸ ಒಪ್ಪಂದಗಳಿಗೆ ಒಪ್ಪಿಗೆ ನೀಡಿದ್ದು ಅದರಲ್ಲಿ ರಷ್ಯಾ ತೈಲದ ಮೇಲೆ ದರ ಮಿತಿ ಹೇರುವುದು ಸೇರಿರುವ ಸಾಧ್ಯತೆ ಇದೆ.

‘ಅಭಿವೃದ್ಧಿಶೀಲ ದೇಶಗಳಿಗೆ ಸಮಸ್ಯೆ’

ಒಪೆಕ್ + ನ ನಿರ್ಧಾರದಿಂದ ಭಾರತದಂತಹ ಅಭಿವೃದ್ಧಿಶೀಲ ದೇಶಗಳಿಗೆ ಸಮಸ್ಯೆ ಆಗಲಿದೆ. ಇನ್ನಷ್ಟು ಹಣದುಬ್ಬರಕ್ಕೆ ಕಾರಣವಾಗಿ ಆರ್ಥಿಕ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ’ ಎಂದು ಎಫ್‌ಕೆಸಿಸಿಐನ ಮಾಜಿ ಅಧ್ಯಕ್ಷ ಡಿ. ಮುರಳೀಧರ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಪರಿಣಾಮದ ತೀವ್ರತೆಯನ್ನು ಈಗಲೇ ಅಂದಾಜು ಮಾಡುವುದು ಕಷ್ಟ. ಏಕೆಂದರೆ, ತೈಲ ಉತ್ಪಾದನೆ ಕಡಿತದಿಂದ ಜಾಗತಿಕ ಮಾರುಕಟ್ಟೆಗೆ ತೈಲ ಪೂರೈಕೆ ಕಡಿಮೆ ಆಗಲಿದೆ. ಅದರಿಂದ ಜಾಗತಿಕ ಮಟ್ಟದಲ್ಲಿ ಸಮಸ್ಯೆ ತಲೆದೂರಲಿದೆ’ ಎಂದು ಅವರು ಹೇಳಿದರು.

‘ಗ್ರಾಹಕರು ಈಗಷ್ಟೇ ಗರಿಷ್ಠ ದರಕ್ಕೆ ಇಂಧನ ಖರೀದಿಸುವುದರಿಂದ ಬಿಡುಗಡೆ ಪಡೆದಿದ್ದಾರೆ. ಹೀಗಿರುವಾಗ ಈ ಉತ್ಪಾದನೆ ಕಡಿತವು ಒಳ್ಳೆಯ ಬೆಳವಣಿಗೆ ಅಲ್ಲ’ ಎಂದು ಒನಡಾ ಕಂಪನಿಯ ವಿಶ್ಲೇಷಕ ಕ್ರೇಗ್ ಎಲಾರ್ಮ್ ಅಭಿಪ್ರಾಯಪಟ್ಟಿದ್ದಾರೆ.

ಸೋನಿ, ಜೀ ವಿಲೀನ: ಷರತ್ತುಬದ್ಧ ಒಪ್ಪಿಗೆ

ನವದೆಹಲಿ (ಪಿಟಿಐ): ಸೋನಿ ಮತ್ತು ಜೀ ಕಂಪನಿಗಳ ವಿಲೀನ ಒಪ್ಪಂದಕ್ಕೆ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಷರತ್ತುಬದ್ಧ ಒಪ್ಪಿಗೆ ನೀಡಿದೆ.

ಈ ವಿಲೀನದ ಬಳಿಕ ದೇಶದ ಅತಿದೊಡ್ಡ ಮಾಧ್ಯಮ ಸಮೂಹ ಸೃಷ್ಟಿಯಾಗಲಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ ಎರಡೂ ಕಂಪನಿಗಳು ವಿಲೀನ ಒಪ್ಪಂದವನ್ನು ಘೋಷಿಸಿದ್ದವು. ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ ಮತ್ತು ಬೆಂಗಾಲ್ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಕಂಪನಿಗಳನ್ನು ಸೋನಿ ಕಾರ್ಪೊರೇಷನ್ ಒಡೆತನದ ಕಲ್ವರ್ ಮ್ಯಾಕ್ಸ್ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ನೊಂದಿಗೆ ಕೆಲವು ಬದಲಾವಣೆಗಳೊಂದಿಗೆ ವಿಲೀನಗೊಳಿಸಲು ಒಪ್ಪಿಗೆ ನೀಡಲಾಗಿದೆ ಎಂದು ಸಿಸಿಐ ಟ್ವೀಟರ್‌ನಲ್ಲಿ ತಿಳಿಸಿದೆ.

ವಿಲೀನ ಒಪ್ಪಂದದಲ್ಲಿ ಯಾವೆಲ್ಲಾ ಬದಲಾವಣೆಗಳಿಗೆ ಸಿಸಿಐ ಸೂಚನೆ ನೀಡಿದೆ ಎನ್ನುವುದು ಸದ್ಯಕ್ಕೆ ತಿಳಿದುಬಂದಿಲ್ಲ.

ಕಂಪನಿಗಳ ಬಾಹ್ಯ ವಾಣಿಜ್ಯ ಸಾಲ ಶೇ 4.6ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಭಾರತದ ಕಂಪನಿಗಳು ಆಗಸ್ಟ್‌ನಲ್ಲಿ ವಿದೇಶದಿಂದ ಪಡೆದಿರುವ ವಾಣಿಜ್ಯ ಸಾಲದ (ಇಸಿಬಿ) ಮೊತ್ತವು ಹಿಂದಿನ ವರ್ಷದ ಆಗಸ್ಟ್‌ಗೆ ಹೋಲಿಸಿದರೆ ಶೇ 4.6ರಷ್ಟು ಹೆಚ್ಚಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮಾಹಿತಿಯ ಪ್ರಕಾರ, 2021ರ ಆಗಸ್ಟ್‌ನಲ್ಲಿ ಕಂಪನಿಗಳು ₹23,227 ಕೋಟಿ ಮೊತ್ತದ ಸಾಲ ಪಡೆದಿದ್ದವು. 2022ರ ಆಗಸ್ಟ್‌ನಲ್ಲಿ ₹24,287 ಕೋಟಿಗೆ ಏರಿಕೆ ಆಗಿದೆ.

ಒಟ್ಟು ಮೊತ್ತದಲ್ಲಿ ₹20,137 ಕೋಟಿ ಸಾಲವನ್ನು ಆಟೊಮೆಟಿಕ್ ರೂಟ್ ಮೂಲಕ ಪಡೆಯಲಾಗಿದೆ. ಉಳಿದ ಮೊತ್ತವನ್ನು ಮಸಾಲಾ ಬಾಂಡ್‌ಗಳನ್ನು ನೀಡುವ ಮೂಲಕ ಸಂಗ್ರಹಿಸಲಾಗಿದೆ ಎಂದು ಅದು ಮಾಹಿತಿ ನೀಡಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್, ಫುಲ್ಲರ್‌ಟನ್ ಇಂಡಿಯಾ ಕ್ರೆಡಿಟ್ ಕೊ ಲಿಮಿಟೆಡ್, ಟೊಯೋಟ ಫೈನಾನ್ಶಿಯಲ್ ಸರ್ವೀಸ್, ಐಐಎಫ್‌ಎಲ್ ಫೈನಾನ್ಸ್, ಟಾಟಾ ಸಿಯಾ ಏರ್‌ಲೈನ್ಸ್, ಹುಂಡೈ ಟ್ರಾನ್ಸಿಸ್ ಇಂಡಿಯಾ ಕಂಪನಿಗಳು ಬಾಹ್ಯ ವಾಣಿಜ್ಯ ಸಾಲದ ಮೂಲಕ ಬಂಡವಾಳ ಸಂಗ್ರಹಿಸಿಕೊಂಡಿವೆ ಎಂದು ತಿಳಿಸಿದೆ.

ಸಕ್ಕರೆ ರಫ್ತು ದಾಖಲೆ ಏರಿಕೆ

ನವದೆಹಲಿ (ಪಿಟಿಐ): 2021–22ನೇ ಮಾರುಕಟ್ಟೆ ವರ್ಷದಲ್ಲಿ ಸಕ್ಕರೆ ರಫ್ತು ಶೇ 57ರಷ್ಟು ಹೆಚ್ಚಾಗಿದ್ದು ದಾಖಲೆಯ 109.8 ಲಕ್ಷ ಟನ್‌ಗೆ ತಲುಪಿದೆ ಎಂದು ಸರ್ಕಾರವು ಬುಧವಾರ ಮಾಹಿತಿ ನೀಡಿದೆ.

ಈ ಮಾರುಕಟ್ಟೆ ವರ್ಷಕ್ಕೆ ಒಟ್ಟು 112 ಲಕ್ಷ ಟನ್ ಸಕ್ಕರೆ ರಫ್ತು ಮಾಡಲು ಸರ್ಕಾರ ಅವಕಾಶ ನೀಡಿತ್ತು. ಸಕ್ಕರೆ ಕಾರ್ಖಾನೆಗಳು 109.8 ಲಕ್ಷ ಟನ್‌ಗಳಷ್ಟನ್ನು ಮಾತ್ರವೇ ರಫ್ತು ಮಾಡಿವೆ.

2021–22ನೇ ಮಾರುಕಟ್ಟೆ ವರ್ಷದಲ್ಲಿ ಭಾರತವು ಸಕ್ಕರೆ ಉತ್ಪಾದನೆ ಮತ್ತು ಬಳಕೆಯಲ್ಲಿ ವಿಶ್ವದ ಅತಿದೊಡ್ಡ ದೇಶವಾಗಿದೆ. ಅಲ್ಲದೆ, ಸಕ್ಕರೆ ರಫ್ತಿನಲ್ಲಿ ವಿಶ್ವದ ಎರಡನೇ ಅತಿದೊಡ್ಡ ದೇಶವಾಗಿ ಹೊರಹೊಮ್ಮಿದೆ ಎಂದು ಆಹಾರ ಸಚಿವಾಲಯವು ತಿಳಿಸಿದೆ.

ಮಾರುಕಟ್ಟೆ ವರ್ಷದಲ್ಲಿ 5 ಸಾವಿರ ಲಕ್ಷ ಟನ್‌ಗಳಷ್ಟು ದಾಖಲೆ ಪ್ರಮಾಣದಲ್ಲಿ ಕಬ್ಬು ಉತ್ಪಾದನೆ ಆಗಿದ್ದು, ಅದರಲ್ಲಿ 394 ಲಕ್ಷ ಟನ್ ಸಕ್ಕರೆ ಉತ್ಪಾದನೆ ಆಗಿದೆ. ಇದರಲ್ಲಿ 35 ಲಕ್ಷ ಟನ್ ಸಕ್ಕರೆಯನ್ನು ಎಥೆನಾಲ್ ಉತ್ಪಾದನೆಗೆ ಬಳಸಲಾಗಿದೆ ಎಂದು ಹೇಳಿದೆ.

ರಫ್ತು ವಿವರ (ಲಕ್ಷ ಟನ್‌ಗಳಲ್ಲಿ)	
2018-29	38
2019-20	59
2020-21	70
2021-22	109.8

2021–22ನೇ ಮಾರುಕಟ್ಟೆ ವರ್ಷದಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ನೀಡಬೇಕಿರುವ ಬಾಕಿ ಮೊತ್ತವು ₹ 6 ಸಾವಿರ ಕೋಟಿಯಷ್ಟು ಇದೆ. ಕಾರ್ಖಾನೆಗಳು ಒಟ್ಟಾರೆ ₹1.18 ಲಕ್ಷ ಕೋಟಿ ಬಾಕಿ ಪಾವತಿಸಬೇಕಿತ್ತು. ಅದರಲ್ಲಿ ₹1.12 ಲಕ್ಷ ಕೋಟಿ ಮೊತ್ತವನ್ನು ಈಗಾಗಲೇ ರೈತರಿಗೆ ಪಾವತಿ ಮಾಡಿವೆ.

ಜಿಯೊ 5ಜಿ: 4 ನಗರಗಳಲ್ಲಿ ಪರೀಕ್ಷಾರ್ಥ ಚಾಲನೆ

ನವದೆಹಲಿ (ಪಿಟಿಐ): ಜಿಯೊ ಕಂಪನಿಯು ದೆಹಲಿ, ಮುಂಬೈ, ಕೋಲ್ಕತ್ತ ಮತ್ತು ವಾರಾಣಸಿ ನಗರಗಳಲ್ಲಿ ಬುಧವಾರದಿಂದ 5ಜಿ ಸೇವೆಗಳಿಗೆ ಪರೀಕ್ಷಾರ್ಥ ಚಾಲನೆ ನೀಡಿದೆ.

5ಜಿ ಸೇವೆಗಳನ್ನು ಬಳಸುವಂತೆ ‘ಜಿಯೊ ಟ್ರೂ 5ಜಿ ವೆಲ್‌ಕಮ್ ಆಫರ್’ ಅಡಿಯಲ್ಲಿ ಗ್ರಾಹಕರಿಗೆ ಆಹ್ವಾನ ನೀಡಲಾಗುವುದು. ಚಂದಾದಾರರು ಪ್ರತಿ ಸೆಕೆಂಡ್‌ಗೆ 1ಗಿಗಾಬೈಟ್‌ವರೆಗೆ ಅನಿಯಮಿತ 5ಜಿ ಡೇಟಾ ಪಡೆಯಲಿದ್ದಾರೆ ಎಂದು ಕಂಪನಿಯು ತಿಳಿಸಿದೆ.

‘ಜಿಯೊ ವೆಲ್‌ಕಮ್ ಆಫರ್’ ಆಹ್ವಾನ ಪಡೆದ ಗ್ರಾಹಕರು ಜಿಯೊ ಸಿಮ್ ಅಥವಾ ಹ್ಯಾಂಡ್‌ಸೆಟ್ ಬದಲಿಸುವ ಅಗತ್ಯ ಇಲ್ಲ. ಜಿಯೊ ಟ್ರೂ 5ಜಿ ಸೇವೆಗಳಿಗೆ ಸ್ವಯಂಚಾಲಿತವಾಗಿ ಅಪ್‌ಗ್ರೇಡ್ ಆಗಲಿದೆ. ಗ್ರಾಹಕರು ತಮ್ಮ ಹಾಲಿ 4ಜಿ ಪ್ಲಾನ್‌ಗೆ ಹಣ ಪಾವತಿ ಮಾಡಬೇಕಷ್ಟೆ. ಪರೀಕ್ಷಾರ್ಥ ಬಳಕೆಯ ವೇಳೆ 5ಜಿ ಡೇಟಾಗಾಗಿ ಯಾವುದೇ ಹೆಚ್ಚುವರಿ ಮೊತ್ತ ಪಾವತಿಸಬೇಕಿಲ್ಲ ಎಂದು ಹೇಳಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611225266/ 9611225388

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

WANTED
M/s. SAMKRG PISTONS AND RINGS LTD - HYDERABAD
Manufacturing automobile Pistons and Piston Rings for more than 35 years.
REQUIRES
AREA SALES OFFICER'S
Based at Bangalore & Hubli to cover Karnataka State. Fresh or prior experience in Automobile Spare Parts and Kannada language proficiency are preferred. Age: 22 to 30 years.
Interested candidates may send their resume to:
e-mail:mktg@samkrg.com
Contact No. 9440067320, 040 - 23735578 / 87
Visit Our Website: www.samkrgpistonsandrings.com

ಬೇಕಾಗಿದ್ದಾರೆ: ವೃದ್ಧರನ್ನು, ರೋಗಿಗಳನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಮತ್ತು ತರಬೇತಿ ನೀಡಲಾಗುವುದು. ಸಂಬಳ: 15,000/- ರಿಂದ 20,000/-. ಆಸಕ್ತರು ಸಂಪರ್ಕಿಸಿ: 9620985000, 9620557000, 080-41115200. ಮೆರಿಟ್ಟಾ ಕೇರ್, ದೊಡ್ಡ ಬಾಣಸವಾಡಿ, ಬೆಂಗಳೂರು-43.

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 16.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ, 26.10.2022 5ದಿನಗಳು ತಮಿಳುನಾಡು ರಾಜ್ಯಪ್ರವಾಸ ಅಹೋಬಲಂ,ಶ್ರೀಶೈಲಂ ಮಹಾನಂದಿ,ಮಂತ್ರಾಲಯ, 03.11.2022 15ದಿನಗಳು ಅಖಂಡ ಮಧ್ಯಪ್ರದೇಶರಾಜ್ಯ ಪ್ರವಾಸ ಅಮರಕಂಠಕ,ಚಿತ್ರಕೂಟ ಮಯ್ಯಾರ್ ಸಹಿತ, 04.11.2022 13ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ ಕಚ್‌ಬುಜ್ ಸಹಿತ, 24.11.2022,28.11.2022 12/15/21ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್‌ಸಿಸ್ಟರ್ಸ್) ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮೀಝೋರಾಂ. 8073824856 9206979202 6366322639

12.10.2022 ರಿಂದ 11ದಿನಗಳ ದೆಹಲಿ, ಆಗ್ರಾ- ಪ್ರಯಾಗ- ಕಾಶಿ- ಅಯೋಧ್ಯೆ, ನೈಮಿಷಾರಣ್ಯ ಇತ್ಯಾದಿ. 6.11.2022 ರಿಂದ 11ದಿನಗಳ ಸೋಮನಾಥ್, ನಾಗೇಶಂ, ದ್ವಾರಕ, ಉಜ್ಜಯಿನಿ, ಓಂಕಾರೇಶ್ವರ್ ಇತ್ಯಾದಿ. ವೈಷ್ಣವಿ ಟೂರ್ಸ್ ಅಂಡ್ ಟ್ರಾವೆಲ್ಸ್, ಗಾಂಧಿಬಜಾರ್, ಬೆಂಗಳೂರು. 26914273, 9448683374

05.11.2022ರಿಂದ 13ದಿನಗಳು ಎಸಿ.ಬಸ್ಸು, ಎಸಿ.ರೂಂನೊಂದಿಗೆ ಪಂಚರಾಮಕ್ಷೇತ್ರ ಸಮೇತ ಭದ್ರಾಚಲಂ,ಅನ್ನಾವರಂ,ವಿಶಾಖಪಟ್ಟಣ,ವಾಸವಿಪೆನ್ನಗೊಂಡ ದ್ವಾರಕಾ,ತಿರುಮಲ`ಇತ್ಯಾದಿ. 27.11.2022ರಿಂದ 8ದಿನಗಳು ವಿಮಾನ, ಎಸಿ.ರೂಂ,`ಎಸಿ.ಬಸ್ಸು ನೊಂದಿಗೆ ಕಾಶಿ,ಗಯಾ, ನೈಮಿಷಾರಣ್ಯ,ಅಯೋಧ್ಯ ಅಹಮದಾಬಾದ್ ವಿಷ್ಣನ್ ಟ್ರಾವೆಲ್ ಲೈನ್ಸ್ #164/3`ಅರ್.ವಿ.ರಸ್ತೆ, ಬೆಂಗಳೂರು.ಸಂಪರ್ಕಿಸಿ: 8105657052/ 9480182865

ವಿಮಾನ/ A/C ಬಸ್ಸಿನಲ್ಲಿ 18.11.2022 ರಿಂದ 16 ದಿನಗಳ ಅಷ್ಟ ಜ್ಯೋತಿರ್ಲಿಂಗ ಗುಜರಾತ್ ಮಧ್ಯಪ್ರದೇಶ ಮಹಾರಾಷ್ಟ್ರ,ಮೌಂಟ್‌ಅಬು ಇತ್ಯಾದಿ. ಊಟ ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289 9686721196

★ಶ್ರೇಯಸ್ ಟೂರ್ಸ್★ 14.10.2022, 18.11.2022 8ದಿನಗಳು ಭೂತಾನ್ ರಾಷ್ಟ್ರ ಪ್ರವಾಸ ತಿಂಪೂ,ಫಾರೋ, ಪುನಕಾ ಫೂಚಲಿಂಗ್ ಗೌಹಾತಿ. 8073824856/ 9206979202/ 6366322639

08.10.2022, 2 ದಿನಗಳು ಈಶಫೌಂಡೇಶನ್, 112 ಅಡಿಆದಿಯೋಗಿ, ಪ್ರತ್ಯಂಗಿರದೇವಿ ಇತ್ಯಾದಿ. 15.10.2022, 2 ದಿನಗಳು ಕೆಮ್ಮಣ್ಣುಗುಂಡಿ, ಮುಳ್ಳಯ್ಯನಗಿರಿ, ಹೆಬ್ಬೆಫಾಲ್ಸ್, ಬಾಬಾಬುಡನಗಿರಿ ಇತ್ಯಾದಿ. 9481433157.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ಕ್ವಾಂಟಮ್ ಇನ್‌ಫಾರ್ಮೇಷನ್ ಕ್ಷೇತ್ರದಲ್ಲಿ ಸಂಶೋಧನೆ

ಭೌತವಿಜ್ಞಾನ: ಮೂವರಿಗೆ ನೊಬೆಲ್ ಪುರಸ್ಕಾರ

ಸ್ಟಾಕ್‌ಹೋಮ್ (ಎಪಿ): ‘ಕ್ವಾಂಟಮ್ ಇನ್‌ಫಾರ್ಮೇಷನ್’ ಕ್ಷೇತ್ರದಲ್ಲಿನ ಸಂಶೋಧನೆಗಾಗಿ ಮೂವರು ವಿಜ್ಞಾನಿಗಳು ಈ ವರ್ಷದ ಭೌತವಿಜ್ಞಾನದ ನೊಬೆಲ್ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ.

ಅಲೇನ್ ಆಸ್ಪೆಕ್ಟ್

ಫ್ರೆಂಚ್ ವಿಜ್ಞಾನಿ ಅಲೇನ್ ಆಸ್ಪೆಕ್ಟ್, ಅಮೆರಿಕದ ಜಾನ್ ಎಫ್. ಕ್ಲಾಸರ್ ಹಾಗೂ ಆಸ್ಟ್ರಿಯಾದ ವಿಜ್ಞಾನಿ ಆ್ಯಂಟನ್ ಜೆಲಿಂಗರ್ ಅವರು ನೊಬೆಲ್ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ ಎಂದು ರಾಯಲ್ ಸ್ವೀಡಿಷ್ ಅಕಾಡೆಮಿ ತಿಳಿಸಿದೆ.

‘ಅತ್ಯಂತ ಸೂಕ್ಷ್ಮಕಣಗಳಾದ ಫೋಟಾನ್‌ಗಳನ್ನು ಜೋಡಿಸುವ ವಿಧಾನವನ್ನು ಈ ವಿಜ್ಞಾನಿಗಳು ಸಂಶೋಧಿಸಿದ್ದು, ಭೌತವಿಜ್ಞಾನದ ಈ ಶಾಖೆಗೆ ಕ್ವಾಂಟಮ್ ಇನ್‌ಫಾರ್ಮೇಷನ್ ವಿಜ್ಞಾನ ಎನ್ನಲಾಗುತ್ತದೆ. ಮಾಹಿತಿಯನ್ನು ಅತ್ಯಂತ ಸುರಕ್ಷಿತವಾಗಿ ವರ್ಗಾವಣೆ ಮಾಡಲು, ಕ್ವಾಂಟಮ್ ಕಂಪ್ಯೂಟಿಂಗ್ ಹಾಗೂ ಸಂವೇದಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕ್ವಾಂಟಮ್ ಇನ್‌ಫಾರ್ಮೇಷನ್‌ಅನ್ನು ವ್ಯಾಪಕವಾಗಿ ಅನ್ವಯಿಸಲಾಗುತ್ತದೆ’ ಎಂದು ನೊಬೆಲ್ ಆಯ್ಕೆ ಸಮಿತಿ ಸದಸ್ಯೆ ಇವಾ ಒಲ್‌ಸನ್ ಅವರು ತಿಳಿಸಿದ್ದಾರೆ.



ಜಾನ್ ಕ್ಲಾಸರ್

ಆ್ಯಂಟನ್ ಜೆಲಿಂಗರ್

ರಸಾಯನವಿಜ್ಞಾನ: ನೊಬೆಲ್ ಪುರಸ್ಕಾರ ಹಂಚಿಕೊಂಡ ಮೂವರು ವಿಜ್ಞಾನಿಗಳು

ಸ್ಟಾಕ್‌ಹೋಮ್ (ಎಪಿ): ರಸಾಯನವಿಜ್ಞಾನದಲ್ಲಿ ಕೈಗೊಂಡ ಸಂಶೋಧನೆಗಾಗಿ ಮೂವರು ವಿಜ್ಞಾನಿಗಳನ್ನು ಈ ವರ್ಷದ ನೊಬೆಲ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ರಾಯಲ್ ಸ್ವೀಡಿಷ್ ಅಕಾಡೆಮಿ ಬುಧವಾರ ಘೋಷಿಸಿದೆ.

ವಿಜ್ಞಾನಿಗಳಾದ ಕ್ಯಾರೊಲಿನ್ ಬರ್ಟೋಜಿ, ಮಾರ್ಟಿನ್ ಮೆಲ್ಡಲ್ ಹಾಗೂ ಕೆ.ಬ್ಯಾರಿ ಶಾರ್ಪ್‌ಲೆಸ್ ಅವರು ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಅಕಾಡೆಮಿಯ ಪ್ರಧಾನ ಕಾರ್ಯದರ್ಶಿ ಹ್ಯಾನ್ಸ್ ಎಲ್ಲೆಗ್ರೆನ್ ಹೇಳಿದ್ದಾರೆ.

‘ಪರಮಾಣುಗಳನ್ನು ಕ್ಷಿಪ್ರವಾಗಿ ಪ್ರತ್ಯೇಕಿಸುವ ಪ್ರಕ್ರಿಯೆ ಬಗ್ಗೆ ಈ ಮೂವರು ಗಮನಾರ್ಹ ಸಂಶೋಧನೆ ನಡೆಸಿದ್ದಾರೆ. ಈ ವಿಜ್ಞಾನಿಗಳು ಅಭಿವೃದ್ಧಿಪಡಿಸಿರುವ ಈ ತಂತ್ರವು ಕ್ಯಾನ್ಸರ್ ಔಷಧಿಗಳ ತಯಾರಿಕೆ ಹಾಗೂ ಡಿಎನ್‌ಎ ವಿಶ್ಲೇಷಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ’ ಎಂದು ಅವರು ತಿಳಿಸಿದ್ದಾರೆ.

ಬ್ಯಾರಿ ಶಾರ್ಪ್‌ಲೆಸ್

ಮಾರ್ಟಿನ್ ಮೆಲ್ಡಲ್

ಕ್ಯಾರೊಲಿನ್ ಬರ್ಟೋಜಿ

ಬರ್ಟೋಜಿ ಅವರು ಕ್ಯಾಲಿಫೋರ್ನಿಯಾದ ಸ್ಟ್ಯಾನ್‌ಫೋರ್ಡ್ ವಿ.ವಿ., ಮೆಲ್ಡಲ್ ಅವರು ಡೆನ್ಮಾರ್ಕ್‌ನ ಕೋಪೆನ್‌ಹೆಗನ್ ವಿ.ವಿ ಹಾಗೂ ಶಾರ್ಪ್‌ಲೆಸ್ ಅವರು ಕ್ಯಾಲಿಫೋರ್ನಿಯಾದ ಸ್ಕ್ರಿಪ್ಸ್ ರಿಸರ್ಚ್ ಎಂಬ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶಾರ್ಪ್‌ಲೆಸ್ ಅವರು 2001ರಲ್ಲಿಯೂ ನೊಬೆಲ್ ಪುರಸ್ಕಾರಕ್ಕೆ ಭಾಜನರಾಗಿದ್ದರು. ಎರಡನೇ ಬಾರಿಗೆ ನೊಬೆಲ್ ಪುರಸ್ಕಾರಕ್ಕೆ ಆಯ್ಕೆಯಾಗಿರುವ ಐದನೇ ವಿಜ್ಞಾನಿ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದಾರೆ.

ನೊಬೆಲ್ ಶಾಂತಿ ಪುರಸ್ಕಾರ: ನೆಚ್ಚಿನ ಸ್ಪರ್ಧಿಗಳ ಪಟ್ಟಿಯಲ್ಲಿ ಜುಬೈರ್, ಸಿನ್ಹಾ

ನ್ಯೂಯಾರ್ಕ್ (ಪಿಟಿಐ): ಆಲ್ಟ್ ನ್ಯೂಸ್ ಸಹ ಸಂಸ್ಥಾಪಕರಾದ ಪ್ರತೀಕ್ ಸಿನ್ಹಾ ಮತ್ತು ಮೊಹಮ್ಮದ್ ಜುಬೈರ್ ಹಾಗೂ ಭಾರತದ ಲೇಖಕ ಹರ್ಷ ಮಂದರ್ ಅವರು ಈ ವರ್ಷದ ನೊಬೆಲ್ ಶಾಂತಿ ಪುರಸ್ಕಾರ ಪಡೆಯುವ ನೆಚ್ಚಿನ ಸ್ಪರ್ಧಿಗಳೆನಿಸಿದ್ದು, ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ನಾರ್ವೆಯ ಒಸ್ಲೊದಲ್ಲಿ ಇದೇ 7ರಂದು ಪ್ರಶಸ್ತಿ ಪುರಸ್ಕೃತರ ಹೆಸರು ಪ್ರಕಟಿಸಲಾಗುತ್ತದೆ. ಜಾಗತಿಕ ಮಟ್ಟದ ಪ್ರತಿಷ್ಠಿತ ಗೌರವ ಯಾರಿಗೆ, ಯಾವ ಸಂಸ್ಥೆಗೆ ಒಲಿಯಬಹುದು ಎಂಬುದರ ಕುರಿತು ಈಗಾಗಲೇ ಚರ್ಚೆಗಳು ಶುರುವಾಗಿವೆ.

ದಿ ಪೀಸ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಓಸ್ಲೊ (ಪಿಆರ್‌ಐಒ) ನಿರ್ದೇಶಕ ಹೆನ್ರಿಕ್ ಉರ್ದಾಲ್ ಬಿಡುಗಡೆ ಮಾಡಿರುವ ಸಂಭಾವ್ಯರ ಪಟ್ಟಿಯಲ್ಲಿ ಜುಬೈರ್, ಪ್ರತೀಕ್ ಹಾಗೂ ಮಂದರ್ ಅವರ ಹೆಸರುಗಳಿವೆ. ಮಂದರ್ ಅವರು 2017ರಲ್ಲಿ ‘ಕರ್ವಾನ್ ಇ ಮೊಹಬ್ಬತ್’ ಎಂಬ ಅಭಿಯಾನ ಆರಂಭಿಸಿದ್ದರು.



ಹರ್ಷ ಮಂದರ್

ಮೊಹಮ್ಮದ್ ಜುಬೈರ್

ನಾಗರಿಕರು ಮಾಡಿರುವ ನಾಮನಿರ್ದೇಶನ, ಬುಕ್ಕಿಗಳ ಊಹೆ ಹಾಗೂ ಪೀಸ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಓಸ್ಲೊ ಆಯ್ಕೆ ಮಾಡಿರುವ ಸಂಭಾವ್ಯರ ಪಟ್ಟಿಯ ಆಧಾರದಲ್ಲಿ ಟೈಮ್ ನಿಯತಕಾಲಿಕೆಯು ಈ ಬಾರಿ ಪ್ರಶಸ್ತಿ ಗೆಲ್ಲಬಲ್ಲವರ ಪಟ್ಟಿಯೊಂದನ್ನು ಸಿದ್ಧಪಡಿಸಿದೆ. ಇದರಲ್ಲಿ ಜುಬೈರ್ ಮತ್ತು ಪ್ರತೀಕ್ ಅವರ ಜೊತೆಗೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್‌ಸ್ಕಿ, ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿ, ಬೆಲಾರಸ್‌ನ ಹೋರಾಟಗಾರ್ತಿ ಸ್ವಿಯಾಟ್ಲಾನಾ ಸಿಖಾನೌಸ್ಕಾಯ, ಡಬ್ಲ್ಯುಎಚ್‌ಒ, ರಷ್ಯಾದ ಪ್ರತಿಪಕ್ಷ ನಾಯಕ ಅಲೆಕ್ಸಿ ನವಲ್ನಿ, ಸ್ವೀಡನ್‌ನ ಪರಿಸರ ಹೋರಾಟಗಾರ್ತಿ ಗ್ರೆತಾ ಥನ್‌ಬರ್ಗ್ ಅವರ ಹೆಸರು ಮುಂಚೂಣಿಯಲ್ಲಿವೆ.

ಟ್ವೀಟ್ ಮೂಲಕ ಧಾರ್ಮಿಕ ಭಾವನೆಗೆ ಧಕ್ಕೆ ತಂದ ಆರೋಪದಡಿ ಜುಬೈರ್ ಅವರನ್ನು ದೆಹಲಿ ಪೊಲೀಸರು ಬಂಧಿಸಿದ್ದರು. ಅವರ ಬಂಧನಕ್ಕೆ ಜಗತ್ತಿನೆಲ್ಲೆಡೆ ವ್ಯಾಪಕ ವಿರೋಧ ವ್ಯಕ್ತವಾಗಿತ್ತು.

ಉಕ್ರೇನ್‌ನ 4 ಪ್ರದೇಶಗಳು ರಷ್ಯಾಕ್ಕೆ: ಪುಟಿನ್

ಕೀವ್ (ಎಪಿ): ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಉಕ್ರೇನ್‌ನ ನಾಲ್ಕು ಪ್ರದೇಶಗಳನ್ನು ರಷ್ಯಾಕ್ಕೆ ಸೇರ್ಪಡೆ ಮಾಡಿಕೊಂಡಿರುವುದಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಸಹಿ ಹಾಕಿದ್ದಾರೆ.

ರಷ್ಯಾ ಸರ್ಕಾರದ ಅಧಿಕೃತ ವೆಬ್‌ಸೈಟ್‌ನಲ್ಲಿ ಬುಧವಾರ ಬೆಳಿಗ್ಗೆ ಈ ಕಡತಗಳನ್ನು ಪ್ರಕಟಿಸಲಾಗಿದೆ.

ಡೊನೆಸ್ಕ್, ಲುಹಾನ್‌ಸ್ಕ್, ಝುಪೊರಿಝಿಯಾ ಮತ್ತು ಕೆರ್ಸಾನ್ ಪ್ರದೇಶಗಳನ್ನು ರಷ್ಯಾಕ್ಕೆ ಸೇರ್ಪಡೆ ಮಾಡಿಕೊಳ್ಳುವುದಕ್ಕೆ ರಷ್ಯಾ ಸಂಸತ್ತಿನ ಎರಡೂ ಸದನಗಳು ಇತ್ತೀಚೆಗೆ ಅನುಮೋದನೆ ನೀಡಿದ್ದವು. ಇದಕ್ಕೂ ಮುನ್ನ, ಈ ನಾಲ್ಕು ಪ್ರದೇಶಗಳಲ್ಲಿ ಈ ಸಂಬಂಧ ಜನಾಭಿಪ್ರಾಯ ಸಂಗ್ರಹಿಸಲಾಗಿತ್ತು.

ರಷ್ಯಾದ ನಡೆಯನ್ನು ತಳ್ಳಿಹಾಕಿರುವ ಉಕ್ರೇನ್ ಅಧ್ಯಕ್ಷರ ಕಾರ್ಯಾಲಯ, ಪುಟಿನ್ ಸಹಿ ಮಾಡಿರುವ ಕಡತಗಳಿಗೆ ಬೆಲೆಯೇ ಇಲ್ಲ ಎಂದು ಹೇಳಿದೆ.

‘ದಕ್ಷಿಣ ಕೆರ್ಸಾನ್ ಪ್ರದೇಶದಲ್ಲಿ ರಷ್ಯಾ ವಶಪಡಿಸಿಕೊಂಡಿದ್ದ ಏಳು ಗ್ರಾಮಗಳನ್ನು ನಾವು ಮರಳಿ ವಶಕ್ಕೆ ಪಡೆದಿದ್ದೇವೆ. ಅಲ್ಲಿ ಉಕ್ರೇನ್‌ನ ಧ್ವಜಗಳನ್ನು ಹಾರಿಸಲಾಗಿದೆ’ ಎಂದು ಕೀವ್‌ನ ಸೇನಾ ಪಡೆ ಬುಧವಾರ ತಿಳಿಸಿದೆ.

ಆಘಾತದಲ್ಲಿ ಸಿಖ್ ಕುಟುಂಬದ ಸದಸ್ಯರು

ಭಾರತೀಯರ ಅಪಹರಣ: ಶಂಕಿತ ವಶಕ್ಕೆ

ಹೋಶಿಯಾರ್‌ಪುರ್ (ಪಂಜಾಬ್)/ ಲಾಸ್ ಎಂಜಲೀಸ್ (ಪಿಟಿಐ): ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಎಂಟು ತಿಂಗಳ ಮಗು ಸೇರಿ ಭಾರತೀಯ ಮೂಲದ ಸಿಖ್ ಕುಟುಂಬದ ನಾಲ್ವರನ್ನು ಅಪಹರಿಸಿರುವ ಪ್ರಕರಣ ಸಂಬಂಧ 48 ವರ್ಷದ ವ್ಯಕ್ತಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

ಶಂಕಿತನನ್ನು ಜೀಸಸ್ ಮ್ಯಾನ್ಯುಯೆಲ್ ಸಲ್ಗಾಡೊ ಎಂದು ಗುರುತಿಸಲಾಗಿದೆ. ಈತ ಆತ್ಮಹತ್ಯೆಗೆ ಯತ್ನಿಸಿದ್ದು, ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ಅವರು ತಿಳಿಸಿದ್ದಾರೆ.

ಇದೇ ವೇಳೆ, ನಾಪತ್ತೆಯಾದವರ ಸುಳಿವು ಇನ್ನೂ ಲಭ್ಯವಾಗಿಲ್ಲ. ಮಂಗಳವಾರ ಸಂತ್ರಸ್ತರೊಬ್ಬರ ಬ್ಯಾಂಕ್ ಎಟಿಎಂ ಕಾರ್ಡ್ ಬಳಕೆ ಮಾಡಿರುವುದು ಪತ್ತೆಯಾಗಿದೆ ಎಂದು ತಿಳಿಸಿದ್ದಾರೆ. ಅಪಹರಣ ವಿಷಯ ಅವರ ಸಂಬಂಧಿಕರನ್ನು ಆಘಾತಕ್ಕೆ ಒಳಪಡಿಸಿದೆ. ವಿಷಯ ತಿಳಿದು ಜಸ್ದೀಪ್ ಪೋಷಕರು ಆಘಾತಕ್ಕೆ ಒಳಗಾಗಿದ್ದಾರೆ ಎಂದು ನೆರೆಹೊರೆಯವರಾದ ಚರಣ್ ಜಿತ್ ಸಿಂಗ್ ಹೇಳಿದ್ದಾರೆ.

ಸೋಮವಾರ ಕ್ಯಾಲಿಫೋರ್ನಿಯಾದ ಮೆರ್ಸೆಡ್ ಕೌಂಟಿಯಲ್ಲಿ ಭಾರತೀಯ ಮೂಲದ ನಾಲ್ವರನ್ನು ಅಪಹರಿಸಲಾಗಿತ್ತು. 8 ತಿಂಗಳ ಮಗು ಆರೋಹಿ ಧೇರಿ, ಜಸ್ಲೀನ್ ಕೌರ್ (27), ಜಸ್ದೀಪ್ ಸಿಂಗ್ (36) ಮತ್ತು ಅಮನ್‌ದೀಪ್ ಸಿಂಗ್ (39) ಅಪಹರಣಕ್ಕೆ ಒಳಗಾದವರು.

ಅಮೆರಿಕದಲ್ಲಿ ನಾಪತ್ತೆಯಾದ ಭಾರತೀಯ ಮೂಲದ ಸಿಖ್ ಕುಟುಂಬವರು –ಪಿಟಿಐ ಚಿತ್ರ

ತೆಲಂಗಾಣ ರಾಷ್ಟ್ರ ಸಮಿತಿ ಹೆಸರು 'ಭಾರತ ರಾಷ್ಟ್ರ ಸಮಿತಿ' ಎಂದು ಮರುನಾಮಕರಣ

ರಾಷ್ಟ್ರ ರಾಜಕಾರಣಕ್ಕೆ ಕೆಸಿಆರ್ ಮುನ್ನುಡಿ

ಹೈದರಾಬಾದ್ (ಪಿಟಿಐ): 2024ರ ಲೋಕಸಭಾ ಚುನಾವಣೆಗೂ ಮುನ್ನ ರಾಷ್ಟ್ರ ರಾಜಕಾರಣದ ಮೇಲೆ ದೃಷ್ಟಿ ಹಾಯಿಸಿರುವ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರು, ತಮ್ಮ ಪಕ್ಷ ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಹೆಸರನ್ನು 'ಭಾರತ ರಾಷ್ಟ್ರ ಸಮಿತಿ' (ಬಿಆರ್‌ಎಸ್) ಎಂದು ಬದಲಿಸಿದ್ದಾರೆ. ತೆಲಂಗಾಣದ ಆಚೆಗೂ ಪಕ್ಷವನ್ನು ವಿಸ್ತರಿಸುವುದು ಅವರ ಈ ನಡೆಯ ಹಿಂದಿನ ಮುಖ್ಯ ಉದ್ದೇಶ.

ಆಂಧ್ರಪ್ರದೇಶದಿಂದ ವಿಭಜಿಸಿ ಪ್ರತ್ಯೇಕ ತೆಲಂಗಾಣ ರಾಜ್ಯ ರಚಿಸಬೇಕು ಎಂಬ ಉದ್ದೇಶದಿಂದ ಹೋರಾಟ ಆರಂಭಿಸಿ 21 ವರ್ಷಗಳು ಕಳೆದ ಬಳಿಕ, ಕೆಸಿಆರ್ ಅವರು ರಾಷ್ಟ್ರ ರಾಜಕಾರಣಕ್ಕೆ ಧುಮುಕಿದ್ದಾರೆ. ಬುಧವಾರ ನಡೆದ ಟಿಆರ್‌ಎಸ್ ಸಾಮಾನ್ಯ ಸಭೆಯಲ್ಲಿ ಪಕ್ಷಕ್ಕೆ ಮರುನಾಮಕರಣ ಮಾಡುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಈ ನಡೆಯ ಮೂಲಕ, ರಾಷ್ಟ್ರ ಮಟ್ಟದಲ್ಲಿ ಸಮಾನ ಮನಸ್ಕ ವಿರೋಧ ಪಕ್ಷಗಳನ್ನು ಒಂದುಗೂಡಿಸಿ, ನೇತೃತ್ವ ವಹಿಸಿಕೊಳ್ಳುವ ಮಹತ್ವಾಕಾಂಕ್ಷಿ ಯತ್ನಕ್ಕೆ ಕೆಸಿಆರ್ ಕೈ ಹಾಕಿದ್ದಾರೆ. ಕೆಸಿಆರ್ ನಡೆಯನ್ನು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಸ್ವಾಗತಿಸಿದ್ದು, ಬಿಜೆಪಿ ಹಾಗೂ ಕಾಂಗ್ರೆಸ್ ಟೀಕಿಸಿವೆ.

ಇದೇ ಏಪ್ರಿಲ್‌ನಲ್ಲಿ ನಡೆದಿದ್ದ ಟಿಆರ್‌ಎಸ್ ಪಕ್ಷದ ಸಂಸ್ಥಾಪನಾ ದಿನದಲ್ಲಿ ಈ ಕುರಿತು ನಿರ್ಧಾರ ತೆಗೆದುಕೊಳ್ಳಲಾಗಿತ್ತು. ತನ್ನ ರಾಜಕೀಯ ಲಾಭಕ್ಕಾಗಿ ಕೋಮು ಭಾವನೆಗಳನ್ನು ದುರ್ಬಳಕೆ ಮಾಡುಕೊಳ್ಳುತ್ತಿರುವ ಬಿಜೆಪಿಯಿಂದ ದೇಶವನ್ನು ರಕ್ಷಿಸಬೇಕಾದರೆ ರಾಷ್ಟ್ರ ರಾಜಕಾರಣದಲ್ಲಿ ಮುಖ್ಯ ಪಾತ್ರ ವಹಿಸಬೇಕಾದ ಅಗತ್ಯವಿದೆ ಎಂದು ಪಕ್ಷ ಅಭಿಪ್ರಾಯಪಟ್ಟಿತ್ತು.

ಹೈದರಾಬಾದ್‌ನಲ್ಲಿ ಬುಧವಾರ ನಡೆದ ಟಿಆರ್‌ಎಸ್ ಸಾಮಾನ್ಯ ಸಭೆಯಲ್ಲಿ ಕೈಗೊಂಡ ಪಕ್ಷದ ಮರುನಾಮಕರಣ ನಿರ್ಣಯಕ್ಕೆ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಸಹಿ ಹಾಕಿದರು. ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಇದ್ದರು–ಪಿಟಿಐ ಚಿತ್ರ

ತೆಲಂಗಾಣದ ಅಸ್ತಿತ್ವವನ್ನು ಕೆಸಿಆರ್ ಕೊಂದಿದ್ದಾರೆ. ರಾಜಕೀಯ ದುರಾಸೆಗಾಗಿ ಹಾಗೂ ಕುಟುಂಬ ವ್ಯಾಜ್ಯಕ್ಕೆ ಅಂತ್ಯ ಹಾಡುವುದಕ್ಕಾಗಿ ಮರುನಾಮಕರಣ ಮಾಡಿದ್ದಾರೆ
ರೇವಂತ್ ರೆಡ್ಡಿ, ತೆಲಂಗಾಣ ಕಾಂಗ್ರೆಸ್ ಘಟಕದ ಅಧ್ಯಕ್ಷ

ಕೆಸಿಆರ್ ರಾಷ್ಟ್ರ ಮಟ್ಟದ ರಾಜಕೀಯಕ್ಕೆ ಹೋಗುವುದು ದುರದೃಷ್ಟಕರ. ತಮ್ಮ ಸರ್ಕಾರವನ್ನು ನಡೆಸಲು ಹೆಣಗಾಡುತ್ತಿರುವ ಅವರ ಈ ಯತ್ನವು ವ್ಯರ್ಥ ಸಾಹಸ
ಕೆ. ಕೃಷ್ಣ ಸಾಗರ್ ರಾವ್, ತೆಲಂಗಾಣ ಬಿಜೆಪಿ ಘಟಕದ ಮುಖ್ಯಸ್ಥ

ಕಾರ್ಯಸೂಚಿ ಏನು?

- ಕೆಸಿಆರ್ ಈ ಹಿಂದೆ ಘೋಷಿಸಿದ್ದಂತೆ, ರೈತರಿಗೆ ಉಚಿತ ವಿದ್ಯುತ್ ಸೇರಿ ರೈತಪರ ಕಾರ್ಯಕ್ರಮಗಳು ಬಿಆರ್‌ಎಸ್ ಪಕ್ಷದ ಕಾರ್ಯಸೂಚಿಯ ಕೇಂದ್ರ ಬಿಂದುವಾಗಿರಲಿವೆ
- ತೆಲಂಗಾಣದಲ್ಲಿ ಜಾರಿಗೊಳಿಸಿರುವ ರೈತ ಬಂಧು, ದಲಿತ ಬಂಧು ಮೊದಲಾದ ಕಲ್ಯಾಣ ಕಾರ್ಯಕ್ರಮಗಳನ್ನು ಬಿಆರ್‌ಎಸ್ ರಾಷ್ಟ್ರ ಮಟ್ಟದಲ್ಲಿ ಪ್ರಚುರಪಡಿಸುವ ಸಾಧ್ಯತೆಯಿದೆ

ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ, ವಿಸಿಕೆ ಪಕ್ಷದ ಮುಖಂಡ ಟಿ. ತಿರುಮಾವಲವನ್ ಸಮ್ಮುಖದಲ್ಲಿ ಪಕ್ಷಕ್ಕೆ ಮರುನಾಮಕರಣ ಮಾಡುವ ನಿರ್ಣಯವನ್ನು ಕೆಸಿಆರ್ ಮಂಡಿಸಿದರು. ಪಕ್ಷದ ಮುಖಂಡರು ಚಪ್ಪಾಳೆ ತಟ್ಟಿ ಇದನ್ನು ಸ್ವಾಗತಿಸಿದರು. 'ಕೆಸಿಆರ್ ಜಿಂದಾಬಾದ್' ಘೋಷಣೆ ಮೊಳಗಿತು. ತೆಲಂಗಾಣ ಭವನದ ಹೊರಗಡೆ ನೆರೆದಿದ್ದ ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. 'ಕೆಸಿಆರ್ ದೇಶದ ನಾಯಕ, ಪ್ರಿಯ ಭಾರತವೇ ಕೆಸಿಆರ್ ಬರುತ್ತಿದ್ದಾರೆ' ಎಂಬ ಬರಹವುಳ್ಳ ಪೋಸ್ಟರ್‌ಗಳು ಕಾಣಿಸಿಕೊಂಡವು.

ಮರುನಾಮಕರಣದಿಂದ ಪಕ್ಷದ ಚಟುವಟಿಕೆಗಳು ದೇಶದಾದ್ಯಂತ ವಿಸ್ತರಣೆಯಾಗಲಿದ್ದು, ಇದಕ್ಕೆ ತಕ್ಕಂತೆ ಪಕ್ಷದ ಸಂವಿಧಾನವನ್ನು ತಿದ್ದುಪಡಿ ಮಾಡಲಾಗುವುದು ಎಂದು ರಾವ್ ಹೇಳಿದರು. ಕಳೆದ ಒಂದು ವರ್ಷದಿಂದ ಬಿಜೆಪಿಯ ಪ್ರಮುಖ ಟೀಕಾಕಾರರಾಗಿ ಗುರುತಿಸಿಕೊಂಡಿರುವ ಕೆಸಿಆರ್ ಅವರು ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರದ ವಿರುದ್ಧದ ತಮ್ಮ ವಾಗ್ದಾಳಿಯನ್ನು ಇನ್ನಷ್ಟು ಮೊನಚುಗೊಳಿಸುವ ಸಾಧ್ಯತೆಯಿದೆ.

ಮುಂದಿನ ವರ್ಷ ನಡೆಯಲಿರುವ ತೆಲಂಗಾಣ ವಿಧಾನಸಭಾ ಚುನಾವಣೆ ಹಾಗೂ ಅದರ ಮರುವರ್ಷ ನಡೆಯಲಿರುವ ಲೋಕಸಭೆಯ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಕೆಸಿಆರ್ ಅವರ ಈ ನಡೆ ಮಹತ್ವ ಪಡೆದಿದೆ. ಟಿಆರ್‌ಎಸ್ ಪಕ್ಷದ ಬಣ್ಣ ಹಾಗೂ ಚಿಹ್ನೆಯನ್ನು ರಾಷ್ಟ್ರೀಯ ಪಕ್ಷದಲ್ಲೂ ಉಳಿಸಿಕೊಳ್ಳಲಾಗುವುದು ಎಂದು ತೆಲಂಗಾಣದ ಸಚಿವ ಇ.ದಯಾಕರ್ ರಾವ್ ಹೇಳಿದ್ದಾರೆ.

'ಜೆಡಿಎಸ್–ಬಿಆರ್‌ಎಸ್ ಮೈತ್ರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಪಕ್ಷವು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ನೇತೃತ್ವದ 'ಭಾರತ್ ರಾಷ್ಟ್ರ ಸಮಿತಿ' (ಬಿಆರ್‌ಎಸ್) ಪಕ್ಷದ ಜತೆಗೂಡಿ ಮುಂದಿನ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳನ್ನು ಎದುರಿಸಲಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌. ಡಿ. ಕುಮಾರಸ್ವಾಮಿ ಘೋಷಿಸಿದ್ದಾರೆ.

ತಮ್ಮ ಪಕ್ಷದ ಎಲ್ಲ ಶಾಸಕರೊಂದಿಗೆ ಹೈದರಾಬಾದ್‌ಗೆ ತೆರಳಿದ್ದ ಅವರು, ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಪಕ್ಷವನ್ನು 'ಭಾರತ್ ರಾಷ್ಟ್ರ ಸಮಿತಿ' ಎಂಬ ಹೆಸರಿನಡಿ ರಾಷ್ಟ್ರೀಯ ಪಕ್ಷವನ್ನಾಗಿ ಘೋಷಿಸಲು ಬುಧವಾರ ಅಲ್ಲಿ ನಡೆದ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಬೆಂಗಳೂರಿಗೆ ಹಿಂದಿರುಗುವ ಮುನ್ನ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ಜೆಡಿಎಸ್ ಮತ್ತು ಬಿಆರ್‌ಎಸ್ ಮಿತ್ರಪಕ್ಷಗಳಾಗಿ ಕೆಲಸ ಮಾಡಲಿವೆ. ಜೆಡಿಎಸ್ ಮತ್ತು ಟಿಆರ್‌ಎಸ್ ಮೊದಲಿನಿಂದಲೂ ಸಹಜ ಮಿತ್ರ ಪಕ್ಷಗಳಾಗಿದ್ದವು. ಚಂದ್ರಶೇಖರ ರಾವ್ ಅವರೊಂದಿಗೆ ಜತೆಗೂಡಿ ಕೆಲಸ ಮಾಡುತ್ತೇವೆ' ಎಂದರು.

'2023ರ ವಿಧಾನಸಭಾ ಚುನಾವಣೆ ಹಾಗೂ 2024ರ ಲೋಕಸಭಾ ಚುನಾವಣೆಯಲ್ಲಿ ಎರಡೂ ಪಕ್ಷಗಳು ಒಟ್ಟಾಗಿ ಕೆಲಸ ಮಾಡಲಿವೆ. ಕೇರಳ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಮುಕ್ತ ರಾಜಕೀಯ ವಾತಾವರಣ ಇದೆ. ಅದೇ ಸ್ಥಿತಿಯನ್ನು ನಿರ್ಮಾಣ ಮಾಡಲು ನಾನು ಮತ್ತು ಚಂದ್ರಶೇಖರ ರಾವ್ ನಿರ್ಧರಿಸಿದ್ದೇವೆ' ಎಂದು ಕುಮಾರಸ್ವಾಮಿ ಹೇಳಿದರು.

'ಡಿಎಂಕೆ ನಾಯಕ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸೇರಿದಂತೆ ಇನ್ನೂ ಹಲವು ಪಕ್ಷಗಳ ನಾಯಕರು ಬಿಆರ್‌ಎಸ್ ಜತೆ ಕೈಜೋಡಿಸುವ ವಿಶ್ವಾಸವಿದೆ. ಕರ್ನಾಟಕದಲ್ಲಿ ಮುಂದಿನ ವಿಧಾನಸಭಾ ಚುನಾವಣೆ ಬಳಿಕ ಬಿಜೆಪಿ, ಕಾಂಗ್ರೆಸ್ ಹೊರತಾದ ಪೂರ್ಣ ಬಹುಮತದ ಸರ್ಕಾರದ ರಚನೆಯ ದಿಕ್ಕಿನಲ್ಲಿ ಜೆಡಿಎಸ್–ಬಿಆರ್‌ಎಸ್ ದೃಢವಾಗಿ ಕೆಲಸ ಮಾಡಲಿವೆ' ಎಂದು ತಿಳಿಸಿದರು.

'ಪಾಕ್ ಜೊತೆ ಮಾತುಕತೆ ಪ್ರಶ್ನೆಯೇ ಇಲ್ಲ'

ಬಾರಾಮುಲ್ಲಾ ರ‍್ಯಾಲಿಯಲ್ಲಿ ಭಾಗಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ

ಬಾರಾಮುಲ್ಲಾ, ಜಮ್ಮು ಮತ್ತು ಕಾಶ್ಮೀರ (ಪಿಟಿಐ): 'ಪಾಕಿಸ್ತಾನದ ಜೊತೆ ಮಾತುಕತೆ ನಡೆಸುವ ಪ್ರಶ್ನೆಯೇ ಇಲ್ಲ. ನರೇಂದ್ರ ಮೋದಿ ಸರ್ಕಾರವು ಭಯೋತ್ಪಾದನೆಯನ್ನು ಸಹಿಸುವುದಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಬುಧವಾರ ಇಲ್ಲಿ ಹಮ್ಮಿಕೊಂಡಿದ್ದ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಮೋದಿ ಸರ್ಕಾರವು ಜಮ್ಮು ಮತ್ತು ಕಾಶ್ಮೀರದಿಂದ ಭಯೋತ್ಪಾದನೆಯನ್ನು ತೊಡೆದುಹಾಕಿ, ದೇಶದ ಅತ್ಯಂತ ಶಾಂತಿಯುತ ನೆಲೆಯನ್ನಾಗಿ ನಿರ್ಮಾಣ ಮಾಡಲಿದೆ' ಎಂದಿದ್ದಾರೆ.

'ಭಯೋತ್ಪಾದನೆಯಿಂದ ಯಾರಿಗಾದರೂ ಲಾಭವಾಗಿದೆಯೇ. ಉಗ್ರ ಚಟುವಟಿಕೆಗಳಿಂದಾಗಿ 1990ರಿಂದ ಈವರೆಗೆ ಜಮ್ಮು ಮತ್ತು ಕಾಶ್ಮೀರದಲ್ಲಿ 42 ಸಾವಿರ ಮಂದಿ ಜೀವಕಳೆದುಕೊಂಡಿದ್ದಾರೆ' ಎಂದು ಹೇಳಿದರು.

'ಅಬ್ದುಲ್ಲಾ (ನ್ಯಾಷನಲ್ ಕಾನ್ಫರೆನ್ಸ್), ಮುಫ್ತಿ (ಪಿಡಿಪಿ) ಹಾಗೂ ನೆಹರೂ–ಗಾಂಧಿ (ಕಾಂಗ್ರೆಸ್) ಕುಟುಂಬದವರು ಸ್ವಾತಂತ್ರ್ಯಾನಂತರ ಹಲವು ಬಾರಿ ಜಮ್ಮು ಮತ್ತು ಕಾಶ್ಮೀರದಲ್ಲಿ ಆಡಳಿತ ನಡೆಸಿದ್ದಾರೆ. ಆದರೆ ರಾಜ್ಯವನ್ನು ಅಭಿವೃದ್ಧಿಪಡಿಸಲು ಯಾರೂ ಪ್ರಯತ್ನಿಸಲಿಲ್ಲ. ನಾಗರಿಕರ ಶ್ರೇಯೋಭಿವೃದ್ಧಿಗೂ ಶ್ರಮಿಸಲಿಲ್ಲ. ಮೂರೂ ಕುಟುಂಬಗಳು ದುರಾಡಳಿತ ನಡೆಸಿದ್ದವು. ಅವರ ಆಡಳಿತಾವಧಿಯಲ್ಲಿ ಭ್ರಷ್ಟಾಚಾರ ಮಿತಿ ಮೀರಿತ್ತು' ಎಂದು ವಾಗ್ದಾಳಿ ನಡೆಸಿದ್ದಾರೆ.

'ಪಾಕಿಸ್ತಾನದೊಂದಿಗೆ ನಾವು ಮಾತುಕತೆ ನಡೆಸಬೇಕೆಂದು ಕೆಲ ವ್ಯಕ್ತಿಗಳು ಹೇಳಿದ್ದಾರೆ. ಆ ರಾಷ್ಟ್ರದ ಜೊತೆ ನಾವೇಕೆ ಮಾತನಾಡಬೇಕು. ಆ ದೇಶದೊಂದಿಗೆ ಮಾತುಕತೆ ನಡೆಸುವ ಪ್ರಶ್ನೆಯೇ ಇಲ್ಲ. ನಾವು ಬಾರಾಮುಲ್ಲಾ ಮತ್ತು ಕಾಶ್ಮೀರದ ಜನರೊಂದಿಗೆ ಮಾತನಾಡುತ್ತೇವೆ. ಭಯೋತ್ಪಾದನೆಯನ್ನು ಬುಡ ಸಮೇತ ಕಿತ್ತು ಹಾಕುತ್ತೇವೆ. ಕೆಲವರು ಆಗಾಗ್ಗೆ ಪಾಕಿಸ್ತಾನದ ಕುರಿತು ಮಾತನಾಡುತ್ತಾರೆ. ಪಾಕ್ ಆಕ್ರಮಿತ ಕಾಶ್ಮೀರದ ಎಷ್ಟು ಹಳ್ಳಿಗಳಲ್ಲಿ ವಿದ್ಯುತ್ ಸಂಪರ್ಕವಿದೆ ಎಂಬುದನ್ನು ತಿಳಿದುಕೊಳ್ಳಲು ಬಯಸುತ್ತೇನೆ. ಹಿಂದಿನ ಮೂರು ವರ್ಷಗಳಲ್ಲಿ ನಾವು ಕಾಶ್ಮೀರದ ಎಲ್ಲಾ ಗ್ರಾಮಗಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸಿದ್ದೇವೆ' ಎಂದೂ ಹೇಳಿದ್ದಾರೆ.


ಜೆಇಎಂ ಉಗ್ರರೊಂದಿಗೆ ಹೋರಾಡಿ ಮೃತಪಟ್ಟ ಎಸ್‌ಪಿಒ ಮುದಸ್ಸಿರ್ ಶೇಖ್ ಅವರ ಕುಟುಂಬದವರನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬುಧವಾರ ಭೇಟಿ ಮಾಡಿದರು –ಪಿಟಿಐ ಚಿತ್ರ

ಪಹಾಡಿಗೆ ಎಸ್‌ಟಿ ಮೀಸಲಾತಿ: ಶಾ ಭರವಸೆ

ಶ್ರೀನಗರ: ಮುಂಬರುವ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕಣಿವೆ ರಾಜ್ಯಕ್ಕೆ ಮೂರು ದಿನಗಳ ಕಾಲ ಪ್ರವಾಸ ಕೈಗೊಂಡಿದ್ದ ಅಮಿತ್ ಶಾ ಅವರು ವಿವಿಧ ಸಮುದಾಯಗಳ ಮುಖಂಡರ ಜೊತೆ ಸಭೆ ನಡೆಸುವ ಮೂಲಕ ಎಲ್ಲರ ವಿಶ್ವಾಸ ಗಳಿಸಲು ಪ್ರಯತ್ನಿಸಿದ್ದಾರೆ.

ಪಹಾಡಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವ ಭರವಸೆಯನ್ನೂ ನೀಡಿದ್ದಾರೆ. ಜಮ್ಮು–ಕಾಶ್ಮೀರದಲ್ಲಿ ಪಹಾಡಿಗಳ ಒಟ್ಟು ಸಂಖ್ಯೆಯು 6 ಲಕ್ಷದಷ್ಟಿದೆ. ಇದರಲ್ಲಿ ಹಿಂದೂಗಳ ಸಂಖ್ಯೆ ಶೇ 55.

'ಮತದಾರರ ಪಟ್ಟಿ ಸಿದ್ಧಪಡಿಸುವ ಹಾಗೂ ಇತರ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿವೆ' ಎಂದು ಶಾ ತಿಳಿಸಿದ್ದಾರೆ.

ವಿ.ವಿಗಳಲ್ಲಿ ರ‍್ಯಾಗಿಂಗ್ ತಡೆಗೆ ಮಾರ್ಗಸೂಚಿ

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ಭಯದ ವಾತಾವರಣವನ್ನು ತೊಡೆದುಹಾಕಲು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಅದರಲ್ಲಿ ರ‍್ಯಾಗಿಂಗ್ ವಿರೋಧಿ ಸಮಿತಿ ರಚನೆ, ವಿದ್ಯಾರ್ಥಿಗಳೊಂದಿಗೆ ನಿಯಮಿತ ಸಂವಹನ ಮತ್ತು ಸಮಾಲೋಚನೆ ಹಾಗೂ ವಿದ್ಯಾರ್ಥಿನಿಲಯಗಳಿಗೆ ಹಠಾತ್ ಭೇಟಿ ಮುಂತಾದವು ಸೇರಿವೆ.

ವಿದ್ಯಾರ್ಥಿಗಳೊಂದಿಗೆ ನಿಯಮಿತ ಸಂವಹನ ಮತ್ತು ಸಮಾಲೋಚನೆಯಿಂದ ರ‍್ಯಾಗಿಂಗ್ ಅನ್ನು ಮೊದಲ ಹಂತದಲ್ಲೇ ಪತ್ತೆ ಮಾಡಬಹುದು. ಹಾಸ್ಟೆಲ್, ಕ್ಯಾಂಟೀನ್, ಶೌಚಾಲಯ, ವಿಶ್ರಾಂತಿ ಕೊಠಡಿ, ಬಸ್ ನಿಲ್ದಾಣಗಳಿಗೆ ಹಠಾತ್ ಭೇಟಿ ನೀಡಿ ಪರಿಶೀಲನೆ ನಡೆಸುವ ಮೂಲಕವೂ ರ‍್ಯಾಗಿಂಗ್ ಅಥವಾ ಅಹಿತಕರ ವರ್ತನೆಗಳನ್ನು ನಿಯಂತ್ರಿಸಬಹುದು ಎಂದು ಯುಜಿಸಿ ಕಾರ್ಯದರ್ಶಿ ರಜನೀಶ್ ಜೈನ್ ವಿಶ್ವವಿದ್ಯಾಲಯಗಳಿಗೆ ಪತ್ರ ಮುಖೇನ ತಿಳಿಸಿದ್ದಾರೆ.

ರ‍್ಯಾಗಿಂಗ್ ವಿರೋಧಿ ಸಮಿತಿ, ರ‍್ಯಾಗಿಂಗ್ ವಿರೋಧಿ ದಳ ರಚನೆ ಮಾಡಿ ವಿವಿಧ ಮಾಧ್ಯಮಗಳ ಮೂಲಕ ಹೆಚ್ಚು ಪ್ರಚಾರ ನೀಡಿ ಅರಿವು ಮೂಡಿಸಬೇಕು ಎಂದು ಯುಜಿಸಿ ಸಲಹೆ ನೀಡಿದೆ.

ಮುಸ್ಲಿಂ ಯುವಕರನ್ನು ಥಳಿಸಿದ ಗುಜರಾತ್ ಪೊಲೀಸರು: ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗರ್ಬಾ ನೃತ್ಯ ಕಾರ್ಯಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಐವರು ಮುಸ್ಲಿಂ ಯುವಕರನ್ನು ಸಾರ್ವಜನಿಕರ ಎದುರಲ್ಲೇ ಪೊಲೀಸರು ವಿದ್ಯುತ್ ಕಂಬಕ್ಕೆ ಕಟ್ಟಿ, ಲಾಠಿಯಿಂದ ಥಳಿಸಿದ್ದಾರೆ. ಈ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಪೊಲೀಸರ ಕ್ರಮಕ್ಕೆ ಆಕ್ರೋಶ ವ್ಯಕ್ತವಾಗಿದೆ. ಇದರಿಂದ ಎಚ್ಚೆತ್ತ ಗುಜರಾತ್ ಪೊಲೀಸ್ ಇಲಾಖೆ, ಪ್ರಕರಣದ ತನಿಖೆಗೆ ಬುಧವಾರ ಆದೇಶಿಸಿದೆ.

'ವಿಡಿಯೊವನ್ನು ಪರಿಗಣಿಸಿ ತನಿಖೆಗೆ ಆದೇಶ ನೀಡಲಾಗಿದೆ' ಎಂದು ಡಿಜಿಪಿ ಆಶಿಶ್ ಭಾಟಿಯಾ ಹೇಳಿದ್ದಾರೆ. ಖೇಡ ಜಿಲ್ಲೆಯ ಉಂಧೆಲ ಗ್ರಾಮದಲ್ಲಿ ಮಂಗಳವಾರ ಈ ಘಟನೆ ನಡೆದಿದೆ. ಸೋಮವಾರ ರಾತ್ರಿ ಗ್ರಾಮದ ದೇವಾಲಯದಲ್ಲಿ ಗರ್ಬಾ ನೃತ್ಯ ಕಾರ್ಯಕ್ರಮ ಆಯೋಜಿಸಲಾಗಿತ್ತು. ದೇವಾಲಯದ ಗೋಡೆಗೆ ಹೊಂದಿಕೊಂಡಂತೆ ಮಸೀದಿ ಇದ್ದು, ಕೆಲವು ಮುಸ್ಲಿಂ ಯುವಕರು ಕಾರ್ಯಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು ಎಂದು ಖೇಡಾ ಪೊಲೀಸ್ ವರಿಷ್ಠಾಧಿಕಾರಿ ಮಾಹಿತಿ ನೀಡಿದ್ದಾರೆ.

ಆನಂತರ ಗಲಭೆ ನಡೆದಿತ್ತು. ಆ ರಾತ್ರಿಯೇ ಮುಸ್ಲಿಂ ಸಮುದಾಯದ 10 ಮಂದಿ ಯುವಕರನ್ನು ಪೊಲೀಸರು ಬಂಧಿಸಿದ್ದರು. ಮಂಗಳವಾರ ಬೆಳಿಗ್ಗೆ ಐವರು ಯುವಕರನ್ನು ಪೊಲೀಸರು ಗ್ರಾಮಕ್ಕೆ ಕರೆತಂದಿದ್ದರು. ಐವರನ್ನು ವಿದ್ಯುತ್ ಕಂಬಕ್ಕೆ ಕಟ್ಟಿ ಲಾಠಿಯಿಂದ ಥಳಿಸಿದ್ದರು. ಒಬ್ಬರಾದ ಮೇಲೆ ಮತ್ತೊಬ್ಬ ಯುವಕನನ್ನು ಪೊಲೀಸರು ಲಾಠಿಯಿಂದ ಥಳಿಸುವುದನ್ನು ಗ್ರಾಮಸ್ಥರು ಸಂಭ್ರಮಿಸಿದ್ದರು. ಗ್ರಾಮಸ್ಥರು ಚಪ್ಪಾಳೆ ತಟ್ಟಿ, 'ಭಾರತ್ ಮಾತಾ ಕಿ ಜೈ' ಎಂದು ಘೋಷಣೆ ಕೂಗಿದ್ದರು. ಇವೆಲ್ಲವೂ ವಿಡಿಯೊದಲ್ಲಿ ದಾಖಲಾಗಿದೆ.

ಮಾದರಿ ನೀತಿ ಸಂಹಿತೆ ತಿದ್ದುಪಡಿಗೆ ಚುನಾವಣಾ ಆಯೋಗ ನಿರ್ಧಾರ

ನವದೆಹಲಿ (ಪಿಟಿಐ): 'ಉಚಿತ ಕೊಡುಗೆ'ಗಳ ಕುರಿತು ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ ಕೇಂದ್ರ ಚುನಾವಣಾ ಆಯೋಗವು ಮಾದರಿ ನೀತಿ ಸಂಹಿತೆಗೆ ತಿದ್ದುಪಡಿ ತರಲು ನಿರ್ಧರಿಸಿದೆ. ಈ ಸಂಬಂಧ ಇದೇ 19ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಮಾನ್ಯತೆ ಹೊಂದಿರುವ ಎಲ್ಲಾ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳಿಗೆ ಪತ್ರ ಬರೆದಿದೆ.

ಒಂದೊಮ್ಮೆ ಆಯೋಗವು ಉದ್ದೇಶಿತ ತಿದ್ದುಪಡಿಯನ್ನು ಕೈಗೊಂಡರೆ, ರಾಜಕೀಯ ಪಕ್ಷಗಳು ಚುನಾವಣೆ ವೇಳೆ ತಾವು ನೀಡುವ ಭರವಸೆಗಳನ್ನು ಈಡೇರಿಸಲು ಬೇಕಿರುವ ಹಣಕಾಸಿನ ಕಾರ್ಯಸಾಧ್ಯತೆ ಕುರಿತ ಅಧಿಕೃತ ಮಾಹಿತಿಯನ್ನು ಮತದಾರರಿಗೆ ಒದಗಿಸಬೇಕಾಗುತ್ತದೆ.

'ಮಾದರಿ ನೀತಿ ಸಂಹಿತೆಯ ಅಧ್ಯಾಯ 8ರಲ್ಲಿ (ಚುನಾವಣಾ ಪ್ರಣಾಳಿಕೆಯ ಮಾರ್ಗಸೂಚಿ) ಪ್ರಮಾಣಿತ ನಮೂನೆಯೊಂದನ್ನು ಸೇರ್ಪಡೆ ಮಾಡುವ ಸಲುವಾಗಿ ತಿದ್ದುಪಡಿಯ ಪ್ರಸ್ತಾವನೆ ಮುಂದಿಡಲಾಗಿದೆ. ರಾಜಕೀಯ ಪಕ್ಷಗಳ ಆದಾಯ ಕ್ರೋಡೀಕರಣದ ಮಾರ್ಗಗಳು, ಯೋಜಿತ ವೆಚ್ಚ, ಬದ್ಧ ಹೊಣೆಗಾರಿಕೆಯ ಪರಿಣಾಮಗಳು ಹಾಗೂ ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ ಕಾಯ್ದೆಯ (ಎಫ್‌ಆರ್‌ಬಿಎಂ) ಮಿತಿಗಳ ಮೇಲೆ ಉಂಟಾಗುವ ಪರಿಣಾಮಗಳ ಕುರಿತ ಸಮಗ್ರ ಮಾಹಿತಿಯನ್ನು ಪ್ರಮಾಣಿತ ನಮೂನೆ ಒಳಗೊಂಡಿರುತ್ತದೆ' ಎಂದು ಪತ್ರದಲ್ಲಿ ತಿಳಿಸಲಾಗಿದೆ.

'ಚುನಾವಣೆ ವೇಳೆ ರಾಜಕೀಯ ಪಕ್ಷಗಳು ನೀಡುವ ಭರವಸೆಗಳು ಈಡೇರಿಸಬಹುದೊ ಅಥವಾ ಇಲ್ಲವೊ ಎಂಬುದನ್ನು ಅರಿತು ಅದರ ಆಧಾರದಲ್ಲಿ ತಾವು ಯಾರಿಗೆ ಮತ ಚಲಾಯಿಸಬೇಕು ಎಂಬುದನ್ನು ನಿರ್ಧರಿಸುವುದಕ್ಕೆ ಪ್ರಮಾಣಿತ ನಮೂನೆಯು ಮತದಾರರಿಗೆ ನೆರವಾಗಲಿದೆ' ಎಂದೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಬಹುತೇಕ ಪಕ್ಷಗಳು ಚುನಾವಣೆ ಪ್ರಣಾಳಿಕೆಗಳ ಕುರಿತ ಮಾಹಿತಿಯನ್ನು ನಿಗದಿತ ಸಮಯದೊಳಗೆ ಸಲ್ಲಿಸುತ್ತಿಲ್ಲ ಎಂದು ಆಯೋಗ ಹಲವು ಬಾರಿ ಅಸಮಾಧಾನ ವ್ಯಕ್ತಪಡಿಸಿತ್ತು.

ಪಕ್ಷಗಳು ಅ.19ರೊಳಗೆ ಪ್ರತಿಕ್ರಿಯೆ ಸಲ್ಲಿಸಲು ವಿಫಲವಾದರೆ, ತಿದ್ದುಪಡಿ ಮಾಡುವುದಕ್ಕೆ ಆ ಪಕ್ಷಗಳ ವಿರೋಧವಿಲ್ಲ ಎಂದೇ ಭಾವಿಸಲಾಗುತ್ತದೆ ಎಂದೂ ಆಯೋಗ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಉಗ್ರರ ಪಟ್ಟಿಗೆ 10 ಮಂದಿ ಸೇರ್ಪಡೆ: ಅಧಿಸೂಚನೆ

ನವದೆಹಲಿ (ಪಿಟಿಐ): ಕೇಂದ್ರ ಗೃಹ ಸಚಿವಾಲಯವು ಹಿಜ್ಬುಲ್ ಮುಜಾಹಿದೀನ್, ಲಷ್ಕರ್ ಎ ತಯಬಾ ಹಾಗೂ ಇತರ ನಿಷೇಧಿತ ಸಂಘಟನೆಗಳಿಗೆ ಸೇರಿದ 10 ಮಂದಿಯನ್ನು ಕಾನೂನು ಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯಡಿ (ಯುಎಪಿಎ) ಉಗ್ರರ ಪಟ್ಟಿಗೆ ಸೇರ್ಪಡೆ ಮಾಡಿ ಮಂಗಳವಾರ ಅಧಿಸೂಚನೆ ಹೊರಡಿಸಿದೆ.

ನಕಲಿ ಉದ್ಯೋಗ ಜಾಲ: 13 ಭಾರತೀಯರ ರಕ್ಷಣೆ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಟ್ಟದ ನಕಲಿ ಉದ್ಯೋಗ ಜಾಲದಲ್ಲಿ ಸಿಲುಕಿ ಆಗ್ನೇಯ ಮ್ಯಾನ್ಮಾರ್ ಮ್ಯಾವಾಡ್ಡಿ ಎನ್ನುವ ಪ್ರದೇಶದಲ್ಲಿ ಇದ್ದ 13 ಮಂದಿ ಭಾರತೀಯರನ್ನು ರಕ್ಷಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಬುಧವಾರ ತಿಳಿಸಿದೆ.

'ಮ್ಯಾನ್ಮಾರ್‌ನ ನಕಲಿ ಉದ್ಯೋಗ ಜಾಲದಲ್ಲಿ ಸಿಲುಕಿರುವ ಪ್ರಕರಣದ ಕುರಿತು ನಾವು ನಿರಂತರವಾಗಿ ನಿಗಾವಹಿಸಿದ್ದೇವೆ. ಮ್ಯಾನ್ಮಾರ್ ಮತ್ತು ಥಾಯ್ಲೆಂಡ್‌ನಲ್ಲಿನ ಭಾರತೀಯ ರಾಯಭಾರ ಕಚೇರಿಗಳ ನೆರವಿನಿಂದ ಈಗಾಗಲೇ 32 ಮಂದಿ ಭಾರತೀಯರನ್ನು ರಕ್ಷಿಸಿದ್ದೇವೆ. ಇದೀಗ 13 ಭಾರತೀಯರನ್ನು ರಕ್ಷಿಸಲಾಗಿದೆ. ಅವರು ಬುಧವಾರ ತಮಿಳುನಾಡಿಗೆ ತಲುಪಿದ್ದಾರೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಟ್ವೀಟ್ ಮಾಡಿದ್ದಾರೆ.

ಸೈಬರ್ ಕ್ರೈಂ: 115 ಕಡೆ ಸಿಬಿಐ ಶೋಧ

ನವದೆಹಲಿ(ಪಿಟಿಐ): ಸೈಬರ್ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ದಳ (ಸಿಬಿಐ) ಕರ್ನಾಟಕ ಸೇರಿ ವಿವಿಧ ರಾಜ್ಯಗಳ 115ಕ್ಕೂ ಅಧಿಕ ಕಡೆ ಮಂಗಳವಾರ ಶೋಧ ಕಾರ್ಯಾಚರಣೆ ಕೈಗೊಂಡಿತ್ತು. ಇಂಟರ್‌ಪೋಲ್, ಎಫ್‌ಬಿಐ ಮತ್ತು ವಿವಿಧ ದೇಶಗಳ ಪೊಲೀಸ್ ಪಡೆಗಳ ಸಹಭಾಗಿತ್ವದಲ್ಲಿ ಈ ಶೋಧ ನಡೆಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

87 ಸ್ಥಳಗಳ ಮೇಲೆ ಸಿಬಿಐ ಶೋಧ ನಡೆಸಿದರೆ, 28 ಸ್ಥಳಗಳ ಮೇಲೆ ರಾಜ್ಯ ಪೊಲೀಸ್ ಪಡೆಗಳು ಶೋಧ ನಡೆಸಿವೆ. ಅಂತರ್ಜಾಲ ಬಳಕೆ ಮಾಡಿ ಹಣ ವಂಚನೆ ಮಾಡಿರುವ ಸೈಬರ್ ಅಪರಾಧಿಗಳ ವಿರುದ್ಧ 11 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ತಿಳಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಕರ್ನಾಟಕ, ದೆಹಲಿ, ಪಂಜಾಬ್, ರಾಜಸ್ಥಾನ, ಅಸ್ಸಾಂ, ಅಂಡಮಾನ್ ಮತ್ತು ನಿಕೋಬಾರ್, ಚಂಡೀಗಢ ಮತ್ತು ಹರಿಯಾಣ ರಾಜ್ಯಗಳ ಪೊಲೀಸ್ ಪಡೆಗಳು ಭಾಗಿಯಾಗಿದ್ದವು. ದಾಳಿ ವೇಳೆ ಕರ್ನಾಟಕದಲ್ಲಿ ಅಂದಾಜು ₹1.8 ಕೋಟಿ ನಗದು ಮತ್ತು 1.5 ಕೆ.ಜಿ ಚಿನ್ನ, ಅಂದಾಜು ₹1.89 ಕೋಟಿ ಮೌಲ್ಯ ಹಣ ಇರುವ ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಲಾಗಿದೆ ಎಂದು ಅದು ತಿಳಿಸಿದೆ.

ಜಮ್ಮು–ಕಾಶ್ಮೀರ: ನಾಲ್ವರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಬುಧವಾರ ಭದ್ರತಾ ಪಡೆ ಮತ್ತು ಉಗ್ರರ ನಡುವೆ ನಡೆದ ಎರಡು ಪ್ರತ್ಯೇಕ ಗುಂಡಿನ ಕಾಳಗದಲ್ಲಿ ನಾಲ್ವರು ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶೋಪಿಯಾನ್‌ನ ದ್ರಾಚ್ ಪ್ರದೇಶದಲ್ಲಿ ಜೈಷ್–ಎ–ಮೊಹಮ್ಮದ್ ಸಂಘಟನೆಯ ಮೂವರು ಉಗ್ರರು ಮತ್ತು ದಕ್ಷಿಣ ಕಾಶ್ಮೀರದ ಮೂಲ್ ಪ್ರದೇಶದಲ್ಲಿ ಲಷ್ಕರ್ ಎ ತಯಬಾ ಸಂಘಟನೆಯ ಒಬ್ಬ ಉಗ್ರನನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಚೀತಾ ಹೆಲಿಕಾಪ್ಟರ್ ಪತನ, ಪೈಲಟ್ ಸಾವು

ಗುವಾಹಟಿ: ಅರುಣಾಚಲ ಪ್ರದೇಶದ ತವಾಂಗ್ ಸಮೀಪ ಭಾರತೀಯ ವಾಯುಪಡೆಯ ಚೀತಾ ಹೆಲಿಕಾಪ್ಟರ್ ಬುಧವಾರ ಬೆಳಿಗ್ಗೆ ಪತನಗೊಂಡಿದ್ದು, ದುರ್ಘಟನೆಯಲ್ಲಿ ಒಬ್ಬ ಪೈಲಟ್ ಮೃತಪಟ್ಟು, ಇನ್ನೊಬ್ಬರು ಗಾಯಗೊಂಡಿದ್ದಾರೆ.

'ಬೆಳಿಗ್ಗೆ 10 ಗಂಟೆ ಸುಮಾರಿಗೆ ಕಾಪ್ಟರ್ ಪತನಗೊಂಡಿದೆ. ಘಟನೆಯಲ್ಲಿ ಗಾಯಗೊಂಡ ಇಬ್ಬರು ಪೈಲಟ್‌ಗಳನ್ನು ಕೂಡಲೇ ಸೇನಾ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಆದರೆ, ಗಂಭೀರವಾಗಿ ಗಾಯಗೊಂಡಿದ್ದ ಲೆಫ್ಟಿನೆಂಟ್ ಕರ್ನಲ್ ಸೌರವ್ ಯಾದವ್ ಅವರು ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಇನ್ನೊಬ್ಬ ಪೈಲಟ್ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಸೇನೆ ಪ್ರಕಟಣೆಯಲ್ಲಿ ತಿಳಿಸಿದೆ. ದುರಂತಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ಈ ಬಗ್ಗೆ ತನಿಖೆ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ಉತ್ತರಾಖಂಡದಲ್ಲಿ ನಡೆದ ಅವಘಡ • 19 ಪ್ರಯಾಣಿಕರಿಗೆ ತೀವ್ರ ಗಾಯ

ಕಂದಕಕ್ಕೆ ಉರುಳಿದ ದಿಬ್ಬಣದ ಬಸ್: 33 ಸಾವು

ಪೌಡಿ (ಉತ್ತರಾಖಂಡ) (ಪಿಟಿಐ): ಪೌಡಿ ಗಡವಾಲ್ ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ ಮದುವೆ ದಿಬ್ಬಣದ ಬಸ್ ಕಂದಕಕ್ಕೆ ಉರುಳಿ 33 ಮಂದಿ ಮೃತಪಟ್ಟು, 19 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ಬಸ್‌ನಲ್ಲಿ ಅಂದಾಜು 45–50 ಮಂದಿ ಪ್ರಯಾಣಿಸುತ್ತಿದ್ದರು.

'ದಿಬ್ಬಣವು ಬೀರೇಂಖಾಲ್‌ನಿಂದ ಹರಿದ್ವಾರದ ಲಾಲ್‌ಢಂಗ್ ನಗರಕ್ಕೆ ಹೊರಟಿತ್ತು. ಮಾರ್ಗಮಧ್ಯದ ಪೌಡಿ ಗಡವಾಲ್ ಜಿಲ್ಲೆಯ ಸಿಮ್ರಿ ಸಮೀಪ ರಾತ್ರಿ ಸುಮಾರು 7 ಗಂಟೆಗೆ 500 ಮೀಟರ್ ಆಳದ ಕಂದಕಕ್ಕೆ ಬಸ್ ಉರುಳಿತು' ಎಂದು ಪೊಲೀಸರು ಬುಧವಾರ ಮಾಹಿತಿ ನೀಡಿದರು.

'ಇಡೀ ರಾತ್ರಿ ರಕ್ಷಣಾ ಕಾರ್ಯಾಚರಣೆ ನಡೆದಿದೆ. 18 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಇನ್ನೂ 7–8 ಮೃತದೇಹಗಳು ಬಸ್‌ನ ಕೆಳಗೆ ಇರಬಹುದು. ಬಸ್‌ನ ಅವಶೇಷಗಳ ನಡುವೆ ಸಿಲುಕಿದ್ದ 20 ಗಾಯಾಳುಗಳನ್ನು ರಕ್ಷಣೆ ಮಾಡಿ, ಹತ್ತಿರದ ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ. ಆದರೆ, ಆಸ್ಪತ್ರೆಗೆ ಕರೆ ದೊಯ್ಯುವ ಮಾರ್ಗ ಮಧ್ಯದಲ್ಲೇ ಇಬ್ಬರು ಗಾಯಾಳುಗಳು ಮೃತಪಟ್ಟರು' ಎಂದು ವಿವರಿಸಿದರು.

ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಮತ್ತು ಕೇಂದ್ರದ ಮಾಜಿ ಸಚಿವ ರಮೇಶ್ ಪೋಕ್ರಿಯಾಲ್ ಅವರು ಮಂಗಳವಾರವೇ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಜೊತೆಗೆ ಆಸ್ಪತ್ರೆಗೆ ತೆರಳಿ ಗಾಯಾಳುಗಳನ್ನು ಭೇಟಿ ಮಾಡಿದರು.

ಅಪಘಾತವನ್ನು 'ಹೃದಯ ವಿದ್ರಾವಕ' ಎಂದಿರುವ ಪ್ರಧಾನಿ ನರೇಂದ್ರಮೋದಿ ಅವರು ಘಟನೆ ಕುರಿತು ಸಂತಾಪ ಸೂಚಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, 'ಘಟನೆಯು ಅತೀವ ನೋವು ತಂದಿದೆ' ಎಂದಿದ್ದಾರೆ.

ರಾಷ್ಟ್ರೀಯ ವಿಪತ್ತು ಸ್ಪಂದನ ಪಡೆಯ ಸಿಬ್ಬಂದಿ ಬುಧವಾರ ರಕ್ಷಣಾ ಕಾರ್ಯಾಚರಣೆ ನಡೆಸಿದರು –ಪಿಟಿಐ ಚಿತ್ರ

ಫ್ಲ್ಯಾಶ್‌ಲೈಟ್ ಬಳಕೆ

ಅಪಘಾತವು ರಾತ್ರಿ ನಡೆದಿದ್ದರಿಂದ ರಕ್ಷಣಾ ಕಾರ್ಯಾಚರಣೆಗೆ ತೊಂದರೆ ಉಂಟಾಯಿತು ಎಂದು ಪ್ರತ್ಯಕ್ಷದರ್ಶಿಯೊಬ್ಬರು ವಿವರಿಸಿದರು.

ಈ ವೇಳೆ ಗ್ರಾಮಸ್ಥರೆಲ್ಲಾ ಸೇರಿ, ತಮ್ಮ ಮೊಬೈಲ್‌ಗಳ ಫ್ಲ್ಯಾಶ್‌ಲೈಟ್‌ಗಳನ್ನು ಆನ್ ಮಾಡಿ ರಕ್ಷಣಾ ಕಾರ್ಯಾಚರಣೆಗೆ ಸಹಕಾರ ನೀಡಿದರು. ಕೆಲ ಸಮಯದ ಬಳಿಕವಷ್ಟೇ, ಅಧಿಕಾರಿಗಳು ಆಂಬುಲೆನ್ಸ್, ಬೆಳಕು ಮತ್ತು ಜೀವ ರಕ್ಷಕಗಳ ವ್ಯವಸ್ಥೆಯನ್ನು ಮಾಡಿದರು ಎಂದರು. ರಾತ್ರಿ ವೇಳೆ ನಡೆಸಿದ ರಕ್ಷಣಾ ಕಾರ್ಯಾಚರಣೆಯ ದೃಶ್ಯಗಳನ್ನು ಪೊಲೀಸರು ಟ್ವೀಟ್ ಮಾಡಿದ್ದಾರೆ.

10 ಮಂದಿ ಪರ್ವತಾರೋಹಿಗಳ ಸಾವು

ಡೆಹ್ರಾಡೂನ್/ಉತ್ತರಕಾಶಿ (ಪಿಟಿಐ): ಉತ್ತರಕಾಶಿ ಜಿಲ್ಲೆಯ ದ್ರೌಪದಿ ಕಾ ದಂಡ ಶಿಖರದಲ್ಲಿ ಮಂಗಳವಾರ ಸಂಭವಿಸಿದ ಹಿಮಪಾತದಿಂದಾಗಿ ನಾಪತ್ತೆಯಾಗಿದ್ದ ಪರ್ವತಾರೋಹಿಗಳ ತಂಡದ 14 ಮಂದಿಯನ್ನು, ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ಗಳ ಸಹಾಯದಿಂದ ಬುಧವಾರ ರಕ್ಷಿಸಲಾಗಿದೆ. 10 ಮಂದಿ ಸಾವನ್ನಪ್ಪಿದ್ದು, 27 ಮಂದಿಗಾಗಿ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಉತ್ತರಕಾಶಿಯ ನೆಹರೂ ಇನ್‌ಸ್ಟಿಟ್ಯೂಟ್ ಆಫ್ ಮೌಂಟೇನಿರಿಂಗ್‌ನಲ್ಲಿ (ಎನ್‌ಐಎಂ) ಪರ್ವತಾರೋಹಣ ತರಬೇತಿ ಪಡೆಯುತ್ತಿದ್ದ 41 ಮಂದಿಯ ತಂಡವು ಮಂಗಳವಾರ ಬೆಳಿಗ್ಗೆ ಪರ್ವತಾರೋಹಣ ಅಭ್ಯಾಸ ನಡೆಸುತ್ತಿದ್ದಾಗ ಹಠಾತ್ತನೇ ಹಿಮಪಾತ ಉಂಟಾದ ಕಾರಣ ಶಿಬಿರಾರ್ಥಿಗಳು ಹಾಗೂ ಬೋಧಕರು ನಾಪತ್ತೆಯಾಗಿದ್ದರು.

ಶಿಬಿರಾರ್ಥಿಗಳಲ್ಲಿ ಕರ್ನಾಟಕ, ಪಶ್ಚಿಮ ಬಂಗಾಳ, ದೆಹಲಿ, ತೆಲಂಗಾಣ, ತಮಿಳುನಾಡು, ಅಸ್ಸಾಂ, ಹರಿಯಾಣ, ಗುಜರಾತ್, ಹಿಮಾಚಲ ಪ್ರದೇಶ, ಉತ್ತರಾಖಂಡ ಹಾಗೂ ಉತ್ತರ ಪ್ರದೇಶ ಮೂಲದವರೂ ಇದ್ದಾರೆ.

ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ ಗೌರವ; ಸತತ 2 ಬಾರಿ ಪುರಸ್ಕಾರ ಪಡೆದ ವಿಶ್ವದ 3ನೇ ಆಟಗಾರ ಶ್ರೀಜೇಶ್

ಶ್ರೀಜೇಶ್, ಸವಿತಾ ವರ್ಷದ ಗೋಲ್‌ಕೀಪರ್‌ಗಳು

ನವದೆಹಲಿ (ಪಿಟಿಐ): ಭಾರತದ ಪಿ.ಆರ್. ಶ್ರೀಜೇಶ್ ಮತ್ತು ಸವಿತಾ ಪೂನಿಯಾ ಅವರು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ (ಎಫ್‌ಐಎಚ್) ವರ್ಷದ ಶ್ರೇಷ್ಠ ಗೋಲ್‌ಕೀಪರ್‌ಗಳು ಎನಿಸಿಕೊಂಡಿದ್ದಾರೆ. ಈ ಇಬ್ಬರಿಗೂ ಸತತ ಎರಡನೇ ವರ್ಷ ಈ ಗೌರವ ಒಲಿದಿದೆ.

16 ವರ್ಷದಿಂದ ಭಾರತ ರಾಷ್ಟ್ರೀಯ ತಂಡದಲ್ಲಿರುವ ಶ್ರೀಜೇಶ್, ಈ ಬಾರಿಯ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಎಲ್ಲ 16 ಪಂದ್ಯಗಳನ್ನು ಆಡಿದ್ದರು. ತಂಡವು ಲೀಗ್‌ನಲ್ಲಿ ಮೂರನೇ ಸ್ಥಾನ ಗಳಿಸಿತ್ತು. ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್



ಪಿ.ಆರ್. ಶ್ರೀಜೇಶ್

ಗೇಮ್ಸ್‌ನಲ್ಲಿ ತಂಡ ಆಡಿದ ಆರು ಪಂದ್ಯಗಳಲ್ಲೂ ಅವರು ಇದ್ದರು. ಭಾರತ ಈ ಕೂಟದಲ್ಲಿ ಬೆಳ್ಳಿ ಪದಕ

ಸವಿತಾ ಪೂನಿಯಾ –ಪಿಟಿಐ ಚಿತ್ರಗಳು

ಜಯಿಸಿತ್ತು.

'ವರ್ಷಗಳುರುಳಿದರೂ ಗೋಲ್‌ಕೀಪಿಂಗ್‌ನಲ್ಲಿ 34 ವರ್ಷದ ಶ್ರೀಜೇಶ್ ಅವರ ಸಾಮರ್ಥ್ಯ ವೃದ್ಧಿಸುತ್ತಲೇ ಇದೆ' ಎಂದು ಎಫ್‌ಐಎಚ್ ಹೇಳಿಕೆಯಲ್ಲಿ ತಿಳಿಸಿದೆ. ಕಳೆದ ವರ್ಷವೂ ಅವರಿಗೆ ಈ ಗೌರವ ಲಭಿಸಿತ್ತು.

ಮುಖ್ಯಾಂಶಗಳು

- ಸತತ ಎರಡನೇ ಬಾರಿ ಶ್ರೀಜೇಶ್, ಸವಿತಾಗೆ ಪುರಸ್ಕಾರ
- ಭಾರತದ ಮುಮ್ತಾಜ್ ಖಾನ್‌ಗೆ ಉದಯೋನ್ಮುಖ ಆಟಗಾರ್ತಿ ಗರಿ

ಆನ್‌ಲೈನ್ ಮೂಲಕ ನಡೆದ ಮತದಾನದಲ್ಲಿ ಶ್ರೀಜೇಶ್ ಶೇಕಡಾ 39.9 ಪಾಯಿಂಟ್ಸ್ ಪಡೆದರು. ಬೆಲ್ಜಿಯಂನ ಲೊಯಿಕ್ ವ್ಯಾನ್ ಡೊರೆನ್ (26.3) ಮತ್ತು ನೆದರ್ಲೆಂಡ್ಸ್‌ನ ಪ್ರಿಮಿನ್ ಬ್ಲಾಕ್ (23.2) ಅವರನ್ನು ಶ್ರೀಜೇಶ್ ಹಿಂದಿಕ್ಕಿದರು.

ಸತತ ಎರಡು ಬಾರಿ ಈ ಪುರಸ್ಕಾರ ಪಡೆದ ವಿಶ್ವದ ಮೂರನೇ ಆಟಗಾರ ಶ್ರೀಜೇಶ್. ಈ ಹಿಂದೆ ಐರ್ಲೆಂಡ್‌ನ ಡೇವಿಡ್ ಹಾರ್ಟ್ (2015, 2016), ಮತ್ತು ಬೆಲ್ಜಿಯಂನ ವಿನ್ಸೆಂಟ್ ವನಾಶ್ (2017, 2019) ಈ ಗೌರವ ಗಳಿಸಿದ್ದರು.

ಮಹಿಳಾ ಗೋಲ್‌ಕೀಪರ್‌ಗಳ ವಿಭಾಗದಲ್ಲಿ ಸವಿತಾ ಪೂನಿಯಾ ಅವರು ಶೇ. 37.6 ಪಾಯಿಂಟ್ಸ್ ಗಳಿಸಿದರು. ಅರ್ಜೆಂಟೀನಾದ ಬೆಲೇನ್ ಸುಶಿ (26.4) ಮತ್ತು ಆಸ್ಟ್ರೇಲಿಯಾದ ಜೋಸ್‌ಲಿನ್ ಬಾರ್ಟಮ್ (16 ಪಾಯಿಂಟ್ಸ್) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು. ಅವರು ಸತತ ಎರಡನೇ ಬಾರಿ ಪುರಸ್ಕಾರ ಗಳಿಸಿದ ವಿಶ್ವದ ಮೂರನೇ ಆಟಗಾರ್ತಿಯಾಗಿದ್ದಾರೆ.

ಭಾರತದ ಮುಮ್ತಾಜ್ ಖಾನ್ ಅವರು ಮಂಗಳವಾರ ಎಫ್‌ಐಎಚ್ ಉದಯೋನ್ಮುಖ ಆಟಗಾರ್ತಿ ಗೌರವ ಪಡೆದಿದ್ದರು.

2026ರ ಕಾಮನ್‌ವೆಲ್ತ್ ಗೇಮ್ಸ್‌ಗೆ ಶೂಟಿಂಗ್ ಸೇರ್ಪಡೆ

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾದ ವಿಕ್ಟೋರಿಯಾದಲ್ಲಿ ನಡೆಯಲಿರುವ 2026ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಕುಸ್ತಿ ಮತ್ತು ಆರ್ಚರಿ ಕ್ರೀಡೆಗಳನ್ನು ಕೈಬಿಡಲಾಗಿದ್ದು, ಶೂಟಿಂಗ್‌ಅನ್ನು ಮರು ಸೇರ್ಪಡೆ ಮಾಡಲಾಗಿದೆ.

ವಿಕ್ಟೋರಿಯಾ ಕೂಟಕ್ಕೆ ಪ್ಯಾರಾ ಸೇರಿದಂತೆ 20 ಕ್ರೀಡೆಗಳ ಪಟ್ಟಿಯನ್ನು ಕಾಮನ್‌ವೆಲ್ತ್ ಗೇಮ್ಸ್ ಫೆಡರೇಷನ್ (ಸಿಜಿಎಫ್) ಬುಧವಾರ ಬಿಡುಗಡೆ ಮಾಡಿದೆ.

ಈ ವರ್ಷದ ಆರಂಭದಲ್ಲಿ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕೂಟದಲ್ಲಿ ಶೂಟಿಂಗ್ ಕೈಬಿಟ್ಟಿದ್ದು ವಿವಾದಕ್ಕೆ ಕಾರಣವಾಗಿತ್ತು. ಈಗ ಮರು ಸೇರ್ಪಡೆ ಮಾಡಿದ್ದು ಭಾರತಕ್ಕೆ ಸಂತಸದ ಸಂಗತಿಯಾಗಿದೆ.

ಕ್ರೀಡಾಕೂಟದ ಶೂಟಿಂಗ್‌ನಲ್ಲಿ ಭಾರತ ಇದುವರೆಗೆ ಉತ್ತಮ ಸಾಧನೆ ಮಾಡಿದೆ. ಒಟ್ಟು 135 ಪದಕಗಳನ್ನು (63 ಚಿನ್ನ, 44 ಬೆಳ್ಳಿ ಮತ್ತು 28 ಕಂಚು) ತನ್ನದಾಗಿಸಿಕೊಂಡಿದೆ. ಕುಸ್ತಿಯಲ್ಲಿ 114 ಪದಕಗಳು (49 ಚಿನ್ನ, 39 ಬೆಳ್ಳಿ ಮತ್ತ 26 ಕಂಚು) ಭಾರತಕ್ಕೆ ಬಂದಿವೆ. 2018ರ ಗೋಲ್ಡ್‌ಕೋಸ್ಟ್ ಕೂಟದಲ್ಲಿ ದೇಶ ಗೆದ್ದ ಒಟ್ಟು 66 ಪದಕಗಳಲ್ಲಿ ಶೇಕಡಾ 25 ರಷ್ಟು (16) ಶೂಟಿಂಗ್‌ನಲ್ಲಿ ಬಂದಿದ್ದವು.

2026ರ ಆವೃತ್ತಿಗೆ ಪ್ಯಾರಾ ಶೂಟಿಂಗ್ ಕೂಡ ಸೇರ್ಪಡೆ ಮಾಡಿರುವುದರಿಂದ ಹೆಚ್ಚಿನ ಪದಕಗಳು ಭಾರತದ ಮಡಿಲು ಸೇರಲಿವೆ. ಆದರೆ ಕುಸ್ತಿ ಕೈಬಿಟ್ಟಿದ್ದು ದೊಡ್ಡ ನಷ್ಟ ಎನಿಸಿದೆ. ಬರ್ಮಿಂಗ್‌ಹ್ಯಾಮ್ ಕ್ರೀಡಾಕೂಟದಲ್ಲಿ ಈ ಕ್ರೀಡೆಯಲ್ಲಿ ಭಾರತದ ಕುಸ್ತಿಪಟುಗಳು 12 ಗೆದ್ದುಕೊಂಡಿದ್ದರು.

ರಾಷ್ಟ್ರೀಯ ಕ್ರೀಡಾಕೂಟ: ಟೆನಿಸ್‌ನಲ್ಲಿ ಒಟ್ಟು ಎಂಟು ಪದಕ ಜಯಿಸಿದ ರಾಜ್ಯ ತಂಡ

ಕರ್ನಾಟಕ ಈಜುಪಟುಗಳ ಪಾರಮ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜು ಸ್ಪರ್ಧಿಗಳು ಗುಜರಾತ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪಾರಮ್ಯ ಮುಂದುವರಿಸಿದರು.

ರಾಜ್‌ಕೋಟ್‌ನ ಸರ್ದಾರ್ ಪಟೇಲ್ ಈಜು ಕಾಂಪ್ಲೆಕ್ಸ್‌ನಲ್ಲಿ ನಡೆದ ಸ್ಪರ್ಧೆಗಳಲ್ಲಿ ಬುಧವಾರ ರಾಜ್ಯ ತಂಡವು ಮೂರು ಕೂಟ ದಾಖಲೆಗಳೊಂದಿಗೆ ಮೂರು ಚಿನ್ನ ಒಂದು ಕಂಚಿನ ಪದಕ ಗೆದ್ದುಕೊಂಡಿತು. ಇದುವರೆಗೆ ಒಟ್ಟು 21 ಪದಕ (12 ಚಿನ್ನ, ಮೂರು ಬೆಳ್ಳಿ ಮತ್ತು ಆರು ಕಂಚು) ಜಯಿಸಿ ಪದಕಪಟ್ಟಿಯಲ್ಲಿ ಗೆದ್ದು ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿತ್ತು.

ಮಹಿಳೆಯರ 200 ಮೀಟರ್ಸ್ ಬಟರ್‌ಫ್ಲೈನಲ್ಲಿ ರಾಜ್ಯದ ಹಷಿಕಾ ರಾಮಚಂದ್ರ 2 ನಿಮಿಷ 19.12 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನಕ್ಕೆ ಕೊರಳೊಡ್ಡಿದರು. ಇದರೊಂದಿಗೆ ಇದೇ ವರ್ಷ ಅಸ್ಸಾಂ ಅಶಿತಾ ಚೌಧರಿ (2 ನಿ. 21.52 ಸೆ.) ನಿರ್ಮಿಸಿದ್ದ ದಾಖಲೆಯನ್ನು ಅಳಿಸಿ ಹಾಕಿದರು. 200 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಮಾನವಿ ವರ್ಮಾ ಕಂಚು ಗೆದ್ದರು.

ಪುರುಷರ 4X200 ಮೀ. ಫ್ರೀಸ್ಟೈಲ್‌ನಲ್ಲಿ ಸಂಭವ್ ಆರ್, ಶಿವ ಎಸ್, ಶಿವಾಂಕ್ ವಿಶ್ವನಾಥ್, ಅನೀಶ್ ಎಸ್. ಗೌಡ ಅವರಿದ್ದ ತಂಡ ಕೂಟ ದಾಖಲೆ ಬರೆಯಿತು. 7 ನಿ. 41.10 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ತನ್ನದಾಗಿಸಿಕೊಂಡಿತು. ಈ ಹಿಂದೆ ಮಹಾರಾಷ್ಟ್ರ ಸ್ಥಾಪಿಸಿದ್ದ ದಾಖಲೆಯನ್ನು ಅಳಿಸಿ ಹಾಕಿತು.

ಮಹಿಳೆಯರ 4X200 ಮೀ. ಫ್ರೀಸ್ಟೈಲ್‌ನಲ್ಲೂ ಕರ್ನಾಟಕ ಅಗ್ರಸ್ಥಾನ ಗಳಿಸಿತು. ಧೀನಿಧಿ ದೇಸಿಂಗು, ರುಜುಲಾ ಎಸ್, ಶಾಲಿನಿ ದೀಕ್ಷಿತ್, ಹಷಿಕಾ ರಾಮಚಂದ್ರ ಅವರನ್ನೊಳಗೊಂಡ ತಂಡ 8 ನಿ. 51.59 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಕೂಟ ದಾಖಲೆ ಬರೆಯಿತು.

ಮಂಗಳವಾರ ರಾಜ್ಯ ಈಜು ತಂಡವು ನಾಲ್ಕು ಪದಕಗಳನ್ನು ಗೆದ್ದುಕೊಂಡಿತ್ತು. ಪುರುಷರ 200 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಉತ್ಕರ್ಷ್ ಸಂತೋಷ್ ಪಾಟೀಲ ಚಿನ್ನ (ಕಾಲ: 2 ನಿಮಿಷ 5.8 ಸೆಕೆಂಡು) ಮತ್ತು ಶಿವ ಎಸ್. ಕಂಚಿನ ಪದಕ ಗೆದ್ದುಕೊಂಡಿದ್ದರು. 50 ಮೀ. ಫ್ರೀಸ್ಟೈಲ್‌ನಲ್ಲಿ ಶ್ರೀಹರಿ ನಟರಾಜ್ (23.42 ಸೆ.) ಚಿನ್ನದ ಕೊರಳಿಗೇರಿಸಿಕೊಂಡಿದ್ದರು. ಮಹಿಳೆಯರ 400 ಮೀ. ಮೆಡ್ಲೆಯಲ್ಲಿ ಹಷಿಕಾ ರಾಮಚಂದ್ರ (5 ನಿ. 9.3 ಸೆ.) ಚಿನ್ನ ಗೆದ್ದಿದ್ದರು.

ಅಭಿನ್‌ಗೆ ಬೆಳ್ಳಿ: ಅಥ್ಲೆಟಿಕ್ಸ್‌ನ ಪುರುಷರ 200 ಮೀಟರ್ಸ್ ಓಟದಲ್ಲಿ ಕರ್ನಾಟಕದ ಅಭಿನ್ ದೇವಾಡಿಗ (ಕಾಲ: 20.88 ಸೆ.) ಬೆಳ್ಳಿ, ಮಹಿಳೆಯರ 400 ಮೀಟರ್ಸ್ ಹರ್ಡಲ್ಸ್‌ನಲ್ಲಿ ಸಿಂಚಲ್ ಕಾವೇರಮ್ಮ (58.74 ಸೆ.) ಕಂಚು ಮತ್ತು 4X400 ಮೀ. ಮಿಶ್ರ ರಿಲೇ ತಂಡವು (3 ನಿ. 20.51ಸೆ.) ಬೆಳ್ಳಿ ಪದಕ ಗೆದ್ದುಕೊಂಡಿತ್ತು. ಮಿಶ್ರ ರಿಲೇ ತಂಡದಲ್ಲಿ ಮಹಾಂತೇಶ್ ಸಿದ್ದಪ್ಪ, ಲಿಖಿತಾ ಎಂ, ಇಂಚರ ಎನ್.ಎಸ್. ಮತ್ತು ನಿಹಾಲ್ ಜೋಯಲ್ ಇದ್ದರು.

ಟೆನಿಸ್ ತಂಡಕ್ಕೆ ಒಟ್ಟು ಎಂಟು ಪದಕ: ಕರ್ನಾಟಕ ಟೆನಿಸ್ ತಂಡವು ಒಟ್ಟು ಎಂಟು (1 ಚಿನ್ನ. ಮೂರು ಬೆಳ್ಳಿ ಮತ್ತು ನಾಲ್ಕು ಕಂಚು) ಪದಕಗಳೊಂದಿಗೆ ಅಭಿಯಾನ ಕೊನೆಗೊಳಿಸಿತು. ಮಂಗಳವಾರ ನಡೆದ ಪುರುಷರ ಡಬಲ್ಸ್ ಫೈನಲ್‌ನಲ್ಲಿ ರಾಜ್ಯದ ಆದಿಲ್ ಕಲ್ಯಾಣಪುರ– ಎಸ್.ಡಿ. ಪ್ರಜ್ವಲ್ ದೇವ್ ಜೋಡಿ 6-3, 6-4ರಿಂದ ಗುಜರಾತ್‌ನ ಧ್ರುವ ಎಚ್. ಮಧ್ವಿನ್ ಕೆ. ಅವರನ್ನು ಸೋಲಿಸಿ ಚಿನ್ನಕ್ಕೆ ಮುತ್ತಿಟ್ಟಿತು.

ಶರ್ಮದಾ ಬಾಲು ಗಾಯಗೊಂಡಿದ್ದರಿಂದ ಬುಧವಾರ ಎರಡು ಚಿನ್ನ ಗೆಲ್ಲುವ ಅವಕಾಶವನ್ನು ರಾಜ್ಯ ತಂಡ ಕಳೆದುಕೊಂಡಿತು. ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಗುಜರಾತ್‌ನ ಜೀಲ್ ದೇಸಾಯಿ ಎದುರು ಆಡಬೇಕಿದ್ದ ಶರ್ಮದಾ ಹಿಂದೆ ಸರಿದರು. ಪ್ರಜ್ವಲ್ ಜೊತೆಗೂಡಿದ್ದ ಅವರು ಮಿಶ್ರ ಡಬಲ್ಸ್ ಫೈನಲ್‌ನಲ್ಲೂ ಆಡಲಿಲ್ಲ. ಹೀಗಾಗಿ ಈ ಎರಡೂ ವಿಭಾಗಗಳಲ್ಲಿ ತಂಡವು ಬೆಳ್ಳಿ ಪದಕ ಗಳಿಸಿತು.

ಹಷಿಕಾ ರಾಮಚಂದ್ರ

ಟೆನಿಸ್‌ನ ಪುರುಷರ ಡಬಲ್ಸ್‌ನಲ್ಲಿ ಚಿನ್ನ ಗೆದ್ದ ಪ್ರಜ್ವಲ್ ದೇವ್ (ಎಡ) ಮತ್ತು ಆದಿಲ್ ಕಲ್ಯಾಣ್‌ಪುರ ಅವರು ಕೋಚ್ ಕಿರಣ್ ಕುಮಾರ್ (ಮಧ್ಯೆ) ಅವರೊಂದಿಗೆ.

36TH NATIONAL GAMES GUJARAT 2022 Celebrating Unity Through Sports

ಕೊಕ್ಕೊ ತಂಡಗಳಿಗೆ ಕಂಚು

ಕರ್ನಾಟಕದ ಪುರುಷ ಮತ್ತು ಮಹಿಳಾ ಕೊಕ್ಕೊ ತಂಡಗಳು ಟೂರ್ನಿಯಲ್ಲಿ ಕಂಚಿನ ಪದಕ ಜಯಿಸಿದವು.

ಫುಟ್‌ಬಾಲ್ ತಂಡಕ್ಕೆ ಜಯ: ಕರ್ನಾಟಕ ಫುಟ್‌ಬಾಲ್ ತಂಡವು ಕ್ರೀಡಾಕೂಟದಲ್ಲಿ ಸತತ ಎರಡನೇ ಜಯ ಸಾಧಿಸಿತು. ಬುಧವಾರ ನಡೆದ ಪಂದ್ಯದಲ್ಲಿ ಸುರೇಂದ್ರ ಪ್ರಸಾದ್ (36ನೇ ನಿ.) ಗಳಿಸಿದ ಗೋಲಿನ ಬಲದಿಂದ 1–0ಯಿಂದ ಪಂಜಾಬ್ ತಂಡವನ್ನು ಮಣಿಸಿತು. ಮೊದಲ ಪಂದ್ಯದಲ್ಲಿ ಕರ್ನಾಟಕ 2–1ರಿಂದ ಗುಜರಾತ್ ತಂಡಕ್ಕೆ ಸೋಲುಣಿಸಿತ್ತು.

ರಿಲಿ ಶತಕಕ್ಕೆ ಒಲಿದ ಜಯ

ದಕ್ಷಿಣ ಆಫ್ರಿಕಾ ಎದುರು ಭಾರತಕ್ಕೆ 2–1ರಿಂದ ಸರಣಿ

ಇಂದೋರ್ (ಪಿಟಿಐ): ಅಬ್ಬರದ ಶತಕ ಬಾರಿಸಿದ ರಿಲಿ ರೊಸೊ ಆಟದಿಂದಾಗಿ ದಕ್ಷಿಣ ಆಫ್ರಿಕಾ ತಂಡವು ಮಂಗಳವಾರ ಹೋಳ್ಕರ್ ಮೈದಾನದಲ್ಲಿ ನಡೆದ ಟಿ20 ಪಂದ್ಯದಲ್ಲಿ ಭಾರತದ ಎದುರು ಜಯಿಸಿತು. ಮೊದಲ ಎರಡು ಪಂದ್ಯಗಳನ್ನು ಜಯಿಸಿದ್ದ ಭಾರತವು ಸರಣಿಯನ್ನು ತನ್ನದಾಗಿಸಿಕೊಂಡಿತು.

ರೋಹಿತ್ ಶರ್ಮಾ ನಾಯಕತ್ವದಲ್ಲಿ ಭಾರತವು ಗೆದ್ದ ಏಳನೇ ಟಿ20 ಸರಣಿ ಇದಾಗಿದೆ. ಭಾರತ ತಂಡವು ತವರಿನಲ್ಲಿ ದಕ್ಷಿಣ ಆಫ್ರಿಕಾದೆದುರು ಜಯಿಸಿದ ಮೊದಲ ಸರಣಿ ಇದು. ಇದಕ್ಕೂ ಮುನ್ನ ನಡೆದ ಮೂರು ಸರಣಿಗಳಲ್ಲಿ ಎರಡು ಡ್ರಾ ಆಗಿದ್ದವು. ಒಂದರಲ್ಲಿ ದಕ್ಷಿಣ ಆಫ್ರಿಕಾ ಜಯಿಸಿತು.

ಆಯುಧಪೂಜೆಯ ದಿನದಂದು ನಡೆದ ಪಂದ್ಯದಲ್ಲಿ ಭಾರತದ ಬೌಲಿಂಗ್ ಪಡೆಯು ಮತ್ತೊಮ್ಮೆ ವೈಫಲ್ಯ ಅನುಭವಿಸಿತು. ಇದರಿಂದಾಗಿ ಪ್ರವಾಸಿ ಬಳಗವು 49 ರನ್‌ಗಳಿಂದ ಗೆದ್ದಿತು. ಭಾರತವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 227 ರನ್‌ಗಳ ಬೃಹತ್ ಗುರಿಯನ್ನು ಒಡ್ಡಿತು. ಇದರಲ್ಲಿ ರಿಲಿ ರೊಸೊ ಅಜೇಯ ಶತಕ (100; 48ಎ) ಪ್ರಮುಖವಾಗಿತ್ತು. ಅವರು ಎಂಟು ಸಿಕ್ಸರ್ ಹಾಗೂ ಏಳು ಬೌಂಡರಿ ಸಿಡಿಸಿದರು. ಆರಂಭಿಕ ಬ್ಯಾಟರ್ ಕ್ವಿಂಟನ್ ಡಿಕಾಕ್ (68; 43ಎ, 4X6, 6X4) ಭರ್ಜರಿ ಅರ್ಧಶತಕ ಗಳಿಸಿದರು.

ಗುರಿ ಬೆನ್ನಟ್ಟಿದ ಭಾರತ ತಂಡವು 18.3 ಓವರ್‌ಗಳಲ್ಲಿ 178 ರನ್‌ಗಳಿಗೆ ಆಲೌಟ್ ಆಯಿತು. ಅಗ್ರಕ್ರಮಾಂಕದ ಬ್ಯಾಟರ್‌ಗಳು ಬೇಗನೆ ಔಟಾಗಿದ್ದು ತಂಡಕ್ಕೆ ಹಿನ್ನಡೆಯಾಯಿತು. ಆದರೆ, ನಾಲ್ಕನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ದಿನೇಶ್ ಕಾರ್ತಿಕ್ (46ರನ್), ಕೊನೆಯಲ್ಲಿ ದೀಪಕ್ ಚಾಹರ್ (31; 17ಎ) ಹಾಗೂ ಉಮೇಶ್ ಯಾದವ್ (ಔಟಾಗದೆ 20) ಅವರ ಬ್ಯಾಟಿಂಗ್‌ನಿಂದಾಗಿ ಸೋಲಿನ ಅಂತರ ತಗ್ಗಿತು.

ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿಗೆ ಈ ಪಂದ್ಯದಲ್ಲಿ ವಿಶ್ರಾಂತಿ ನೀಡಲಾಗಿತ್ತು. ಶ್ರೇಯಸ್ ಅಯ್ಯರ್ ಹಾಗೂ ಮೊಹಮ್ಮದ್ ಸಿರಾಜ್ ಕಣಕ್ಕಿಳಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 227 (ಕ್ವಿಂಟನ್ ಡಿಕಾಕ್ 68, ರಿಲಿ ರೊಸೊ ಅಜೇಯ 100, ಟ್ರಿಸ್ಟನ್ ಸ್ಟಬ್ಸ್ 24, ಡೇವಿಡ್ ಮಿಲ್ಲರ್ ಅಜೇಯ 19, ದೀಪಕ್ ಚಾಹರ್ 48ಕ್ಕೆ1, ಉಮೇಶ್ ಯಾದವ್ 34ಕ್ಕೆ1) ಭಾರತ: 18.3 ಓವರ್‌ಗಳಲ್ಲಿ 178 (ರಿಷಭ್ ಪಂತ್ 27, ದಿನೇಶ್ ಕಾರ್ತಿಕ್ 46, ದೀಪಕ್ ಚಾಹರ್ 31, ಉಮೇಶ್ ಯಾದವ್ ಔಟಾಗದೆ 20, ವೈಯ್ನ್ ಪಾರ್ನೆಲ್ 41ಕ್ಕೆ2, ಲುಂಗಿ ಗಿಡಿ 51ಕ್ಕೆ2, ಕೇಶವ್ ಮಹಾರಾಜ 34ಕ್ಕೆ2, ಡ್ವೇನ್ ಪ್ರಿಟೋರಿಯಸ್ 26ಕ್ಕೆ3) ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 49 ರನ್‌ಗಳ ಜಯ. ಪಂದ್ಯಶ್ರೇಷ್ಠ: ರೀಲಿ ರೊಸೊ. ಸರಣಿಶ್ರೇಷ್ಠ: ಸೂರ್ಯಕುಮಾರ್ ಯಾದವ್.

ಭಾರತಕ್ಕೆ 2–1ರಿಂದ ಸರಣಿ ಜಯ.

ರಿಲಿ ಶತಕ ಸಂಭ್ರಮ–ಎಎಫ್‌ಪಿ ಚಿತ್ರ

ನಾನ್‌ಸ್ಟ್ರೈಕರ್‌ಗೆ ದೀಪಕ್ 'ಜೀವದಾನ'

ದಕ್ಷಿಣ ಆಫ್ರಿಕಾ ವಿರುದ್ಧದ ಮೂರನೇ ಟಿ20 ಪಂದ್ಯದಲ್ಲಿ ನಾನ್‌ಸ್ಟ್ರೈಕರ್ ರನೌಟ್ ಮಾಡುವ ಅವಕಾಶವಿದ್ದರೂ 'ಔದಾರ್ಯ' ತೋರಿದ ಭಾರತದ ಬೌಲರ್ ದೀಪಕ್ ಚಾಹರ್ ಅವರು ಈಗ ಟೀಕೆಗಳನ್ನು ಎದುರಿಸುತ್ತಿದ್ದಾರೆ.

ಪಂದ್ಯದ 16ನೇ ಓವರ್‌ನಲ್ಲಿ ದೀಪಕ್ ಮೊದಲ ಎಸೆತ ಹಾಕುವ ಸಂದರ್ಭದಲ್ಲಿ ನಾನ್‌ಸ್ಟ್ರೈಕರ್ ಬ್ಯಾಟರ್ ಕ್ರೀಸ್‌ನಿಂದ ಹೊರಗೆ ಸಾಗಿದ್ದರು. ಇದನ್ನು ಗಮನಿಸಿದ ದೀಪಕ್ ತಟ್ಟನೆ ನಿಂತು ಚೆಂಡನ್ನು ಸ್ಟಂಪ್‌ಗೆ ತಾಗಿಸುವಂತೆ ಆ್ಯಕ್ಷನ್ ಮಾಡಿದರು ನಂತರ ಸ್ಟಬ್ಸ್‌ಗೆ 'ಮುಂದೆ ಹೀಗೆ ಮಾಡಬೇಡ' ಎಚ್ಚರಿಕೆ ನೀಡಿದರು. ಆದರೆ ಅಕ್ಟೋಬರ್ 1ರಿಂದ ಜಾರಿಯಾಗಿರುವ ನಿಯಮದ ಪ್ರಕಾರ ನಾನ್‌ಸ್ಟ್ರೈಕರ್ ರನೌಟ್ ಮಾಡಲು ಅವಕಾಶವಿದೆ. ಮೊದಲಿನಂತೆ ಇದನ್ನು 'ನ್ಯಾಯಸಮ್ಮತವಲ್ಲದ ನಡೆ' ಎಂದು ಪರಿಗಣಿಸಲಾಗುವುದಿಲ್ಲ. ಆದರೂ ದೀಪಕ್ ಹಿಂಜರಿದಿದ್ದು ಭಾರತದ ಅಭಿಮಾನಿಗಳಲ್ಲಿ ಅಸಮಾಧಾನ ಮೂಡಿಸಿದೆ. ಸ್ಟಬ್ಸ್ ಅವರು ರಿಲಿ ರೊಸೊ ಅವರೊಂದಿಗೆ ಮೂರನೇ ವಿಕೆಟ್ ಜತೆಯಾಟದಲ್ಲಿ 87 ರನ್ ಸೇರಿಸಿದರು.

ಹೋದ ತಿಂಗಳು ಲಾರ್ಡ್ಸ್‌ನಲ್ಲಿ ಮಹಿಳಾ ಕ್ರಿಕೆಟ್ ಪಂದ್ಯದಲ್ಲಿ ಇಂಗ್ಲೆಂಡ್ ಎದುರು ಭಾರತದ ದೀಪ್ತಿ ಶರ್ಮಾ ಅವರು ಬ್ಯಾಟರ್ ಚಾರ್ಲಿ ಡೀನ್ ಅವರನ್ನು ಔಟ್ ಮಾಡಿದ್ದು ಬಹಳಷ್ಟು ಚರ್ಚೆಗೆ ಗ್ರಾಸವಾಗಿತ್ತು. ಇದೀಗ ದೀಪಕ್ ಅವರ ನಡೆಯನ್ನು ದೀಪ್ತಿಯೊಂದಿಗೆ ಹೋಲಿಕೆ ಮಾಡಿ ಬಹಳಷ್ಟು ಜನರು ಟ್ವೀಟ್ ಮಾಡಿದ್ದಾರೆ.

'ದೀಪ್ತಿ ಶರ್ಮಾ ಆಗಲು ಬಹಳ ಧೈರ್ಯ ಬೇಕು. ಅದು ಎಲ್ಲರಿಗೂ ಸಾಧ್ಯವಿಲ್ಲ' ಎಂದು ಕ್ರಿಕ್‌ಪಿಡಿಯಾ ಟ್ವೀಟ್ ಮಾಡಿದೆ.

'ಐಸಿಸಿಯ ನಿಯಮಗಳ ಕುರಿತು ದೀಪಕ್ ಸರಿಯಾಗಿ ತಿಳಿದುಕೊಳ್ಳುವುದು ಒಳಿತು. ನಿಯಮಬದ್ಧವಾದ ವಿಕೆಟ್ ಗಳಿಸುವುದನ್ನು ಕಲಿಯಬೇಕು. ಬ್ಯಾಟರ್‌ಗೆ ಎಚ್ಚರಿಕೆ ಕೊಡದೇ ಔಟ್ ಮಾಡಬೇಕಿತ್ತು' ಎಂದು ಹಲವರು ಟ್ವೀಟ್ ಮಾಡಿದ್ದಾರೆ. ಇನ್ನೂ ಕೆಲವರು ದೀಪಕ್ ನಡೆಯನ್ನು ಕ್ರೀಡಾಸ್ಫೂರ್ತಿಯೆಂದೂ ಶ್ಲಾಘಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ತರೀಕೆರೆಯಲ್ಲಿ ಜಂಗಿ ಕುಸ್ತಿ ಇಂದಿನಿಂದ

ತರೀಕೆರೆ: ಪಟ್ಟಣದ ಬಯಲು ರಂಗಮಂದಿರದಲ್ಲಿ ಅ.6ರಿಂದ 8ರವರೆಗೆ ರಾಜ್ಯ ಮಟ್ಟದ ಜಂಗಿ ಕುಸ್ತಿ ಸ್ಪರ್ಧೆ ನಡೆಯಲಿದೆ.

18 ವರ್ಷ ವಯಸ್ಸಿಗೂ ಮೇಲ್ಪಟ್ಟವರು ಪಾಲ್ಗೊಳ್ಳಬಹುದಾಗಿದ್ದು, ಮುಕ್ತ ಸ್ಪರ್ಧೆ ನಡೆಯಲಿದೆ. ಪ್ರಥಮ ಬಹುಮಾನ ಬೆಳ್ಳಿಗದೆ, ದ್ವಿತೀಯ ಬಂಗಾರದ ಅಖಾಡ ಬಳೆ ಹಾಗೂ ಮಯೂರ ಕಿರೀಟ, ಸಂಗೊಳ್ಳಿ ರಾಯಣ್ಣ ಖಡ್ಗವನ್ನು ಸಮಾಧಾನಕರ ಬಹುಮಾನವಾಗಿ ನೀಡಲಾಗುವುದು ಎಂದು ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿದ ಮಾಜಿ ಶಾಸಕ ಟಿ.ಎಚ್. ಶಿವಶಂಕರಪ್ಪ ಹಾಗೂ ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ ಡಿ.ವಿ. ಪದ್ಮರಾಜು ತಿಳಿಸಿದರು.

ಶ್ರೀಕೃಷ್ಣಗೆ ವಿಶ್ವ ರೆಡ್ ಸ್ನೂಕರ್ ಕಿರೀಟ

ಕ್ವಾಲಾಲಂಪುರ, ಮಲೇಷ್ಯಾ (ಪಿಟಿಐ): ಭಾರತದ ಶ್ರೀಕೃಷ್ಣ ಸೂರ್ಯನಾರಾಯಣ್ ಅವರು ಮಂಗಳವಾರ ವಿಶ್ವ 6– ರೆಡ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದರು.

ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಶ್ರೀಕೃಷ್ಣ 5–1ರಿಂದ ಬಹ್ರೇನ್‌ನ ಹಬೀಬ್ ಸಬಾ ಅವರನ್ನು ಮಣಿಸಿದರು. ಇದು 'ಬೆಸ್ಟ್ ಆಫ್ ನೈನ್' ಫ್ರೇಮ್‌ಗಳ ಪಂದ್ಯ ಆಗಿತ್ತು.

ಕಳೆದ ಆವೃತ್ತಿಯಲ್ಲಿ ಭಾರತದ ಲಕ್ಷ್ಮಣ್ ರಾವತ್ ಪ್ರಶಸ್ತಿ ಜಯಿಸಿದ್ದರು.

ಟಿಟಿ: ಭಾರತ ಮಹಿಳಾ ತಂಡಕ್ಕೆ ಸೋಲು

ಚೆಂಗ್ಡು, ಚೀನಾ (ಪಿಟಿಐ): ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಮಹಿಳಾ ತಂಡದ ಸವಾಲು ಅಂತ್ಯವಾಗಿದೆ. ಬುಧವಾರ ನಡೆದ ಪ್ರೀ-ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತ 0–3ರಿಂದ ಚೀನಾ ತೈಪೆ ಎದುರು ಸೋತಿತು.

ಭಾರತದ ಮಣಿಕಾ ಬಾತ್ರಾ ಅವರು 7-11, 9-11, 3-11ರಿಂದ ಚೆನ್ ಜು ಯು ಎದುರು ಮಣಿದರೆ, ಶ್ರೀಜಾ ಅಕುಲಾ 8-11, 11-5 6-11, 9-11ರಿಂದ ಚೆಂಗ್ ಐ ಚೆಂಗ್ ಎದುರು ಎಡವಿದರು. ಮೂರನೇ ಸಿಂಗಲ್ಸ್ ಹಣಾಹಣಿಯಲ್ಲಿ ದಿಯಾ ಚಿತಳೆ 6-11, 11-9, 11-9, 8-11 7-11ರಿಂದ ಲಿಯು ಹಿಂಗ್ ಯಿನ್ ಎದುರು ಹೋರಾಡಿ ಸೋತರು.

ಶಿಖರ್ ಬಳಗಕ್ಕೆ ದಕ್ಷಿಣ ಆಫ್ರಿಕಾ ಸವಾಲು

ಏಕದಿನ ಕ್ರಿಕೆಟ್ ಪಂದ್ಯ ಇಂದು : ಯುವ ಆಟಗಾರರಿಗೆ ಮಿಂಚುವ ಅವಕಾಶ

ಲಖನೌ (ಪಿಟಿಐ): ಮುಂದಿನ ವರ್ಷ ಭಾರತದಲ್ಲಿಯೇ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಅವಕಾಶ ಪಡೆಯುವ ಉತ್ಸಾಹದಲ್ಲಿರುವ ಯುವಪಡೆಯು ಗುರುವಾರ ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯಲಿದೆ.

ಟಿ20 ಸರಣಿಯಲ್ಲಿ 2–1ರಿಂದ ಗೆದ್ದ ರೋಹಿತ್ ಶರ್ಮಾ ಬಳಗದ ಬಹುತೇಕ ಆಟಗಾರರು ಚುಟುಕು ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಲು ಆಸ್ಟ್ರೇಲಿಯಾಕ್ಕೆ ತೆರಳಲಿದ್ದಾರೆ. ಇದರಿಂದಾಗಿ ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ ಭಾರತ ತಂಡವನ್ನು ಎಡಗೈ ಬ್ಯಾಟರ್ ಶಿಖರ್ ಧವನ್ ಮುನ್ನಡೆಸಲಿದ್ದಾರೆ. ಟಿ20 ಸರಣಿಯಲ್ಲಿ ಆಡಿದ್ದ ದೀಪಕ್ ಚಾಹರ್, ಮೊಹಮ್ಮದ್ ಸಿರಾಜ್ ಹಾಗೂ ಶ್ರೇಯಸ್ ಅಯ್ಯರ್ ಅವರು ಈ ತಂಡದಲ್ಲಿದ್ದಾರೆ.

ಪ್ರಥಮ ದರ್ಜೆ ಹಾಗೂ ಐಪಿಎಲ್ ಪಂದ್ಯಗಳಲ್ಲಿ ಮಿಂಚಿರುವ ರಜತ್ ಪಾಟೀದಾರ್, ಮಧ್ಯಮವೇಗಿ ಮುಕೇಶ್ ಕುಮಾರ್ ಅವರಿಗೂ ಈ ಬಳಗದಲ್ಲಿ ಸ್ಥಾನ ಲಭಿಸಿದ್ದು, ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆಯ ಅವಕಾಶ ಸಿಗುವ ಸಾಧ್ಯತೆ ಇದೆ. ಇಬ್ಬರು ವಿಕೆಟ್ ಕೀಪರ್‌ಗಳಾದ ಸಂಜು ಸ್ಯಾಮ್ಸನ್ ಹಾಗೂ ಇಶಾನ್ ಕಿಶನ್ ತಂಡದಲ್ಲಿದ್ದಾರೆ. ಗಾಯಗೊಂಡಿರುವ ವೇಗಿ ಜಸ್‌ಪ್ರೀತ್ ಬೂಮ್ರಾ ಟಿ20 ವಿಶ್ವಕಪ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಆದ್ದರಿಂದ ಅವರ ಸ್ಥಾನಕ್ಕೆ ಮೊಹಮ್ಮದ್ ಶಮಿ, ಸಿರಾಜ್ ಹಾಗೂ ದೀಪಕ್ ಹೆಸರುಗಳು ಕೇಳಿಬರುತ್ತಿವೆ.

ಒಂದೊಮ್ಮೆ ಶಮಿ ಫಿಟ್‌ನೆಸ್ ಪರೀಕ್ಷೆಯಲ್ಲಿ ಪಾಸಾದರೆ ಅವರು ಆಸ್ಟ್ರೇಲಿಯಾ ವಿಮಾನ ಹತ್ತುವುದು ಬಹುತೇಕ ಖಚಿತ. ಇಲ್ಲದಿದ್ದರೆ ಉಳಿದ ಬೌಲರ್‌ಗಳ ಸೇರ್ಪಡೆಯತ್ತ ಆಯ್ಕೆ ಸಮಿತಿ ಗಮನ ಹರಿಸಲಿದೆ.

ಟಿ20 ಸರಣಿಯ ಮೂರನೇ ಪಂದ್ಯದಲ್ಲಿ ಭರ್ಜರಿ ಬ್ಯಾಟಿಂಗ್ ಹಾಗೂ ಬೌಲಿಂಗ್ ಮೂಲಕ ಗಮನ ಸೆಳೆದಿರುವ ಪ್ರವಾಸಿ ಬಳಗವು ಏಕದಿನ ಸರಣಿ ಜಯಿಸುವ ವಿಶ್ವಾಸದಲ್ಲಿದೆ. ಆತಿಥೇಯ ಬಳಗದಲ್ಲಿ ಅನುಭವಿ ಹಾಗೂ ಖ್ಯಾತನಾಮ ಆಟಗಾರರಿಲ್ಲದಿರುವುದರ ಲಾಭ ಪಡೆಯಲು ತೆಂಬಾ ಬವುಮಾ ಯೋಜನೆ ಹೆಣೆದಿದೆ. ಟಿ20 ಪಂದ್ಯದಲ್ಲಿ ಶತಕ ದಾಖಲಿಸಿರುವ ಡೇವಿಡ್ ಮಿಲ್ಲರ್, ಅನುಭವಿ ಕ್ವಿಂಟನ್ ಡಿ ಕಾಕ್, ಬೌಲರ್‌ಗಳಾದ ಕಗಿಸೊ ರಬಾಡ, ಲುಂಗಿ ಗಿಡಿ ಅವರು ಶಿಖರ್ ಬಳಗಕ್ಕೆ ಕಠಿಣ ಸವಾಲೊಡ್ಡಬಲ್ಲರು.

ಶಿಖರ್ ಧವನ್ ತಾಲೀಮು –ಪಿಟಿಐ ಚಿತ್ರ

ಬಲಾಬಲ

ಪಂದ್ಯಗಳು 87	
ಭಾರತ ಜಯ	35
ದ.ಆಫ್ರಿಕಾ ಜಯ	49
ಫಲಿತಾಂಶವಿಲ್ಲ	3

ಪಂದ್ಯ ಆರಂಭ ಮಧ್ಯಾಹ್ನ 1.30

ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಿಚ್ ರಿಪೋರ್ಟ್

ಭಾರತರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ 2020ರ ಮಾರ್ಚ್‌ನಲ್ಲಿ ನಡೆಯಬೇಕಿದ್ದ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಏಕದಿನ ಪಂದ್ಯವು ಕೋವಿಡ್ –19 ತಡೆಗೆ ಲಾಕ್‌ಡೌನ್ ಆರಂಭವಾಗಿದ್ದರಿಂದ ರದ್ದಾಗಿತ್ತು. ಅದರಿಂದಾಗಿ ಈ ಅಂಗಣದಲ್ಲಿ ಉಭಯ ತಂಡಗಳು ಇದೇ ಮೊದಲ ಬಾರಿಗೆ ಮುಖಾಮುಖಿಯಾಗಲಿವೆ. 2019ರಲ್ಲಿ ವೆಸ್ಟ್ ಇಂಡೀಸ್ ಹಾಗೂ ಅಫ್ಗಾನಿಸ್ತಾನ ತಂಡಗಳು ಮೂರು ಪಂದ್ಯಗಳನ್ನು ಇಲ್ಲಿ ಆಡಿದ್ದವು.

ಇಲ್ಲಿಯ ಪಿಚ್ ಕಪ್ಪುಮಣ್ಣಿನ ಮೇಲ್ಪದರ ಹೊಂದಿದೆ. ಬ್ಯಾಟರ್‌ಗಳಿಗೆ ಹೆಚ್ಚು ನೆರವು ನೀಡುವ ಸಾಧ್ಯತೆ ಇದೆ. ಇನಿಂಗ್ಸ್‌ನ ಆರಂಭದಲ್ಲಿ ವೇಗಿಗಳಿಗೆ ಹಾಗೂ ಕೊನೆಯಲ್ಲಿ ಸ್ಪಿನ್ನರ್‌ಗಳಿಗೆ ತುಸು ನೆರವು ಸಿಗಬಹುದು.

ಕ್ರಿಕೆಟ್: ಕರ್ನಾಟಕಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಥಿಲಾ ವಿನೋದ್ (6ಕ್ಕೆ 2) ಮತ್ತು ರೀಮಾ ಫರೀದ್ (14ಕ್ಕೆ 2) ಬೌಲಿಂಗ್ ಬಲದಿಂದ ಕರ್ನಾಟಕ ಬಾಲಕಿಯರ ಕ್ರಿಕೆಟ್ ತಂಡವು ಹೈದರಾಬಾದಿನ ರಾಜೀವಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಬಿಸಿಸಿಐ 19 ವರ್ಷದೊಳಗಿನವರ ಟಿ20 ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ವಿದರ್ಭ ಎದುರು ಜಯಿಸಿತು. ಎಂಟು ವಿಕೆಟ್‌ಗಳಿಂದ ವಿದರ್ಭ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ವಿದರ್ಭ: 20 ಓವರ್‌ಗಳಲ್ಲಿ 7ಕ್ಕೆ78 (ಸಯಾಲಿ ರಾಜೇಂದ್ರ ಶಿಂಧೆ 25, ಮಿಥಿಲಾ ವಿನೋದ್ 6ಕ್ಕೆ2, ರೀಮಾ ಫರೀದ್ 14ಕ್ಕೆ2), ಕರ್ನಾಟಕ: 17.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 79 (ವಿ ಶ್ಲೋಕಾ ಔಟಾಗದೆ 32). ಕರ್ನಾಟಕ ತಂಡಕ್ಕೆ 8 ವಿಕೆಟ್‌ಗಳ ಜಯ. ಕರ್ನಾಟಕ: 20 ಓವರ್‌ಗಳಲ್ಲಿ 1 ವಿಕೆಟ್‌ಗೆ 179 (ರೋಶಿನಿ ಕಿರಣ್ ಔಟಾಗದೆ 86, ಜಿ.ಆರ್. ಪ್ರರಣಾ 79) ಗೋವಾ: 19.3 ಓವರ್‌ಗಳಲ್ಲಿ 68 (ಸಿ.ಜೆ. ನಿರಮಿತಾ 6ಕ್ಕೆ2, ರೀಮಾ ಫರೀದ್ 11ಕ್ಕೆ3, ಬಿ.ಜಿ. ತೇಜಸ್ವಿನಿ 13ಕ್ಕೆ2) ಕರ್ನಾಟಕಕ್ಕೆ 111 ರನ್‌ಗಳ ಗೆಲುವು.

ಟಿ20 ವಿಶ್ವಕಪ್‌ಗೆ ಭಾರತದ ನಿತಿನ್ ಮೆನನ್

ದುಬೈ (ಪಿಟಿಐ): ಭಾರತದ ಅಂಪೈರ್ ನಿತಿನ್ ಮೆನನ್ ಅವರನ್ನು ಇದೇ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಕಾರ್ಯನಿರ್ವಹಿಸಲು ಆಯ್ಕೆ ಮಾಡಲಾಗಿದೆ.

ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಕಾರ್ಯನಿರ್ವಹಿಸಲು 16 ಅಂಪೈರ್‌ಗಳನ್ನು ಆಯ್ಕೆ ಮಾಡಲಾಗಿದೆ. ನಿತಿನ್ ಈಗಾಗಲೇ ಆಸ್ಟ್ರೇಲಿಯಾ ತಲುಪಿದ್ದಾರೆ.

ಅವರು ಐಸಿಸಿ ಅಂಪೈರ್‌ಗಳ ಪ್ಯಾನೆಲ್‌ನಲ್ಲಿರುವ ಏಕೈಕ ಭಾರತೀಯ ಆಗಿದ್ದಾರೆ.

ವಿಶ್ವಕಪ್ ಫುಟ್‌ಬಾಲ್: ಭಾರತ ಯುವ ತಂಡ ಪ್ರಕಟ

ಭುವನೇಶ್ವರ್ (ಪಿಟಿಐ): ಇಲ್ಲಿ ನಡೆಯಲಿರುವ ಫಿಫಾ 17 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಟೂರ್ನಿಯ ಪಂದ್ಯಗಳಿಗೆ ತಂಡವನ್ನು ಬುಧವಾರ ಘೋಷಿಸಲಾಯಿತು.

ಮುಖ್ಯ ಕೋಚ್ ಥಾಮಸ್ ಡೆನರ್ಬಿ ಅವರು 21 ಆಟಗಾರ್ತಿಯರ ತಂಡವನ್ನು ಪ್ರಕಟಿಸಿದ್ದಾರೆ. ತಂಡವು ಎ ಗುಂಪಿನಲ್ಲಿ ಆಡಲಿದೆ. ಅಮೆರಿಕ, ಮೊರಾಕ್ಕೊ ಹಾಗೂ ಬ್ರೆಜಿಲ್ ಇದೇ ಗುಂಪಿನಲ್ಲಿವೆ. ಅಕ್ಟೋಬರ್ 11ರಿಂದ ಇಲ್ಲಿಯ ಕಳಿಂಗ ಕ್ರೀಡಾಂಗಣದಲ್ಲಿ ಟೂರ್ನಿ ಆರಂಭವಾಗಲಿದೆ.

ತಂಡ: ಗೋಲ್‌ಕೀಪರ್ಸ್: ಮೊನಾಲಿಷಾದೇವಿ ಮೋರಾಂಗ್ತೆಮ್, ಮೆಲೊಡಿ ಚಾನು ಕೀಶಮ್, ಅಂಜಲಿ ಮುಂಡಾ. ಡಿಫೆಂಡರ್ಸ್: ಅಸ್ತಮ್ ಒರೆಯಾನ್, ಕಾಜಲ್, ನಕೆತಾ, ಪೂರ್ಣಿಮಾ ಕುಮಾರಿ, ವರ್ಷಿಕಾ, ಶಿಲ್ಕಿದೇವಿ ಹೆಮಮ್. ಮಿಡ್‌ಫೀಲ್ಡರ್ಸ್: ಬಬಿನಾ ದೇವಿ ಲಿಶಮ್, ನೀತು ಲಿಂಡಾ, ಶೈಲಜಾ ಶುಭಾಂಗಿ ಸಿಂಗ್. ಫಾರ್ವರ್ಡ್ಸ್: ಅನಿತಾಕುಮಾರಿ, ಲಿಂಡ್ ಕೋಮ್ ಸರ್ಟೊ, ನೇಹಾ, ರಜಿಯಾ ದೇವಿ ಲೈಶ್ರಮ್, ಶೆಲಿಯಾದೇವಿ ಲೊಕ್ಟೊಂಗ್‌ಬಮ್, ಕಾಜೊಲ್ ಹಬರ್ಟ್ ಡಿಸೋಜಾ, ಲಾವಣ್ಯ ಉಪಾಧ್ಯಾಯ, ಸುಧಾ ಅಂಕಿತಾ ಟಿರ್ಕಿ.

ಲೆಜೆಂಡ್ಸ್ ಲೀಗ್: ಇಂಡಿಯಾ ಕ್ಯಾಪಿಟಲ್ಸ್‌ಗೆ ಪ್ರಶಸ್ತಿ

ಜೈಪುರ: ಮಧ್ಯಮ ಕ್ರಮಾಂಕ ಬ್ಯಾಟರ್‌ಗಳಾದ ರಾಸ್ ಟೇಲರ್ ಹಾಗೂ ಮಿಚೆಲ್ ಜಾನ್ಸನ್ ಅವರ ಅಮೋಘ ಆಟದಿಂದಾಗಿ ಇಂಡಿಯಾ ಕ್ಯಾಪಿಟಲ್ಸ್ ತಂಡವು ಲೆಜೆಂಡ್ಸ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಜಯಿಸಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಫೈನಲ್‌ನಲ್ಲಿ ಗೌತಮ್ ಗಂಭೀರ್ ನಾಯಕತ್ವದ ಇಂಡಿಯಾ ಕಾಪಿಟಲ್ಸ್ ತಂಡವು 104 ರನ್‌ಗಳಿಂದ ಬಿಲ್ವಾರಾ ಕಿಂಗ್ಸ್ ಎದುರು ಗೆದ್ದಿತು

ಟಾಸ್ ಗೆದ್ದ ಬಿಲ್ವಾರಾ ಕಿಂಗ್ಸ್ ತಂಡದ ನಾಯಕ ಇರ್ಫಾನ್ ಪಠಾಣ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಕ್ಯಾಪಿಟಲ್ಸ್ ಪರ ನ್ಯೂಜಿಲೆಂಡ್ ಆಟಗಾರ ಟೇಲರ್ (82; 41ಎ, 4X4, 6X8) ಹಾಗೂ ಆಸ್ಟ್ರೇಲಿಯಾ ಆಲ್‌ರೌಂಡರ್ ಜಾನ್ಸನ್ (62; 35ಎ, 4X7, 6X3) ಐದನೇ ವಿಕೆಟ್ ಜೊತೆಯಾಟದಲ್ಲಿ 126 ರನ್ ಸೇರಿಸಿದರು. 15ನೇ ಓವರ್‌ನಲ್ಲಿ ಕ್ರೀಸ್‌ಗೆ ಕಾಲಿಟ್ಟ ಆ್ಯಷ್ಲೆ ನರ್ಸ್ 19 ಎಸೆತಗಳಲ್ಲಿ 42 ರನ್ ಗಳಿಸಿ ತಂಡದ ಮೊತ್ತವು ಇನ್ನೂರರ ಗಡಿ ದಾಟಲು ಕಾರಣರಾದರು. ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 211 ರನ್ ಗಳಿಸಿತು.



ರಾಸ್ ಟೇಲರ್

ಗುರಿ ಬೆನ್ನತ್ತಿದ ಬಿಲ್ವಾರಾ ಕಿಂಗ್ಸ್ ನಿರಂತರವಾಗಿ ವಿಕೆಟ್ ಕಳೆದುಕೊಂಡಿತು. 19ನೇ ಓವರ್‌ನಲ್ಲಿ 107 ರನ್‌ಗಳಿಗೆ ಎಲ್ಲ ವಿಕೆಟ್ ಕೈಚೆಲ್ಲಿ ಸೋಲೊಪ್ಪಿಕೊಂಡಿತು.

ಸಂಕ್ಷಿಪ್ತ ಸ್ಕೋರು: ಇಂಡಿಯಾ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 7ಕ್ಕೆ 211 (ರಾಸ್ ಟೇಲರ್ 82, ಮಿಚೆಲ್ ಜಾನ್ಸನ್ 62, ಆ್ಯಷ್ಲೆ ನರ್ಸ್ ಔಟಾಗದೆ 42, ರಾಹುಲ್ ಶರ್ಮಾ 30ಕ್ಕೆ4, ಮಾಂಟಿ ಪನೇಸರ್ 13ಕ್ಕೆ2, ಟಿಮ್ ಬ್ರೆಸ್ನನ್ 11ಕ್ಕೆ1) ಬಿಲ್ವಾರಾ ಕಿಂಗ್ಸ್: 18.2 ಓವರ್‌ಗಳಲ್ಲಿ 107 (ಶೇನ್ ವಾಟ್ಸನ್ 27, ಜೆಸಲ್ ಕೈರಾ 22, ಶ್ರೀಶಾಂತ್ ಔಟಾಗದೆ 13; ಪವನ್ ಸುಯಲ್ 27ಕ್ಕೆ 2, ಪ್ರವೀಣ್ ತಾಂಬೆ 19ಕ್ಕೆ 2, ಪಂಕಜ್ ಸಿಂಗ್ 14ಕ್ಕೆ 2). ಫಲಿತಾಂಶ: ಇಂಡಿಯಾ ಕ್ಯಾಪಿಟಲ್ಸ್‌ಗೆ 104 ರನ್‌ಗಳ ಜಯ ಮತ್ತು ಪ್ರಶಸ್ತಿ.

ಕರ್ನಾಟಕ ತಂಡ: ಕಸ್ತೂರಿ, ಮಹಾಲಕ್ಷ್ಮಿ (ಕೋಚ್‌ಗಳು), ರೋನಿತ್ ಎಂ, ಗಗನಾ ಸತೀಶ್, ಖುಷಿ ಸುಧೀರ್, ಅನನ್ಯಾ ತಾರಕೇಶ್, ಆರ್ವಿ ವಿಶ್ವನಾಥ್, ಆಶ್ಲೇಷಾ ಮೂಡಬಿದ್ರಿ, ಆದಿತ್ಯ ರಾಜು ಮತ್ತು ಭುವನ್ ಎಂ.

ಕರ್ನಾಟಕ ಕರಾಟೆ ಪಟುಗಳಿಗೆ 9 ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಕರಾಟೆಪಟುಗಳು ಜೆಕ್ ಗಣರಾಜ್ಯದ ಪ್ರಾಗ್‌ನಲ್ಲಿ ಇತ್ತೀಚೆಗೆ ನಡೆದ ಎಸ್‌ಕೆಡಿಯುಎನ್ ಕರಾಟೆ ಶೋಟೊಕಾನ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೂರು ಬೆಳ್ಳಿ ಮತ್ತು ಆರು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಭಾರತ ತಂಡಕ್ಕೆ ಒಟ್ಟು 1 ಚಿನ್ನ, ಮೂರು ಬೆಳ್ಳಿ ಮತ್ತು 10 ಕಂಚಿನ ಪದಕಗಳು ಒಲಿದಿವೆ.

54 ದೇಶಗಳಿಂದ 10ರಿಂದ 32 ವರ್ಷದೊಳಗಿನ ಸ್ಪರ್ಧಿಗಳು ಈ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದರು.

ಲೈಂಗಿಕ ಸಮಸ್ಯೆ

ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.

ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ.

8006973372
7506062785